सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ರಾಷ್ಟ್ರೀಯ ಭದ್ರತಾ ಪಡೆ ಅಧಿನಿಯಮ, 1986

(1986ರ ಅಧಿನಿಯಮ ಸಂಖ್ಯೆ 47)

[ನವೆಂಬರ್ 11, 2021 ರಂದು ಇದ್ದಂತೆ]

# THE NATIONAL SECURITY GUARD ACT, 1986

**(Act No. 47 OF 1986)**

**[As on 11th November 2021]**

# ಮುನ್ನುಡಿ

ದಿ ನ್ಯಾಷನಲ್ ಸೆಕ್ಯುರಿಟಿ ಗಾರ್ಡ್ ಆ್ಯಕ್ಟ್, 1986 (ಆ್ಯಕ್ಟ್ ನಂ.47 ಆಫ್ 1986) – ಇದಕ್ಕೆ ದಿನಾಂಕ: 17.08.2021 ರಂದು ಭಾರತದ ಘನತೆವೆತ್ತ ರಾಷ್ಟ್ರಪತಿಗಳ ಅನುಮೋದನೆ ದೊರೆತಿದ್ದು, ಇದರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ ಮತ್ತು ಇದನ್ನು ದಿನಾಂಕ:11-11-2021 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 51ನೇ ಸಂಪುಟದ, 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 56 ರಿಂದ 103 ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಕನ್ನಡದ ಈ ಪಾಠವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಪ್ರಕಟಿಸಲಾಗಿತ್ತು. ಅಂಥ ಪ್ರಕಟಣೆಯ ತರುವಾಯ ಇದು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವಾಗಿರುತ್ತದೆ.

ನವದೆಹಲಿ

ಡಾ. ರೀಟಾ ವಸಿಷ್ಠ
ಕಾರ್ಯದರ್ಶಿ
ಭಾರತ ಸರ್ಕಾರ

# PREFACE

This edition of THE NATIONAL SECURITY GUARD ACT, 1986 (ACT NO. 47 OF 1986) which has been approved by His Excellency the President of India on 17.08.2021 contains the authoritative text of that Act in Kannada and it was published in the Gazette of India Extraordinary, Part IX, Section 1, No.1, Vol.51, dated 11-11-2021 from pages 56 to 103.

This Kannada Text was published under the authority of the President under clause (a) of Section 2 of the Authoritative Texts (Central Laws) Act, 1973 and on such publication it became the authoritative text of that Act in Kannada.

New Delhi

Dr. Reeta Vasishta
Secretary
Government of India

# ರಾಷ್ಟ್ರೀಯ ಭದ್ರತಾ ಪಡೆ ಅಧಿನಿಯಮ, 1986

## ಪ್ರಕರಣಗಳ ಅನುಕ್ರಮಣಿಕೆ

ಪ್ರಕರಣಗಳು :


### ಅಧ್ಯಾಯ I

### ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಗಳು

### ಅಧ್ಯಾಯ II

### ಭದ್ರತಾ ಪಡೆಯ ಸ್ಥಾಪನೆ ಮತ್ತು ಭದ್ರತಾ ಪಡೆಯ ಸದಸ್ಯರ ಸೇವಾ ಷರತ್ತುಗಳು

4. ಭದ್ರತಾ ಪಡೆಯ ಸ್ಥಾಪನೆ
5. ನಿಯಂತ್ರಣ, ನಿರ್ದೇಶನ ಇತ್ಯಾದಿ
6. ಭಾರತದ ಹೊರಗೆ ಸೇವೆ ಸಲ್ಲಿಸುವ ಹೊಣೆಗಾರಿಕೆ
7. ಹುದ್ದೆಗೆ ರಾಜೀನಾಮೆ ಮತ್ತು ಅದರಿಂದ ಹಿಂದೆ ಸರಿಯುವುದು
8. ಈ ಅಧಿನಿಯಮದ ಮೇರೆಗಿನ ಸೇವಾ ಅವಧಿ
9. ಕೇಂದ್ರ ಸರ್ಕಾರವು ಸೇವೆಯನ್ನು ಕೊನೆಗೊಳಿಸುವುದು
10. ಮಹಾ ನಿರ್ದೇಶಕನು ಮತ್ತು ಇತರೆ ಅಧಿಕಾರಿಗಳು ಯಾರೇ ವ್ಯಕ್ತಿಯನ್ನು ವಜಾ ಮಾಡುವುದು, ತೆಗೆದುಹಾಕುವುದು ಅಥವಾ ಆತನ ದರ್ಜೆಯನ್ನು ಇಳಿಸುವುದು
11. ಸೇವೆಯನ್ನು ಕೊನೆಗೊಳಿಸಿರುವ ಬಗ್ಗೆ ಪ್ರಮಾಣಪತ್ರ
12. ಸಂಘಗಳನ್ನು ರಚಿಸುವ ಹಕ್ಕು, ವಾಕ್ ಸ್ವಾತಂತ್ರ್ಯ, ಇತ್ಯಾದಿಗಳ ಸಂಬಂಧದಲ್ಲಿ ನಿರ್ಬಂಧಗಳು
13. ಅಧಿಕಾರಿಗಳನ್ನು ಹೊರತುಪಡಿಸಿ ಇತರ ಬಾಧಿತ ವ್ಯಕ್ತಿಗಳಿಗೆ ಪರಿಹಾರೋಪಾಯ
14. ಬಾಧಿತ ಅಧಿಕಾರಿಗಳಿಗೆ ಪರಿಹಾರ

### ಅಧ್ಯಾಯ III

### ಅಪರಾಧಗಳು

15. ಒಕ್ಕೂಟದ ವಿರುದ್ಧ ಬಂಡೆದ್ದಿರುವ ಭಯೋತ್ಪಾದಕರಿಗೆ ಮತ್ತು ಇತರ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಮರಣದಂಡನೆಯಿಂದ ದಂಡಿತವಾಗುವ ಅಪರಾಧಗಳು
16. ಇತರೆ ವೇಳೆಗಳಿಗಿಂತ ಸಕ್ರಿಯ ಕರ್ತವ್ಯದ ಮೇಲಿರುವಾಗ ಮಾಡಿದ ಅಪರಾಧಗಳಿಗಾಗಿ ತೀವ್ರ ದಂಡನೆ
17. ದಂಗೆ
18. ತ್ಯಜಿಸುವುದು ಅಥವಾ ತ್ಯಜಿಸಲು ನೆರವಾಗುವುದು
19. ಅನುಮತಿಯಿಲ್ಲದೆ ಗೈರು ಹಾಜರಿ
20. ಮೇಲಧಿಕಾರಿಗೆ ಹೊಡೆಯುವುದು ಅಥವಾ ಬೆದರಿಕೆ ಹಾಕುವುದು

21. ಮೇಲಧಿಕಾರಿಗೆ ಅವಿಧೇಯತೆಯನ್ನು ತೋರಿಸುವುದು
22. ಹಲ್ಲೆ ಮಾಡುವುದು ಮತ್ತು ಅಡ್ಡಿಪಡಿಸುವುದು
23. ಅಗೌರವ ನಡತೆಯ ಕೆಲವು ರೀತಿಗಳು
24. ಅಧೀನ ನೌಕರನಿಗೆ ತೊಂದರೆ ಕೊಡುವುದು
25. ಪಾನಮತ್ತತೆ
26. ಅಭಿರಕ್ಷೆಯಲ್ಲಿರುವ ವ್ಯಕ್ತಿಯು ತಪ್ಪಿಸಿಕೊಳ್ಳಲು ಅನುಮತಿಸುವುದು
27. ದಸ್ತಗಿರಿಗೆ ಅಥವಾ ಬಂಧನಕ್ಕೆ ಸಂಬಂಧಿಸಿದಂತೆ ಅಕ್ರಮಗಳು
28. ಅಭಿರಕ್ಷೆಯಿಂದ ತಪ್ಪಿಸಿಕೊಳ್ಳುವುದು
29. ಸ್ವತ್ತಿನ ಸಂಬಂಧದಲ್ಲಿನ ಅಪರಾಧಗಳು
30. ಬಲಾದ್ಗ್ರಹಣ ಮತ್ತು ಸುಲಿಗೆ
31. ಸಾಧನ ಸಾಮಗ್ರಿಗಳೊಂದಿಗೆ ಓಡಿ ಹೋಗುವುದು
32. ಸ್ವತ್ತಿಗೆ ಹಾನಿ ಮಾಡುವುದು
33. ಸುಳ್ಳು ಆಪಾದನೆಗಳು
34. ಸರ್ಕಾರಿ ದಸ್ತಾವೇಜುಗಳಲ್ಲಿ ಸುಳ್ಳು ನಿರೂಪಣೆ ಮಾಡುವುದು ಮತ್ತು ಸುಳ್ಳು ಘೋಷಣೆ ನೀಡುವುದು
35. ನೇಮಕದ ಸಮಯದಲ್ಲಿ ಸುಳ್ಳು ಘೋಷಣೆ
36 ಭದ್ರತಾ ಪಡೆ ನ್ಯಾಯಾಲಯಕ್ಕೆ ಸಂಬಂಧಿಸಿದ ಅಪರಾಧಗಳು
37. ಸುಳ್ಳು ಸಾಕ್ಷ್ಯ
38. ವೇತನವನ್ನು ಕಾನೂನುಬಾಹಿರವಾಗಿ ತಡೆಹಿಡಿದಿಡುವುದು
39. ತಕ್ಕುದಲ್ಲದ ನಡತೆ
40. ಸುವ್ಯವಸ್ಥೆ ಮತ್ತು ಶಿಸ್ತಿನ ಉಲ್ಲಂಘನೆ
41. ಸಂಕೀರ್ಣ ಅಪರಾಧಗಳು
42. ಪ್ರಯತ್ನಿಸುವುದು
43. ಮಾಡಲಾದ ಅಪರಾಧಗಳಿಗೆ ದುಷ್ಪ್ರೇರಣೆ
44. ಮಾಡದೇ ಇರುವ ಅಪರಾಧಗಳಿಗೆ ದುಷ್ಪ್ರೇರಣೆ
45. ಸಿವಿಲ್ ಅಪರಾಧಗಳು
46. ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಗೊಳಪಡದ ಸಿವಿಲ್ ಅಪರಾಧಗಳು

## ಅಧ್ಯಾಯ IV

## ದಂಡನೆಗಳು

47. ಭದ್ರತಾಪಡೆ ನ್ಯಾಯಾಲಯಗಳು ವಿಧಿಸಬಹುದಾದ ದಂಡನೆಗಳು
48. ಭದ್ರತಾ ಪಡೆ ನ್ಯಾಯಾಲಯಗಳು ನೀಡಬಹುದಾದ ಪರ್ಯಾಯ ದಂಡನೆಗಳು
49. ದಂಡನೆಗಳ ಸಂಯೋಜನೆ
50. ಭದ್ರತಾ ಪಡೆ ನ್ಯಾಯಾಲಯಗಳಿಂದಲ್ಲದೆ ಅನ್ಯಥಾ ವಿಧಿಸಬಹುದಾದ ದಂಡನೆಗಳು
51. ಲಘು ದಂಡನೆಗಳು
52. 51ನೇ ಪ್ರಕರಣದ ಮೇರೆಗೆ ದಂಡನೆಗಳ ಪರಿಮಿತಿ

53. ಇನ್‌ಸ್ಪೆಕ್ಟರ್ ಜನರಲ್ಲರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗಳು, ಸ್ಕ್ವಾಡ್ರನ್ ಕಮಾಂಡರುಗಳ ದರ್ಜೆಯ ಅಧಿಕಾರಿಗಳಿಗೆ ಅಥವಾ ಅವರಿಗಿಂತ ಕಡಿಮೆ ದರ್ಜೆಯ ಅಧಿಕಾರಿಗಳಿಗೆ ದಂಡನೆ ವಿಧಿಸುವುದು

54. ಸಹಾಯಕ ಕಮಾಂಡರನ ದರ್ಜೆಯ ವ್ಯಕ್ತಿಗಳಿಗೆ ದಂಡನೆ

## ಅಧ್ಯಾಯ V

### ದಸ್ತಗಿರಿ ಮತ್ತು ಅಧಿವಿಚಾರಣೆ ಮಾಡುವುದಕ್ಕೆ ಮುಂಚೆ ವ್ಯವಹರಣೆಗಳು

55. ಅಪರಾಧಿಗಳ ಅಭಿರಕ್ಷೆ

56. ತಡೆಹಿಡಿದಿರಿಸುವುದಕ್ಕೆ ಸಂಬಂಧಿಸಿದಂತೆ ಕಮಾಂಡರನ ಕರ್ತವ್ಯ

57. ಒಪ್ಪಿಸುವಿಕೆಯ ಮತ್ತು ಅಧಿವಿಚಾರಣೆಯ ನಡುವಿನ ಅಂತರ

58. ಸಿವಿಲ್ ಅಧಿಕಾರಿಗಳಿಂದ ದಸ್ತಗಿರಿ

59. ತ್ಯಜಿಸಿ ಹೋದವರನ್ನು ಸೆರೆಹಿಡಿಯುವುದು

60. ಅನುಮತಿ ಇಲ್ಲದೆ ಗೈರು ಹಾಜರಾದ ಬಗ್ಗೆ ವಿಚಾರಣೆ

## ಅಧ್ಯಾಯ VI

### ಭದ್ರತಾ ಪಡೆ ನ್ಯಾಯಾಲಯಗಳು

61. ಭದ್ರತಾ ಪಡೆ ನ್ಯಾಯಾಲಯಗಳ ವಿಧಗಳು

62. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವನ್ನು ಸಮಾವೇಶಗೊಳಿಸಲು ಅಧಿಕಾರ

63. ಭದ್ರತಾ ಪಡೆ ಲಘು ನ್ಯಾಯಾಲಯವನ್ನು ಸಮಾವೇಶಗೊಳಿಸಲು ಅಧಿಕಾರ

64. 62ನೇ ಮತ್ತು 63ನೇ ಪ್ರಕರಣಗಳ ಮೇರೆಗೆ ಹೊರಡಿಸಿದ ವಾರಂಟುಗಳ ಒಳಾಂಶಗಳು

65. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ರಚನೆ

66. ಭದ್ರತಾ ಪಡೆಯ ಲಘು ನ್ಯಾಯಾಲಯದ ರಚನೆ

67. ಭದ್ರತಾ ಪಡೆಯ ಕ್ಷಿಪ್ರ ನ್ಯಾಯಾಲಯ

68. ಭದ್ರತಾ ಪಡೆ ನ್ಯಾಯಾಲಯದ ವಿಸರ್ಜನೆ

69. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ಅಧಿಕಾರಗಳು

70. ಭದ್ರತಾ ಪಡೆ ಲಘು ನ್ಯಾಯಾಲಯದ ಅಧಿಕಾರಗಳು

71. ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ಅಧಿಕಾರಗಳು

72. ಪುನಃ ಅಧಿವಿಚಾರಣೆಗೆ ನಿಷೇಧ

73. ಅಧಿವಿಚಾರಣೆಗಾಗಿ ಕಾಲ ಪರಿಮಿತಿ

74. ಅಪರಾಧಿಯು ಈ ಅಧಿನಿಯಮಕ್ಕೊಳಪಟ್ಟಿರುವುದು ನಿಂತುಹೋದಾಗ ಅಧಿವಿಚಾರಣೆ, ಇತ್ಯಾದಿ

75. ಶಿಕ್ಷೆಯ ಅವಧಿಯಲ್ಲಿ ಅಧಿನಿಯಮದ ಅನ್ವಯ

76. ಅಧಿವಿಚಾರಣೆಯ ಸ್ಥಳ

77. ಕ್ರಿಮಿನಲ್ ನ್ಯಾಯಾಲಯ ಮತ್ತು ಭದ್ರತಾ ಪಡೆ ನ್ಯಾಯಾಲಯದ ನಡುವೆ ಆಯ್ಕೆ

78. ಅಪರಾಧಿಯನ್ನು ಒಪ್ಪಿಸುವಂತೆ ಅಗತ್ಯಪಡಿಸುವುದಕ್ಕೆ ಕ್ರಿಮಿನಲ್ ನ್ಯಾಯಾಲಯದ ಅಧಿಕಾರ

## ಅಧ್ಯಾಯ VII

### ಭದ್ರತಾ ಪಡೆ ನ್ಯಾಯಾಲಯಗಳ ಪ್ರಕ್ರಿಯೆ

79. ಪೀಠಾಸೀನ ಅಧಿಕಾರಿ
80. ಜಡ್ಜ್ ಅಟಾರ್ನಿಗಳು, ಇತ್ಯಾದಿ
81. ಆಕ್ಷೇಪಣೆಗಳು
82. ಸದಸ್ಯರ, ಜಡ್ಜ್ ಅಟಾರ್ನಿಯ ಮತ್ತು ಸಾಕ್ಷಿದಾರರ ಪ್ರಮಾಣಗಳು
83. ಸದಸ್ಯರುಗಳಿಂದ ಮತದಾನ
84. ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ಸಾಮಾನ್ಯ ನಿಯಮ
85. ನ್ಯಾಯಿಕ ಗಮನ
86. ಸಾಕ್ಷಿಗಳನ್ನು ಸಮನು ಮಾಡುವುದು
87. ದಸ್ತಾವೇಜುಗಳನ್ನು ಹಾಜರುಪಡಿಸುವುದರಿಂದ ವಿನಾಯಿತಿ
88. ಸಾಕ್ಷಿದಾರರ ಪರೀಕ್ಷೆಗಾಗಿ ಕಮೀಷನುಗಳು
89. ಕಮಿಷನ್ ಹೊರಡಿಸುವ ಮೂಲಕ ಸಾಕ್ಷಿದಾರನ ವಿಚಾರಣೆ
90. ಆರೋಪಿಸಲಾಗಿರದ ಅಪರಾಧದ ಅಪರಾಧ ನಿರ್ಣಯ
91. ಸಹಿಗಳ ಬಗ್ಗೆ ಪೂರ್ವಭಾವನೆ
92. ನೇಮಕದ ಪತ್ರ
93. ಕೆಲವು ದಸ್ತಾವೇಜುಗಳ ಬಗ್ಗೆ ಪೂರ್ವಭಾವನೆ
94. ಆಪಾದಿತನಿಂದ ಸರ್ಕಾರಿ ಅಧಿಕಾರಿಗೆ ಉಲ್ಲೇಖ
95. ಹಿಂದಿನ ಅಪರಾಧ ನಿರ್ಣಯಗಳ ಮತ್ತು ಸಾಮಾನ್ಯ ಚಾರಿತ್ರ್ಯದ ಬಗೆಗಿನ ಸಾಕ್ಷ್ಯ
96. ಆಪಾದಿತನ ಮನೋವಿಕಲತೆ
97. ಮನೋವಿಕಲ ಆಪಾದಿತನು ಅಧಿವಿಚಾರಣೆಗೆ ತರುವಾಯದಲ್ಲಿ ಯೋಗ್ಯನಾಗುವುದು
98. 97ನೇ ಪ್ರಕರಣದ ಮೇರೆಗೆ ಮಾಡಿದ ಆದೇಶಗಳನ್ನು ಕೇಂದ್ರ ಸರ್ಕಾರಕ್ಕೆ ರವಾನಿಸುವುದು
99. ಮನೋವಿಕಲ ಆಪಾದಿತನ ಬಿಡುಗಡೆ
100. ಮನೋವಿಕಲ ಆಪಾದಿತನನ್ನು ಅವನ ಸಂಬಂಧಿಗಳಿಗೆ ಒಪ್ಪಿಸುವುದು
101. ಅಧಿವಿಚಾರಣೆ ಇತ್ಯರ್ಥದಲ್ಲಿರುವಾಗ ಸ್ವತ್ತಿನ ಅಭಿರಕ್ಷೆಗೆ ಮತ್ತು ವಿಲೆಗೆ ಆದೇಶ
102. ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಅಪರಾಧವನ್ನು ಮಾಡಲಾಗಿದೆಯೋ ಆ ಸ್ವತ್ತಿನ ವಿಲೆಗೆ ಆದೇಶ
103. ಅಧಿನಿಯಮದ ಮೇರೆಗಿನ ವ್ಯವಹರಣೆಗಳ ಸಂಬಂಧದಲ್ಲಿ ಭದ್ರತಾ ಪಡೆ ನ್ಯಾಯಾಲಯದ ಅಧಿಕಾರಗಳು

## ಅಧ್ಯಾಯ VIII

### ಸ್ಥಿರೀಕರಣ ಮತ್ತು ಪುನರೀಕ್ಷಣೆ

104. ನಿರ್ಣಯ ಮತ್ತು ಶಿಕ್ಷೆಯು ಸ್ಥಿರೀಕೃತವಾದ ಹೊರತು ಸಿಂಧುವಾಗದಿರುವುದು
105. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ನಿರ್ಣಯವನ್ನು ಮತ್ತು ಶಿಕ್ಷೆಯನ್ನು ಸ್ಥಿರೀಕರಿಸುವ ಅಧಿಕಾರ

106. ಭದ್ರತಾ ಪಡೆ ಲಘು ನ್ಯಾಯಾಲಯದ ನಿರ್ಣಯ ಮತ್ತು ಶಿಕ್ಷೆಯನ್ನು ಸ್ಥಿರೀಕರಿಸುವ ಅಧಿಕಾರ
107. ಸ್ಥಿರೀಕರಿಸುವ ಪ್ರಾಧಿಕಾರದ ಅಧಿಕಾರಗಳ ಮೇಲೆ ಪರಿಮಿತಿ
108. ಶಿಕ್ಷೆಗಳನ್ನು ಕಡಿಮೆ ಮಾಡುವುದಕ್ಕೆ, ಮಾಫಿ ಮಾಡುವುದಕ್ಕೆ ಅಥವಾ ಪರಿವರ್ತಿಸುವುದಕ್ಕೆ ಸ್ಥಿರೀಕರಿಸುವ ಪ್ರಾಧಿಕಾರದ ಅಧಿಕಾರ
109. ನಿರ್ಣಯದ ಅಥವಾ ಶಿಕ್ಷೆಯ ಪುನರೀಕ್ಷಣೆ
110. ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ನಿರ್ಣಯ ಮತ್ತು ಶಿಕ್ಷೆ
111. ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ವ್ಯವಹರಣೆಗಳ ರವಾನೆ
112. ಕೆಲವು ಸಂದರ್ಭಗಳಲ್ಲಿ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಬದಲಾಯಿಸುವುದು
113. ಭದ್ರತಾ ಪಡೆ ನ್ಯಾಯಾಲಯದ ಆದೇಶದ, ನಿರ್ಣಯದ ಅಥವಾ ಶಿಕ್ಷೆಯ ಸಂಬಂಧದಲ್ಲಿ ಪರಿಹಾರ
114. ವ್ಯವಹರಣೆಗಳನ್ನು ರದ್ದುಗೊಳಿಸುವುದು

## ಅಧ್ಯಾಯ IX

### ಶಿಕ್ಷೆಯನ್ನು ಜಾರಿಗೊಳಿಸುವುದು, ಕ್ಷಮಾದಾನ, ಮಾಫಿ, ಇತ್ಯಾದಿ

115. ಮರಣ ದಂಡನೆಯ ರೀತಿ
116. ಕಾರಾವಾಸದ ಶಿಕ್ಷೆಯ ಪ್ರಾರಂಭ
117. ಕಾರಾವಾಸ ಶಿಕ್ಷೆಯನ್ನು ಜಾರಿಗೊಳಿಸುವುದು
118. ಅಪರಾಧಿಯ ತಾತ್ಕಾಲಿಕ ಅಭಿರಕ್ಷೆ
119. ವಿಶೇಷ ಸಂದರ್ಭಗಳಲ್ಲಿ ಕಾರಾವಾಸ ಶಿಕ್ಷೆಯನ್ನು ಕಾರ್ಯಗತಗೊಳಿಸುವುದು
120. ಸ್ಥಳದಿಂದ ಸ್ಥಳಕ್ಕೆ ಕೈದಿಯನ್ನು ಸಾಗಿಸುವುದು
121. ಕೆಲವು ಆದೇಶಗಳನ್ನು ಕಾರಾಗೃಹ ಅಧಿಕಾರಿಗಳಿಗೆ ತಿಳಿಸುವುದು
122. ಜುಲ್ಮಾನೆಯ ಶಿಕ್ಷೆಯನ್ನು ಕಾರ್ಯಗತಗೊಳಿಸುವುದು
123. ಆದೇಶ ಅಥವಾ ವಾರಂಟಿನಲ್ಲಿನ ಅನೌಪಚಾರಿಕತೆ ಅಥವಾ ತಪ್ಪು
124. ಕ್ಷಮೆ ಮತ್ತು ಮಾಫಿ
125. ಷರತ್ತು ಪೂರ್ವಕ ಕ್ಷಮೆಯನ್ನು, ಪೆರೋಲಿನ ಮೇಲಿನ ಬಿಡುಗಡೆಯನ್ನು ಅಥವಾ ಮಾಫಿಯನ್ನು ರದ್ದುಪಡಿಸುವುದು
126. ಕಾರಾವಾಸ ಶಿಕ್ಷೆಯ ಅಮಾನತ್ತು
127. ಅಮಾನತ್ತು ಇತ್ಯರ್ಥದಲ್ಲಿರುವಾಗ ಆದೇಶಗಳು
128. ಅಮಾನತ್ತಿನ ಮೇಲಿರುವಾಗ ಬಿಡುಗಡೆ
129. ಅಮಾನತ್ತಿನ ಅವಧಿಯನ್ನು ಲೆಕ್ಕಹಾಕುವುದು
130. ಅಮಾನತ್ತಿನ ನಂತರದ ಆದೇಶ
131. ಅಮಾನತ್ತಿನ ನಂತರ ಪ್ರಕರಣದ ಪುನರ್ ಪರಿಶೀಲನೆ
132. ಅಮಾನತ್ತಿನ ನಂತರ ಹೊಸ ಶಿಕ್ಷೆ
133. ಅಮಾನತ್ತಿನಲ್ಲಿಡುವ ಅಧಿಕಾರದ ವ್ಯಾಪ್ತಿ
134. ವಜಾ ಮಾಡಿದ ಮೇಲೆ ಅಮಾನತ್ತಿನ ಮತ್ತು ಮಾಫಿಯ ಪರಿಣಾಮ

## ಅಧ್ಯಾಯ X

### ಸಂಕೀರ್ಣ


135. ದರ್ಜೆಯ ರಚನೆ

136. ವೇತನ ಮತ್ತು ಭತ್ಯೆಗಳಿಂದ ಕಡಿತ

137. ಭದ್ರತಾ ಪಡೆ ಸದಸ್ಯರಿಗೆ ಪ್ರದಾನ ಮಾಡಬಹುದಾದ ಅಧಿಕಾರಗಳು ಮತ್ತು ವಿಧಿಸಬಹುದಾದ ಕರ್ತವ್ಯಗಳು

138. ಭದ್ರತಾ ಪಡೆ ಸದಸ್ಯರ ಕಾರ್ಯಗಳಿಗೆ ರಕ್ಷಣೆ

139. ನಿಯಮಗಳನ್ನು ರಚಿಸಲು ಅಧಿಕಾರ

140. ಈಗ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಭದ್ರತಾ ಪಡೆಗೆ ಸಂಬಂಧಿಸಿದ ಉಪಬಂಧಗಳು

## ರಾಷ್ಟ್ರೀಯ ಭದ್ರತಾ ಪಡೆ ಅಧಿನಿಯಮ, 1986

### (1986ರ ಅಧಿನಿಯಮ ಸಂಖ್ಯೆ 47)

[22ನೇ ಸೆಪ್ಟೆಂಬರ್, 1986.]

ಆಂತರಿಕ ಗಲಭೆಗಳ ವಿರುದ್ಧ ರಾಜ್ಯಗಳನ್ನು ರಕ್ಷಿಸುವ ದೃಷ್ಟಿಯಿಂದ ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಮಾಡುವುದಕ್ಕಾಗಿ ಕೇಂದ್ರ ಸಶಸ್ತ್ರ ಬಲಗಳ ಸ್ಥಾಪನೆಗಾಗಿ ಮತ್ತು ವಿನಿಯಮನಕ್ಕಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಅದು ಭಾರತ ಗಣರಾಜ್ಯದ ಮೂವತ್ತೇಳನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ I

### ಪ್ರಾರಂಭಿಕ

1. **ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ರಾಷ್ಟ್ರೀಯ ಭದ್ರತಾ ಪಡೆ ಅಧಿನಿಯಮ, 1986 ಎಂದು ಕರೆಯತಕ್ಕದ್ದು.

(2) ಅದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ *ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯ ಸಂಬಂಧದಲ್ಲಿ "ಸಕ್ರಿಯ ಕರ್ತವ್ಯ" ಎಂದರೆ,-

(i) ಭಯೋತ್ಪಾದಕರ ಅಥವಾ ಒಕ್ಕೂಟದ ವಿರುದ್ಧ ಬಂಡೆದ್ದ ಯಾರೇ ವ್ಯಕ್ತಿಯ ವಿರುದ್ಧದ ಕಾರ್ಯಾಚರಣೆಗಳಲ್ಲಿ ನಿರತವಾಗಿರುವ; ಅಥವಾ

(ii) ಪಿಕಟನ್ನು ನಡೆಸುತ್ತಿರುವ ಅಥವಾ ಭಯೋತ್ಪಾದಕ ಚಟುವಟಿಕೆಯನ್ನು ನಿಗ್ರಹಿಸುವುದಕ್ಕೆ ಸಂಬಂಧಿಸಿದಂತೆ ಗಸ್ತಿನಲ್ಲಿ ಅಥವಾ ಇತರೆ ಕರ್ತವ್ಯದಲ್ಲಿ ನಿರತವಾಗಿರುವ

---

* ದಿನಾಂಕ: ಅಕ್ಟೋಬರ್ 16, 1986 ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ 737 (ಇ) ದಿನಾಂಕ: 16-10-1986 ಭಾರತದ ವಿಶೇಷ ಗೆಜೆಟ್ ಭಾಗ II ನೋಡಿ.

– ಭದ್ರತಾ ಪಡೆಯ ಘಟಕಕ್ಕೆ ಯಾವ ಅವಧಿಯಲ್ಲಿ ಅಂಥ ವ್ಯಕ್ತಿಯು ಸೇರಿರುವನೋ ಅಥವಾ ಅದರ ಭಾಗವಾಗಿರುವನೋ ಆ ಅವಧಿಯಲ್ಲಿ ಭದ್ರತಾ ಪಡೆಯ ಸದಸ್ಯನಾಗಿ ನಿರ್ವಹಿಸುವ ಯಾವುದೇ ಕರ್ತವ್ಯ ಎಂದು ಅರ್ಥ.

(ಬಿ) "ಸಹಾಯಕ ಕಮಾಂಡರ್" ಎಂದರೆ, ಸಹಾಯಕ ಕಮಾಂಡರ್ ಗ್ರೇಡ್ I, ಸಹಾಯಕ ಕಮಾಂಡರ್ ಗ್ರೇಡ್ II ಅಥವಾ ಸಹಾಯಕ ಕಮಾಂಡರ್ ಗ್ರೇಡ್ III ಆಗಿ ನೇಮಕಗೊಂಡ ಅಥವಾ ಆ ವೇತನದಲ್ಲಿರುವ ವ್ಯಕ್ತಿ ಎಂದು ಅರ್ಥ;

(ಸಿ) "ಸಿವಿಲ್ ಅಪರಾಧ" ಎಂದರೆ, ಕ್ರಿಮಿನಲ್ ನ್ಯಾಯಾಲಯವು ಅಥವಾ ಕ್ರಿಮಿನಲ್ ಕಾನೂನು ತಿದ್ದುಪಡಿ ಅಧಿನಿಯಮ, 1952 (1952ರ 46)ರ ಮೇರೆಗೆ ನೇಮಕಗೊಂಡ ವಿಶೇಷ ನ್ಯಾಯಾಧೀಶನು ಅಧಿವಿಚಾರಣೆ ಮಾಡಬಹುದಾದಂಥ ಅಪರಾಧ ಎಂದು ಅರ್ಥ;

(ಡಿ) "ಸಿವಿಲ್ ಕಾರಾಗೃಹ" ಎಂದರೆ, ಕಾರಾಗೃಹಗಳ ಅಧಿನಿಯಮ, 1894 (1894ರ 9)ರ ಮೇರೆಗೆ, ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಮೇರೆಗೆ ಯಾರೇ ಕ್ರಿಮಿನಲ್ ಬಂದಿಯನ್ನು ಬಂಧಿಸಿ ಇಡುವುದಕ್ಕಾಗಿ ಉಪಯೋಗಿಸುವ ಯಾವುದೇ ಜೈಲು ಅಥವಾ ಸ್ಥಳ ಎಂದು ಅರ್ಥ;

(ಇ) "ಹೋರಾಟದ ವೃತ್ತಿಗ" ಎಂದರೆ, ಹೋರಾಟದ ವೃತ್ತಿಗನಾಗಿ ನೇಮಕಗೊಂಡ ಅಥವಾ ಆ ವೇತನದಲ್ಲಿರುವ ವ್ಯಕ್ತಿ ಎಂದು ಅರ್ಥ;

(ಎಫ್) "ಕಮಾಂಡರ್" ಎಂದರೆ, ಭದ್ರತಾ ಪಡೆಯ ಯಾವುದೇ ಘಟಕಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಯಾವುದೇ ಉಪಬಂಧದಲ್ಲಿ ಕಮಾಂಡರ್ ಪದ ಬಳಸಿದಾಗ ಆ ಘಟಕಕ್ಕೆ ಸಂಬಂಧಿಸಿದಂತೆ ಆ ಉಪಬಂಧದಲ್ಲಿ ಉಲ್ಲೇಖಿಸಿದ ವಿವರಣೆಯ ವಿಷಯಗಳಿಗೆ ಸಂಬಂಧಿಸಿದಂತೆ ಕಮಾಂಡರ್‌ನ ಪ್ರಕಾರ್ಯಗಳನ್ನು ನಿರ್ವಹಿಸುವ ಕರ್ತವ್ಯನಿರತ ಅಧಿಕಾರಿ;

(ಜಿ) "ಕ್ರಿಮಿನಲ್ ನ್ಯಾಯಾಲಯ" ಎಂದರೆ, ಭಾರತದ ಯಾವುದೇ ಭಾಗದಲ್ಲಿನ ಸಾಮಾನ್ಯ ಕ್ರಿಮಿನಲ್ ನ್ಯಾಯದ ನ್ಯಾಯಾಲಯ ಎಂದು ಅರ್ಥ ಮತ್ತು ಅದರಲ್ಲಿ ಕ್ರಿಮಿನಲ್ ಕಾನೂನು ತಿದ್ದುಪಡಿ ಅಧಿನಿಯಮ, 1952 (1952ರ 46)ರ ಮೇರೆಗೆ ನೇಮಕಗೊಂಡ ವಿಶೇಷ ನ್ಯಾಯಾಧೀಶನ ನ್ಯಾಯಾಲಯವೂ ಸೇರುತ್ತದೆ;

(ಹೆಚ್) "ಉಪ ಮಹಾ ನಿರೀಕ್ಷಕ" ಎಂದರೆ, 5ನೇ ಪ್ರಕರಣದ ಮೇರೆಗೆ ನೇಮಕಗೊಂಡ ಭದ್ರತಾ ಪಡೆಯ ಉಪ ಮಹಾ ನಿರೀಕ್ಷಕ ಎಂದು ಅರ್ಥ;

(ಐ) "ಮಹಾ ನಿರ್ದೇಶಕ" ಮತ್ತು "ಅಪರ ಮಹಾ ನಿರ್ದೇಶಕ" ಎಂದರೆ, ಅನುಕ್ರಮವಾಗಿ 5ನೇ ಪ್ರಕರಣದ ಮೇರೆಗೆ ನೇಮಕಗೊಂಡ ಭದ್ರತಾ ಪಡೆಯ ಮಹಾ ನಿರ್ದೇಶಕ ಮತ್ತು ಅಪರ ಮಹಾ ನಿರ್ದೇಶಕ ಎಂದು ಅರ್ಥ;

(ಜೆ) "ಗ್ರೂಪ್" ಎಂದರೆ, ಕೇಂದ್ರ ಸರ್ಕಾರವು ಒಂದು ಗ್ರೂಪ್ ಎಂದು ರಚಿಸಿದ ಭದ್ರತಾ ಪಡೆಯ ಒಂದು ಘಟಕ ಎಂದು ಅರ್ಥ;

(ಕೆ) "ಗ್ರೂಪ್ ಕಮಾಂಡರ್" ಎಂದರೆ, 5ನೇ ಪ್ರಕರಣದ ಮೇರೆಗೆ ನೇಮಕಗೊಂಡ ಭದ್ರತಾ ಪಡೆಯ ಗ್ರೂಪ್ ಕಮಾಂಡರ್ ಎಂದು ಅರ್ಥ;

(ಎಲ್) "ಮಹಾ – ನಿರೀಕ್ಷಕ" ಎಂದರೆ, 5ನೇ ಪ್ರಕರಣದ ಮೇರೆಗೆ ನೇಮಕಗೊಂಡ ಭದ್ರತಾ ಪಡೆಯ ಮಹಾ – ನಿರೀಕ್ಷಕ ಎಂದು ಅರ್ಥ;

(ಎಂ) "ಜಡ್ಜ್ ಅಟಾರ್ನಿ–ಜನರಲ್", "ಅಡಿಷನಲ್ ಜಡ್ಜ್ ಅಟಾರ್ನಿ ಜನರಲ್", "ಡೆಪ್ಯೂಟಿ ಜಡ್ಜ್ ಅಟಾರ್ನಿ ಜನರಲ್" ಮತ್ತು "ಜಡ್ಜ್ ಅಟಾರ್ನಿ" ಎಂದರೆ, ಅನುಕ್ರಮವಾಗಿ ಕೇಂದ್ರ ಸರ್ಕಾರವು ಆಯಾ ದರ್ಜೆಯಲ್ಲಿ ನೇಮಕ ಮಾಡಿದ ಭದ್ರತಾ ಪಡೆಯ ಜಡ್ಜ್ ಅಟಾರ್ನಿ–ಜನರಲ್, ಅಡಿಷನಲ್ ಜಡ್ಜ್ ಅಟಾರ್ನಿ ಜನರಲ್, ಡೆಪ್ಯೂಟಿ ಜಡ್ಜ್ ಅಟಾರ್ನಿ ಜನರಲ್ ಮತ್ತು ಜಡ್ಜ್ ಅಟಾರ್ನಿ ಎಂದು ಅರ್ಥ;

(ಎನ್) "ಭದ್ರತಾ ಪಡೆಯ ಸದಸ್ಯ" ಎಂದರೆ, ಒಬ್ಬ ಅಧಿಕಾರಿ, ಸಹಾಯಕ ಕಮಾಂಡರ್, ರೇಂಜರ್ ಅಥವಾ ಹೋರಾಟದ ವೃತ್ತಿಗ ಎಂದು ಅರ್ಥ;

(ಒ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದು ಅರ್ಥ;

(ಪಿ) "ಅಪರಾಧ" ಎಂದರೆ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಕೃತ್ಯ ಅಥವಾ ಲೋಪ ಎಂದು ಅರ್ಥ ಮತ್ತು ಅದು ಸಿವಿಲ್ ಅಪರಾಧವನ್ನು ಒಳಗೊಳ್ಳುತ್ತದೆ;

(ಕ್ಯೂ) "ಅಧಿಕಾರಿ" ಎಂದರೆ, ಭದ್ರತಾ ಪಡೆಯ ಅಧಿಕಾರಿಯಾಗಿ ನೇಮಕಗೊಂಡ ಅಥವಾ ಆ ವೇತನದಲ್ಲಿರುವ ವ್ಯಕ್ತಿ ಎಂದು ಅರ್ಥ;

(ಆರ್) "ನಿಯಮಿಸಲಾದುದು" ಎಂದರೆ, ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಎಸ್) "ರೇಂಜರ್" ಎಂದರೆ, ಭದ್ರತಾ ಪಡೆಯ ರೇಂಜರ್ ಗ್ರೇಡ್ I ಮತ್ತು ರೇಂಜರ್ ಗ್ರೇಡ್ II ಎಂದು ಅರ್ಥ;

(ಟಿ) "ನಿಯಮ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮ ಎಂದು ಅರ್ಥ;

(ಯು) "ಭದ್ರತಾ ಪಡೆ" ಎಂದೆರೆ, ರಾಷ್ಟ್ರೀಯ ಭದ್ರತಾ ಪಡೆ ಎಂದು ಅರ್ಥ;

(ವಿ) "ಭದ್ರತಾ ಪಡೆ ನ್ಯಾಯಾಲಯ" ಎಂದರೆ, 61ನೇ ಪ್ರಕರಣದಲ್ಲಿ ಉಲ್ಲೇಖಿಸಿದ ನ್ಯಾಯಾಲಯ ಎಂದು ಅರ್ಥ;

(ಡಬ್ಲ್ಯೂ) "ಭದ್ರತಾ ಪಡೆ ಅಭಿರಕ್ಷೆ" ಎಂದರೆ, ನಿಯಮಗಳಿಗೆ ಅನುಸಾರವಾಗಿ ಭದ್ರತಾ ಪಡೆಯ ಒಬ್ಬ ಸದಸ್ಯನನ್ನು ದಸ್ತಗಿರಿ ಮಾಡುವುದು ಅಥವಾ ಬಂಧನದಲ್ಲಿರಿಸುವುದು ಎಂದು ಅರ್ಥ;

(ಎಕ್ಸ್) "ಮೇಲಧಿಕಾರಿ" ಎಂದರೆ, ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಗೆ ಸಂಬಂಧಿಸಿದಂತೆ ವರಿಷ್ಠ ಅಧಿಕಾರಿ ಪದವನ್ನು ಬಳಸಿದಾಗ,-

(i) ಭದ್ರತಾ ಪಡೆಯ ಯಾವ ಸದಸ್ಯನ ಕಮಾಂಡಿಗೆ ಅಂಥ ವ್ಯಕ್ತಿಯು ನಿಯಮಗಳಿಗೆ ಅನುಸಾರವಾಗಿ ತತ್ಕಾಲದಲ್ಲಿ ಒಳಪಟ್ಟಿರುತ್ತಾನೋ ಆ ಯಾರೇ ಸದಸ್ಯ; ಮತ್ತು

(ii) ಉನ್ನತ ದರ್ಜೆಯ ಅಥವಾ ವರ್ಗದ ಯಾರೇ ಅಧಿಕಾರಿ

- ಎಂದು ಅರ್ಥ ಮತ್ತು ಅದರಲ್ಲಿ ಅಂಥ ವ್ಯಕ್ತಿಯು ಅಧಿಕಾರಿಯಾಗಿರದಿದ್ದಾಗ ಸಹಾಯಕ ಕಮಾಂಡರ್ ಅಥವಾ ಉನ್ನತ ದರ್ಜೆಯ ಅಥವಾ ವರ್ಗದ ರೇಂಜರ್ ಒಳಗೊಳ್ಳುತ್ತಾರೆ.

(ವೈ) "ಭಯೋತ್ಪಾದಕ" ಎಂದರೆ, ಕಾನೂನು ಮೂಲಕ ಸ್ಥಾಪಿತವಾದ ಸರ್ಕಾರವನ್ನು ಆತಂಕಪಡಿಸುವ ಅಥವಾ ಜನರಲ್ಲಿ ಅಥವಾ ಜನರ ಯಾವುದೇ ವರ್ಗದಲ್ಲಿ ಭಯವನ್ನು ಹುಟ್ಟಿಸುವ ಅಥವಾ ಜನರ ಯಾವುದೇ ವರ್ಗವನ್ನು ಪ್ರತ್ಯೇಕಿಸುವ ಅಥವಾ ವಿವಿಧ ವರ್ಗಗಳ

ಜನರಲ್ಲಿ ಸಾಮರಸ್ಯವನ್ನು ಕೆಡಿಸುವ ಉದ್ದೇಶದಿಂದ ಬಾಂಬುಗಳನ್ನು, ಡೈನಮೈಟ್‌ಗಳನ್ನು ಅಥವಾ ಇತರೆ ಸ್ಫೋಟಕ ವಸ್ತುಗಳನ್ನು ಅಥವಾ ದಹ್ಯ ವಸ್ತುಗಳನ್ನು ಅಥವಾ ಬಂದೂಕುಗಳನ್ನು ಅಥವಾ ಇತರೆ ಮಾರಕಾಸ್ತ್ರಗಳನ್ನು ಅಥವಾ ವಿಷ ಅಥವಾ ಹಾನಿಕಾರಕ ಅನಿಲ ಅಥವಾ ಇತರ ರಾಸಾಯನಿಕಗಳನ್ನು ಅಥವಾ ಅಪಾಯಕಾರಿ ಸ್ವರೂಪದ ಇತರ ಯಾವುದೇ ವಸ್ತುಗಳನ್ನು (ಜೈವಿಕ ಅಥವಾ ಅನ್ಯಥಾ) ಬಳಸುವ ಮೂಲಕ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಮರಣ ಅಥವಾ ಕ್ಷತಿಗಳನ್ನು ಉಂಟುಮಾಡುವ ಅಥವಾ ಸ್ವತ್ತಿಗೆ ಹಾನಿ ಅಥವಾ ನಾಶ ಉಂಟು ಮಾಡುವ ಅಥವಾ ಸಮುದಾಯದ ಜೀವನಕ್ಕೆ ಅವಶ್ಯವಿರುವ ಯಾವುದೇ ಸರಬರಾಜುಗಳಿಗೆ ಅಥವಾ ಸೇವೆಗಳಿಗೆ ಅಡ್ಡಿಯುಂಟು ಮಾಡುವ ರೀತಿಯಲ್ಲಿ ಅಥವಾ ಉಂಟು ಮಾಡುವ ಸಂಭವವಿರುವ ಯಾವುದೇ ಕೃತ್ಯವನ್ನು ಅಥವಾ ಕಾರ್ಯವನ್ನು ಮಾಡುವ ಯಾರೇ ವ್ಯಕ್ತಿ ಎಂದು ಅರ್ಥ;

(ಝಡ್) ಈ ಅಧಿನಿಯಮದಲ್ಲಿ ಬಳಸಿರುವ ಮತ್ತು ಪರಿಭಾಷಿಸಿಲ್ಲದ, ಆದರೆ ಭಾರತ ದಂಡ ಸಂಹಿತೆಯಲ್ಲಿ (1860ರ 45) ಪರಿಭಾಷಿಸಿರುವ ಎಲ್ಲಾ ಪದಗಳು ಮತ್ತು ಪದಾವಳಿಗಳು ಆ ಸಂಹಿತೆಯಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

(2) ಈ ಅಧಿನಿಯಮದಲ್ಲಿ, ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿರದ ಯಾವುದೇ ಕಾನೂನಿಗೆ ಮಾಡಿದ ಉಲ್ಲೇಖಗಳನ್ನು ಆ ರಾಜ್ಯದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನುಗಳಿಗೆ ಮಾಡಿದ ಉಲ್ಲೇಖಗಳೆಂಬುದಾಗಿ ಅರ್ಥೈಸತಕ್ಕದ್ದು.

3. **ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಗಳು.**- (1) ಭದ್ರತಾ ಪಡೆಯಲ್ಲಿ ನೇಮಕಗೊಂಡ (ಪ್ರತಿನಿಯೋಜನೆಯ ಮೇಲಾಗಲಿ ಅಥವಾ ಯಾವುದೇ ಇತರೆ ರೀತಿಯಲ್ಲಾಗಲಿ) ಈ ಮುಂದಿನ ವ್ಯಕ್ತಿಗಳು ಅವರು ಎಲ್ಲಿಯೇ ಇದ್ದರೂ ಈ ಅಧಿನಿಯಮಕ್ಕೊಳಪಟ್ಟಿರತಕ್ಕದ್ದು, ಎಂದರೆ,-

(ಎ) ಅಧಿಕಾರಿಗಳು ಮತ್ತು ಸಹಾಯಕ ಕಮಾಂಡರುಗಳು; ಮತ್ತು

(ಬಿ) ರೇಂಜರುಗಳು ಮತ್ತು ಹೋರಾಟದ ವೃತ್ತಿಗರು.

(2) ಈ ಅಧಿನಿಯಮಕ್ಕೊಳಪಟ್ಟ ಪ್ರತಿಯೊಬ್ಬ ವ್ಯಕ್ತಿಯು ಈ ಅಧಿನಿಯಮದ ಉಪಬಂಧಗಳ ಮತ್ತು ನಿಯಮಗಳ ಅನುಸಾರವಾಗಿ ಭದ್ರತಾ ಪಡೆಯಿಂದ ಅವನನ್ನು ವಾಪಸು ಕಳುಹಿಸುವವರೆಗೆ, ನಿವೃತ್ತಿಗೊಳಿಸುವವರೆಗೆ, ಬಿಡುಗಡೆ ಮಾಡುವವರೆಗೆ, ವಿಮೋಚನೆಗೊಳಿಸುವವರೆಗೆ, ತೆಗೆದು ಹಾಕುವವರೆಗೆ ಅಥವಾ ವಜಾ ಮಾಡುವವರೆಗೆ ಹಾಗೆ ಒಳಪಟ್ಟಿರುವುದು ಉಳಿಯತಕ್ಕದ್ದು.

## ಅಧ್ಯಾಯ II

### ಭದ್ರತಾ ಪಡೆಯ ಸ್ಥಾಪನೆ ಮತ್ತು ಭದ್ರತಾ ಪಡೆಯ ಸದಸ್ಯರ ಸೇವಾ ಷರತ್ತುಗಳು

4. **ಭದ್ರತಾ ಪಡೆಯ ಸ್ಥಾಪನೆ.–** (1) ಆಂತರಿಕ ಗಲಭೆಗಳಿಂದ ರಾಜ್ಯಗಳನ್ನು ರಕ್ಷಿಸುವ ದೃಷ್ಟಿಯಿಂದ ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಿಸುವುದಕ್ಕಾಗಿ ರಾಷ್ಟ್ರೀಯ ಭದ್ರತಾ ಪಡೆ ಎಂದು ಕರೆಯಲಾಗುವ ಒಕ್ಕೂಟ ಸಶಸ್ತ್ರ ಪಡೆಯು ಇರತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಭದ್ರತಾ ಪಡೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಸ್ಥಾಪಿಸತಕ್ಕದ್ದು ಮತ್ತು ಭದ್ರತಾ ಪಡೆಯ ಸದಸ್ಯರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

5. **ನಿಯಂತ್ರಣ, ನಿರ್ದೇಶನ ಇತ್ಯಾದಿ.–** (1) ಭದ್ರತಾ ಪಡೆಯ ಸಾಮಾನ್ಯ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು, ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು, ಮತ್ತು ಅದು ಚಲಾಯಿಸತಕ್ಕದ್ದು ಮತ್ತು ಅದಕ್ಕೆ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಒಳಪಟ್ಟು, ಭದ್ರತಾ ಪಡೆಯ ಕಮ್ಯಾಂಡ್ ಮತ್ತು ಮೇಲ್ವಿಚಾರಣೆಯು ಭದ್ರತಾ ಪಡೆಯ ಮಹಾ ನಿರ್ದೇಶಕನಾಗಿ ಕೇಂದ್ರ ಸರ್ಕಾರವು ನೇಮಕ ಮಾಡುವ ಅಧಿಕಾರಿಯಲ್ಲಿ ನಿಹಿತವಾಗತಕ್ಕದ್ದು.

(2) ಮಹಾ ನಿರ್ದೇಶಕನು ಈ ಅಧಿನಿಯಮದ ಮೇರೆಗೆ ತನ್ನ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಕೇಂದ್ರ ಸರ್ಕಾರವು ನೇಮಕ ಮಾಡಬಹುದಾದಷ್ಟು ಸಂಖ್ಯೆಯ ಅಪರ ಮಹಾ ನಿರ್ದೇಶಕರುಗಳ, ಮಹಾ ನಿರೀಕ್ಷಕರುಗಳ, ಉಪ ಮಹಾ ನಿರೀಕ್ಷಕರುಗಳ, ಗ್ರೂಪ್ ಕಮಾಂಡರುಗಳ ಮತ್ತು ಇತರ ಅಧಿಕಾರಿಗಳ ನೆರವು ಪಡೆಯತಕ್ಕದ್ದು.

6. **ಭಾರತದ ಹೊರಗೆ ಸೇವೆ ಸಲ್ಲಿಸುವ ಹೊಣೆಗಾರಿಕೆ.–** ಭದ್ರತಾ ಪಡೆಯ ಪ್ರತಿಯೊಬ್ಬ ಸದಸ್ಯನು ಭಾರತದ ಯಾವುದೇ ಭಾಗದಲ್ಲಿ ಹಾಗೂ ಭಾರತದ ಹೊರಗೆ ಸೇವೆ ಸಲ್ಲಿಸಲು ಹೊಣೆಗಾರನಾಗಿರತಕ್ಕದ್ದು.

7. **ಹುದ್ದೆಗೆ ರಾಜೀನಾಮೆ ಮತ್ತು ಅದರಿಂದ ಹಿಂದೆ ಸರಿಯುವುದು.–** ಭದ್ರತಾ ಪಡೆಯ ಯಾರೇ ಸದಸ್ಯನು ನಿಯಮಿಸಲಾದ ಪ್ರಾಧಿಕಾರದಿಂದ ಲಿಖಿತದಲ್ಲಿ ಪೂರ್ವಾನುಮೋದನೆ ಪಡೆದ ಹೊರತು,–

(ಎ) ಅವನ ನಿಯೋಜನೆಯ ಅವಧಿಯಲ್ಲಿ ತನ್ನ ಉದ್ಯೋಗಕ್ಕೆ ರಾಜೀನಾಮೆ ನೀಡಲು; ಅಥವಾ

(ಬಿ) ಅವನ ಉದ್ಯೋಗದ ಎಲ್ಲ ಅಥವಾ ಯಾವುವೇ ಕರ್ತವ್ಯಗಳಿಂದ ತಾನೇ ಹಿಂದಕ್ಕೆ ಸರಿಯಲು

– ಸ್ವತಂತ್ರನಾಗಿರತಕ್ಕದ್ದಲ್ಲ.

8. **ಈ ಅಧಿನಿಯಮದ ಮೇರೆಗಿನ ಸೇವಾ ಅವಧಿ.**– ಈ ಅಧಿನಿಯಮಕ್ಕೊಳಪಟ್ಟ ಪ್ರತಿಯೊಬ್ಬ ವ್ಯಕ್ತಿಯು ರಾಷ್ಟ್ರಪತಿಯ ಇಷ್ಟಪರ್ಯಂತ ಪದವನ್ನು ಧಾರಣ ಮಾಡತಕ್ಕದ್ದು.

9. **ಕೇಂದ್ರ ಸರ್ಕಾರವು ಸೇವೆಯನ್ನು ಕೊನೆಗೊಳಿಸುವುದು.**– ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಒಳಪಟ್ಟು, ಕೇಂದ್ರ ಸರ್ಕಾರವು ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಸೇವೆಯಿಂದ ವಜಾಮಾಡಬಹುದು ಅಥವಾ ತೆಗೆದು ಹಾಕಬಹುದು.

10. **ಮಹಾ ನಿರ್ದೇಶಕನು ಮತ್ತು ಇತರೆ ಅಧಿಕಾರಿಗಳು ಯಾರೇ ವ್ಯಕ್ತಿಯನ್ನು ವಜಾ ಮಾಡುವುದು, ತೆಗೆದುಹಾಕುವುದು ಅಥವಾ ಆತನ ದರ್ಜೆಯನ್ನು ಇಳಿಸುವುದು.**– (1) ಮಹಾ–ನಿರ್ದೇಶಕನು, ಯಾರೇ ಅಪರ ಮಹಾ–ನಿರ್ದೇಶಕನು ಅಥವಾ ಯಾರೇ ಮಹಾ–ನಿರೀಕ್ಷಕನು, ಅಧಿಕಾರಿಯನ್ನು ಹೊರತುಪಡಿಸಿ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಸೇವೆಯಿಂದ ವಜಾಮಾಡಬಹುದು ಅಥವಾ ತೆಗೆದುಹಾಕಬಹುದು ಅಥವಾ ಕೆಳಗಿನ ದರ್ಜೆಗೆ ಅಥವಾ ದರ್ಜೆಗೆ ಅಥವಾ ದರ್ಜೆಗಳಿಗೆ ಇಳಿಸಬಹುದು.

(2) ಉಪ ಮಹಾ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು ಅಥವಾ ನಿಯಮಿಸಲಾದ ಯಾರೇ ಅಧಿಕಾರಿಯು, ಅಧಿಕಾರಿಯನ್ನು ಅಥವಾ ಸಹಾಯಕ ಕಮಾಂಡರನನ್ನು ಹೊರತುಪಡಿಸಿ ಅವನ ಕಮಾಂಡಿನಲ್ಲಿರುವ ಯಾರೇ ವ್ಯಕ್ತಿಯನ್ನು ಸೇವೆಯಿಂದ ವಜಾ ಮಾಡಬಹುದು ಅಥವಾ ತೆಗೆದುಹಾಕಬಹುದು.

(3) (2)ನೇ ಉಪಪ್ರಕರಣದಲ್ಲಿ ಹೇಳಲಾದ ಯಾರೇ ಅಧಿಕಾರಿಯು, ಅಧಿಕಾರಿಯನ್ನು ಅಥವಾ ಸಹಾಯಕ ಕಮಾಂಡರನನ್ನು ಹೊರತುಪಡಿಸಿ ಅವನ ಕಮಾಂಡಿನಲ್ಲಿರುವ ಯಾರೇ ವ್ಯಕ್ತಿಯನ್ನು ಕೆಳಗಿನ ಶ್ರೇಣಿಗೆ ಅಥವಾ ದರ್ಜೆಗೆ ಅಥವಾ ದರ್ಜೆಗಳಿಗೆ ಇಳಿಸಬಹುದು.

(4) ಈ ಪ್ರಕರಣದ ಮೇರೆಗಿನ ಯಾವುದೇ ಅಧಿಕಾರದ ಚಲಾವಣೆಯ ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ನಿಯಮಗಳಿಗೆ ಒಳಪಟ್ಟಿರತಕ್ಕದ್ದು.

11. **ಸೇವೆಯನ್ನು ಕೊನೆಗೊಳಿಸಿರುವ ಬಗ್ಗೆ ಪ್ರಮಾಣಪತ್ರ.**– ಸೇವೆಯಿಂದ ನಿವೃತ್ತಿಹೊಂದಿದ, ಬಿಡುಗಡೆಯಾದ, ವಿಮೋಚನೆಗೊಂಡ, ತೆಗೆದುಹಾಕಿದ ಅಥವಾ ವಜಾ ಆದ ಸಹಾಯಕ ಕಮಾಂಡರನಿಗೆ

ಅಥವಾ ರೇಂಜರನಿಗೆ ಅಥವಾ ಹೋರಾಟದ ವೃತ್ತಿಗನಿಗೆ ಆತನು ಯಾವ ಅಧಿಕಾರಿಯ ಕಮಾಂಡಿಗೆ ಒಳಪಟ್ಟಿರುತ್ತಾನೋ ಆ ಅಧಿಕಾರಿಯು,-

(ಎ) ಅವನ ಸೇವೆಯನ್ನು ಕೊನೆಗೊಳಿಸುವ ಪ್ರಾಧಿಕಾರವನ್ನು;

(ಬಿ) ಹಾಗೆ ಕೊನೆಗೊಳಿಸಿದ್ದಕ್ಕೆ ಕಾರಣವನ್ನು; ಮತ್ತು

(ಸಿ) ಭದ್ರತಾ ಪಡೆಯಲ್ಲಿ ಅವನು ಸಲ್ಲಿಸಿದ ಪೂರ್ಣ ಸೇವಾವಧಿಯನ್ನು

– ನಿರೂಪಿಸಿರುವ ಪ್ರಮಾಣ ಪತ್ರವನ್ನು ಒದಗಿಸತಕ್ಕದ್ದು.

12. **ಸಂಘಗಳನ್ನು ರಚಿಸುವ ಹಕ್ಕು, ವಾಕ್ ಸ್ವಾತಂತ್ರ್ಯ, ಇತ್ಯಾದಿಗಳ ಸಂಬಂಧದಲ್ಲಿ ನಿರ್ಬಂಧಗಳು.**- (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಕೇಂದ್ರ ಸರ್ಕಾರದ ಅಥವಾ ನಿಯಮಿಸಲಾದ ಪ್ರಾಧಿಕಾರದ ಲಿಖಿತ ಪೂರ್ವ ಮಂಜೂರಾತಿ ಪಡೆಯದೆ,-

(ಎ) ಯಾವುದೇ ವೃತ್ತಿ ಸಂಘದ, ಕಾರ್ಮಿಕ ಸಂಘದ, ರಾಜಕೀಯ ಸಂಘಟನೆಯ ಸದಸ್ಯನಾಗಿರತಕ್ಕದ್ದಲ್ಲ ಅಥವಾ ಯಾವುದೇ ರೀತಿಯಲ್ಲಿ ಅವುಗಳೊಂದಿಗೆ ಸಹವರ್ತಿಯಾಗಿರತಕ್ಕದ್ದಲ್ಲ ಅಥವಾ ವೃತ್ತಿ ಸಂಘಗಳ, ಕಾರ್ಮಿಕ ಸಂಘಗಳ ಅಥವಾ ರಾಜಕೀಯ ಸಂಘಗಳ, ಯಾವುದೇ ವರ್ಗದೊಂದಿಗೆ ಯಾವುದೇ ರೀತಿಯಲ್ಲಿ ಸಹವರ್ತಿಯಾಗಿರತಕ್ಕದ್ದಲ್ಲ; ಅಥವಾ

(ಬಿ) ಭದ್ರತಾ ಪಡೆಯ ಒಂದು ಭಾಗವಾಗಿ ಮನ್ನಣೆ ಪಡೆಯದ ಅಥವಾ ಕೇವಲ ಸಾಮಾಜಿಕ, ಮನರಂಜನಾ ಅಥವಾ ಧಾರ್ಮಿಕ ಸ್ವರೂಪದ್ದಲ್ಲದ ಯಾವುದೇ ಸೊಸೈಟಿಯ, ಸಂಸ್ಥೆಯ, ಸಂಘದ ಅಥವಾ ಸಂಘಟನೆಯ ಸದಸ್ಯನಾಗಿರತಕ್ಕದ್ದಲ್ಲ ಅಥವಾ ಅವುಗಳೊಂದಿಗೆ ಯಾವುದೇ ರೀತಿಯಲ್ಲಿ ಸಹವರ್ತಿಯಾಗಿರತಕ್ಕದ್ದಲ್ಲ; ಅಥವಾ

(ಸಿ) ಪತ್ರಿಕೆಗಳಿಗೆ ತಿಳಿಸುವುದನ್ನು ಅಥವಾ ಯಾವುದೇ ಪುಸ್ತಕವನ್ನು, ಪತ್ರವನ್ನು ಅಥವಾ ಇತರ ದಸ್ತಾವೇಜನ್ನು ಪ್ರಕಟಿಸುವುದನ್ನು ಅಥವಾ ಪ್ರಕಟಿಸುವಂತೆ ಮಾಡುವುದನ್ನು, ತನ್ನ ಕರ್ತವ್ಯಗಳನ್ನು ಸದ್ಭಾವನೆಯಿಂದ ನಿರ್ವಹಿಸುವಾಗ ತಿಳಿಸಿದ್ದ ಹೊರತು ಅಥವಾ ಪ್ರಕಟಿಸಿದ್ದ ಹೊರತು ಅಥವಾ ಪ್ರಕಟಿಸುವಂತೆ ಮಾಡಿದ್ದ ಹೊರತು, ಅಥವಾ ಅದು ಸಂಪೂರ್ಣವಾಗಿ ಸಾಹಿತ್ಯಿಕ, ಕಲಾತ್ಮಕ ಅಥವಾ ವೈಜ್ಞಾನಿಕ ಸ್ವರೂಪದ್ದಾಗಿರುವ ಅಥವಾ ನಿಯಮಿಸಿದ ಸ್ವರೂಪದ್ದಾಗಿರುವ ಹೊರತು, ಪತ್ರಿಕೆಗಳಿಗೆ ತಿಳಿಸತಕ್ಕದ್ದಲ್ಲ ಅಥವಾ ಅವುಗಳನ್ನು ಪ್ರಕಟಿಸತಕ್ಕದ್ದಲ್ಲ ಅಥವಾ ಪ್ರಕಟಿಸುವಂತೆ ಮಾಡತಕ್ಕದ್ದಲ್ಲ.

**ವಿವರಣೆ.–** ಯಾವುದೇ ಸೊಸೈಟಿಯು, ಸಂಸ್ಥೆಯು, ಸಂಘವು ಅಥವಾ ಸಂಘಟನೆಯು ಈ ಉಪಪ್ರಕರಣದ (ಬಿ) ಖಂಡದ ಮೇರೆಗೆ ಪೂರ್ಣವಾಗಿ ಸಾಮಾಜಿಕ, ಮನರಂಜನಾ ಅಥವಾ ಧಾರ್ಮಿಕ ಸ್ವರೂಪದ್ದಾಗಿದೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅದರ ಬಗ್ಗೆ ಕೇಂದ್ರ ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

(2) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಯಾವುದೇ ರಾಜಕೀಯ ಉದ್ದೇಶಗಳಿಗಾಗಿ ಅಥವಾ ನಿಯಮಿಸಬಹುದಾದಂಥ ಇತರೆ ಉದ್ದೇಶಗಳಿಗಾಗಿ ಯಾವುದೇ ಸಭೆಯಲ್ಲಿ ಭಾಗವಹಿಸತಕ್ಕದ್ದಲ್ಲ ಅಥವಾ ಸಭೆಯನ್ನು ಉದ್ದೇಶಿಸಿ ಮಾತನಾಡತಕ್ಕದ್ದಲ್ಲ ಅಥವಾ ವ್ಯಕ್ತಿಗಳ ಯಾವುದೇ ನಿಕಾಯವು ಏರ್ಪಡಿಸಿದ ಯಾವುದೇ ಪ್ರದರ್ಶನದಲ್ಲಿ ಭಾಗವಹಿಸತಕ್ಕದ್ದಲ್ಲ.

13. **ಅಧಿಕಾರಿಗಳನ್ನು ಹೊರತುಪಡಿಸಿ ಇತರ ಬಾಧಿತ ವ್ಯಕ್ತಿಗಳಿಗೆ ಪರಿಹಾರೋಪಾಯ.–** (1) ಮೇಲಧಿಕಾರಿಯಿಂದ ಅಥವಾ ಇತರ ಅಧಿಕಾರಿಯಿಂದ ಅನ್ಯಾಯಕ್ಕೆ ಒಳಗಾಗಿದ್ದೇನೆಂದು ತಾನು ಭಾವಿಸುವ ಅಧಿಕಾರಿಯನ್ನು ಹೊರತುಪಡಿಸಿ, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಅವನು ಯಾರ ಕಮಾಂಡಿನಲ್ಲಿ ಸೇವೆ ಸಲ್ಲಿಸುತ್ತಿರುವನೋ ಆ ಅಧಿಕಾರಿಗೆ ದೂರು ಸಲ್ಲಿಸಬಹುದು.

(2) ಯಾವ ಅಧಿಕಾರಿಯ ವಿರುದ್ಧ ದೂರನ್ನು ನೀಡಬೇಕಾಗಿದೆಯೋ ಆ ಅಧಿಕಾರಿಯೇ (1)ನೇ ಉಪಪ್ರಕರಣದ ಮೇರೆಗೆ ದೂರನ್ನು ಸಲ್ಲಿಸಬೇಕಾಗಿರುವಾಗ, ಆ ಬಾಧಿತ ವ್ಯಕ್ತಿಯು ಆ ದೂರನ್ನು ಆ ಅಧಿಕಾರಿಯ ನಿಕಟ ಮೇಲಧಿಕಾರಿಗೆ ಸಲ್ಲಿಸಬಹುದು.

(3) ಯಾವುದೇ ಅಂಥ ದೂರನ್ನು ಸ್ವೀಕರಿಸಿದ ಪ್ರತಿಯೊಬ್ಬ ಅಧಿಕಾರಿಯು, ಫಿರ್ಯಾದಿಗೆ ಪೂರ್ಣ ಪರಿಹಾರವನ್ನು ನೀಡುವ ಸಲುವಾಗಿ ಸಾಧ್ಯವಾಗಬಹುದಾದಷ್ಟುಮಟ್ಟಿಗೆ ಪೂರ್ಣ ತನಿಖೆಯನ್ನು ನಡೆಸತಕ್ಕದ್ದು; ಅಥವಾ ಅವಶ್ಯವಿದ್ದಾಗ, ಮೇಲಧಿಕಾರಿಗೆ ಆ ದೂರನ್ನು ಕಳುಹಿಸಿಕೊಡತಕ್ಕದ್ದು.

(4) ಮಹಾ-ನಿರ್ದೇಶಕನು ಮೇಲೆ ಹೇಳಿದ ಯಾವುವೇ ಉಪಪ್ರಕರಣಗಳ ಮೇರೆಗೆ ಮಾಡಿದ ಯಾವುದೇ ತೀರ್ಮಾನವನ್ನು ಪರಿಷ್ಕರಿಸಬಹುದು, ಆದರೆ, ಅದಕ್ಕೊಳಪಟ್ಟು, ಅಂಥ ತೀರ್ಮಾನವು ಅಂತಿಮವಾಗಿರತಕ್ಕದ್ದು.

14. **ಬಾಧಿತ ಅಧಿಕಾರಿಗಳಿಗೆ ಪರಿಹಾರ.–** ಯಾರೇ ಅಧಿಕಾರಿಯು ಅವನ ಕಮಾಂಡರನಿಂದ ಅಥವಾ ಯಾರೇ ಇತರೆ ಮೇಲಧಿಕಾರಿಯಿಂದ ತಾನು ಅನ್ಯಾಯಕ್ಕೊಳಗಾಗಿದ್ದೇನೆಂದು ಭಾವಿಸಿದರೆ ಮತ್ತು ಅವನ ಕಮಾಂಡರನಿಗೆ ಅಥವಾ ಅಂಥ ಇತರೆ ಮೇಲಧಿಕಾರಿಗೆ ಯುಕ್ತ ಅರ್ಜಿಯನ್ನು ಸಲ್ಲಿಸಿದ ಮೇಲೆ ತಾನು ಯಾವ ಪರಿಹಾರಕ್ಕೆ ಅರ್ಹನಾಗಿದ್ದೇನೆಂದು ಅವನು ಪರಿಗಣಿಸಿದ್ದಾನೋ ಆ ಪರಿಹಾರವನ್ನು

ಪಡೆಯದಿರುವಾಗ, ಕ್ರಮವಾದ ಮಾರ್ಗದ ಮೂಲಕ ಮಹಾ ನಿರ್ದೇಶಕನಿಗೆ ಅಥವಾ ಕೇಂದ್ರ ಸರ್ಕಾರಕ್ಕೆ ದೂರು ಸಲ್ಲಿಸಬಹುದು.

## ಅಧ್ಯಾಯ III

## ಅಪರಾಧಗಳು

**15. ಒಕ್ಕೂಟದ ವಿರುದ್ಧ ಬಂಡೆದ್ದಿರುವ ಭಯೋತ್ಪಾದಕರಿಗೆ ಮತ್ತು ಇತರ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಮರಣದಂಡನೆಯಿಂದ ದಂಡಿತವಾಗುವ ಅಪರಾಧಗಳು.–** ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಎಂದರೆ,–

(ಎ) ಅವನ ಕರ್ತವ್ಯದ ಸ್ಥಳವನ್ನು ಲಜ್ಜಾಸ್ಪದವಾಗಿ ತ್ಯಜಿಸಿದರೆ ಅಥವಾ ಕಾರ್ಯಾಚರಣೆ ಸಮಯದಲ್ಲಿ ಹೇಡಿತನವನ್ನು ತೋರಿಸುವಂಥ ರೀತಿಯಲ್ಲಿ ದುರ್ನಡತೆಯಿಂದ ನಡೆದುಕೊಂಡರೆ;

(ಬಿ) ಒಕ್ಕೂಟದ ವಿರುದ್ಧ ಬಂಡೆದ್ದ ಭಯೋತ್ಪಾದಕನ ಅಥವಾ ಯಾರೇ ವ್ಯಕ್ತಿಯ ಜೊತೆ ವಿಶ್ವಾಸಘಾತದಿಂದ ಪತ್ರವ್ಯವಹಾರ ನಡೆಸಿದರೆ, ಅಥವಾ ಅವರಿಗೆ ಗುಪ್ತವಾರ್ತೆಯನ್ನು ತಿಳಿಸಿದರೆ; ಅಥವಾ

(ಸಿ) ಯಾರೇ ಭಯೋತ್ಪಾದಕನಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಹಣವನ್ನು, ಶಸ್ತ್ರಾಸ್ತ್ರಗಳನ್ನು, ಮದ್ದುಗುಂಡುಗಳನ್ನು, ಸಾಮಗ್ರಿಗಳನ್ನು ಅಥವಾ ಸರಬರಾಜುಗಳನ್ನು ಮಾಡಿದರೆ ಅಥವಾ ಯಾವುದೇ ಇತರೆ ರೀತಿಯಲ್ಲಿ ನೆರವು ನೀಡಿದರೆ; ಅಥವಾ

(ಡಿ) ಭದ್ರತಾ ಪಡೆಯ ಅಥವಾ ಮಿಲಿಟರಿಯ, ನೌಕಾದಳದ, ವಾಯುದಳದ ಅಥವಾ ಭಾರತದ ಇತರೆ ಯಾವುದೇ ಸಶಸ್ತ್ರಬಲದ ಅಥವಾ ಅದರೊಂದಿಗೆ ಅಥವಾ ಅಂಥವೇ ಬಲಗಳ ಯಾವುದೇ ಭಾಗದೊಂದಿಗೆ ಸಹಕರಿಸುತ್ತಿರುವ ಯಾವುವೇ ಬಲಗಳ ಯಶಸ್ಸಿಗೆ ಗಂಡಾಂತರವನ್ನುಂಟು ಮಾಡಲು ಯೋಜಿಸಿದ ಯಾವುದೇ ಕೃತ್ಯವನ್ನು ತಿಳಿದೂ ತಿಳಿದೂ ಮಾಡಿದರೆ

– ಅವನು ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ಅಪರಾಧ ನಿರ್ಣಯವಾದ ನಂತರ, ಮರಣದಂಡನೆಗೆ ಅಥವಾ ಈ ಅಧಿನಿಯಮದಲ್ಲಿ ಹೇಳಿದಂಥ ಇತರ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**16.** **ಇತರೆ ವೇಳೆಗಳಿಗಿಂತ ಸಕ್ರಿಯ ಕರ್ತವ್ಯದ ಮೇಲಿರುವಾಗ ಮಾಡಿದ ಅಪರಾಧಗಳಿಗಾಗಿ ತೀವ್ರ ದಂಡನೆ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ,–

(ಎ) ಸಂರಕ್ಷಣೆಯನ್ನು ಅತಿಕ್ರಮಿಸಿದರೆ, ಅಥವಾ ಕಾವಲುಗಾರನ ಮೇಲೆ ಬಲ ಪ್ರಯೋಗಿಸಿದರೆ ಅಥವಾ ಅಪರಾಧಿಕ ಬಲವನ್ನು ಬಳಸಿದರೆ; ಅಥವಾ

(ಬಿ) ಲೂಟಿ ಮಾಡಲು ಯಾವುದೇ ಮನೆಗೆ ಅಥವಾ ಇತರೆ ಸ್ಥಳಕ್ಕೆ ಕನ್ನ ಹಾಕಿದರೆ; ಅಥವಾ

(ಸಿ) ಕೆಲಸದ ಮೇಲಿರುವಾಗ ಕಾವಲುಗಾರನು ನಿದ್ದೆ ಮಾಡಿದರೆ ಅಥವಾ ಮದ್ಯಪಾನ ಮಾಡಿದರೆ; ಅಥವಾ

(ಡಿ) ಅವನ ಮೇಲಧಿಕಾರಿಯ ಆದೇಶ ಪಡೆಯದೆ ಅವನು ಪಹರೆ, ಪಿಕೆಟ್, ಗಸ್ತು ಅಥವಾ ಹುದ್ದೆಯ ಸ್ಥಳವನ್ನು ಬಿಟ್ಟರೆ

– ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ಅಪರಾಧ ನಿರ್ಣಯವಾದ ಮೇಲೆ,–

(i) ಸಕ್ರಿಯ ಕರ್ತವ್ಯದ ಮೇಲಿರುವಾಗ ಯಾವುದೇ ಅಂಥ ಅಪರಾಧ ಮಾಡಿದ್ದರೆ, ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು; ಮತ್ತು

(ii) ಅವನು ಸಕ್ರಿಯ ಕರ್ತವ್ಯದ ಮೇಲೆ ಇಲ್ಲದಿರುವಾಗ ಅಂಥ ಯಾವುದೇ ಅಪರಾಧವನ್ನು ಮಾಡಿದ್ದರೆ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**17.** **ದಂಗೆ.–** ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡುವ, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಎಂದರೆ:–

(ಎ) ಭದ್ರತಾ ಪಡೆಯಲ್ಲಿ ಅಥವಾ ಮಿಲಿಟರಿಯಲ್ಲಿ, ನೌಕಾದಳದಲ್ಲಿ, ವಾಯುದಳದಲ್ಲಿ ಅಥವಾ ಭಾರತದ ಯಾವುದೇ ಇತರೆ ಸಶಸ್ತ್ರದಳದಲ್ಲಿ ಅಥವಾ ಅದರೊಂದಿಗೆ ಸಹಕರಿಸುತ್ತಿರುವ

ಯಾವುದೇ ದಳಗಳಲ್ಲಿ ಯಾವುದೇ ದಂಗೆಯನ್ನುಂಟುಮಾಡಲು ಯಾರೇ ಇತರೆ ವ್ಯಕ್ತಿಯೊಂದಿಗೆ ಪ್ರಾರಂಭಿಸಿದರೆ, ದುಷ್ಪ್ರೇರೆಪಿಸಿದರೆ, ಪ್ರೇರೇಪಿಸಿದರೆ ಅಥವಾ ಒಳಸಂಚು ನಡೆಸಿದರೆ; ಅಥವಾ

(ಬಿ) ಯಾವುದೇ ಅಂಥ ದಂಗೆಯಲ್ಲಿ ಸೇರಿದರೆ; ಅಥವಾ

(ಸಿ) ಯಾವುದೇ ಅಂಥ ದಂಗೆಯ ಸಮಯದಲ್ಲಿ ಹಾಜರಿದ್ದು, ಅದನ್ನು ಹತ್ತಿಕ್ಕಲು ಅವನು ಅತ್ಯಧಿಕ ಪ್ರಯತ್ನ ಮಾಡದಿದ್ದರೆ; ಅಥವಾ

(ಡಿ) ಯಾವುದೇ ಅಂಥ ದಂಗೆಯ ಅಸ್ತಿತ್ವ, ಅಥವಾ ದಂಗೆ ಏಳುವ ಉದ್ದೇಶವಿರುವುದು ಅಥವಾ ಯಾವುದೇ ಅಂಥ ದಂಗೆಯ ಒಳಸಂಚಿನ ಬಗ್ಗೆ ತಿಳಿದೂ ತಿಳಿದೂ ಅಥವಾ ನಂಬಲು ಕಾರಣಗಳಿದ್ದರೂ ಅವುಗಳನ್ನು ತನ್ನ ಕಮಾಂಡರನಿಗೆ ಅಥವಾ ಇತರ ಮೇಲಧಿಕಾರಿಗೆ ವಿಳಂಬ ಮಾಡದೆ ಮಾಹಿತಿ ನೀಡದಿದ್ದರೆ; ಅಥವಾ

(ಇ) ಭದ್ರತಾ ಪಡೆಯಲ್ಲಿ ಅಥವಾ ಮಿಲಿಟರಿಯಲ್ಲಿ, ನೌಕಾದಳದಲ್ಲಿ, ವಾಯುದಳದಲ್ಲಿ ಅಥವಾ ಭಾರತದ ಯಾವುದೇ ಇತರೆ ಸಶಸ್ತ್ರದಳದಲ್ಲಿ ಅಥವಾ ಅದಕ್ಕೆ ಸಹಕರಿಸುತ್ತಿರುವ ಯಾವುದೇ ದಳಗಳಲ್ಲಿನ ಯಾರೇ ವ್ಯಕ್ತಿಯನ್ನು ಅವನ ಕರ್ತವ್ಯದಿಂದ ಅಥವಾ ಒಕ್ಕೂಟ ನಿಷ್ಠೆಯಿಂದ ದುರ್ಮಾರ್ಗಕ್ಕೆ ಪ್ರೇರೇಪಿಸಲು ಪ್ರಯತ್ನಿಸಿದರೆ

– ಭದ್ರತಾ ನ್ಯಾಯಾಲಯದಿಂದ ಅಪರಾಧಿಯೆಂದು ಅಪರಾಧ ನಿರ್ಣಯವಾದ ನಂತರ ಮರಣ ದಂಡನೆಗೆ ಅಥವಾ ಈ ಅಧಿನಿಯಮದಲ್ಲಿ ಹೇಳಲಾದಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**18. ತ್ಯಜಿಸುವುದು ಅಥವಾ ತ್ಯಜಿಸಲು ನೆರವಾಗುವುದು.–** (1) ಸೇವೆಯನ್ನು ತ್ಯಜಿಸುವ ಅಥವಾ ತ್ಯಜಿಸಲು ಪ್ರಯತ್ನಿಸುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ಅಪರಾಧ ನಿರ್ಣಯವಾದ ಅನಂತರ, ಅವನು,–

(ಎ) ಸಕ್ರಿಯ ಕರ್ತವ್ಯದ ಮೇಲಿರುವಾಗ ಅಥವಾ ಸಕ್ರಿಯ ಕರ್ತವ್ಯಕ್ಕಾಗಿ ಆದೇಶಗಳನ್ನು ಪಡೆದಿರುವಾಗ ಅಪರಾಧ ಮಾಡಿದರೆ, ಮರಣದಂಡನೆಗೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು; ಮತ್ತು

(ಬಿ) ಯಾವುದೇ ಇತರೆ ಸನ್ನಿವೇಶಗಳಲ್ಲಿ ಅಪರಾಧ ಮಾಡಿದರೆ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

(2) ಅಂಥ ಯಾವುದೇ ತ್ಯಜಿಸುವವನಿಗೆ ತಿಳಿದೂ ತಿಳಿದೂ ಆಶ್ರಯ ಕೊಡುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

(3) ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯು ತ್ಯಜಿಸಿದ ಅಥವಾ ತ್ಯಜಿಸಲು ಪ್ರಯತ್ನಿಸಿರುವುದರ ಬಗ್ಗೆ ತಿಳಿದಿರುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಕೂಡಲೇ ತನ್ನ ಅಥವಾ ಇತರ ಮೇಲಧಿಕಾರಿಗೆ ನೋಟೀಸು ಕೊಡದಿದ್ದರೆ, ಅಥವಾ ಅಂಥ ವ್ಯಕ್ತಿಯನ್ನು ಬಂಧಿಸುವಂತೆ ಮಾಡಲು ತನ್ನ ಅಧಿಕಾರದಲ್ಲಿರುವ ಯಾವುವೇ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ಆನಂತರ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

(4) ಈ ಅಧಿನಿಯಮದ ಉದ್ದೇಶಗಳಿಗಾಗಿ, ವ್ಯಕ್ತಿಯು,-

(ಎ) ಅವನು ತನ್ನ ಘಟಕಕ್ಕೆ ಅಥವಾ ಕರ್ತವ್ಯದ ಸ್ಥಳಕ್ಕೆ ವರದಿ ಮಾಡಿಕೊಳ್ಳದಿರುವ ಉದ್ದೇಶದಿಂದ ಅಂಥ ಘಟಕ ಅಥವಾ ಸ್ಥಳದಿಂದ ಯಾವುದೇ ಕಾಲದಲ್ಲಿ ಗೈರು ಹಾಜರಾದರೆ, ಅಥವಾ ಯಾವುದೇ ಕಾಲದಲ್ಲಿ ಮತ್ತು ಯಾವುವೇ ಸನ್ನಿವೇಶಗಳಲ್ಲಿ ಅವನ ಘಟಕ ಅಥವಾ ಕರ್ತವ್ಯದ ಸ್ಥಳದಿಂದ ಗೈರು ಹಾಜರಾದ ವ್ಯಕ್ತಿಯ, ಅಂಥ ಘಟಕಕ್ಕೆ ಅಥವಾ ಕರ್ತವ್ಯದ ಸ್ಥಳಕ್ಕೆ ವರದಿ ಮಾಡಿಕೊಳ್ಳದಿರುವ ಉದ್ದೇಶವನ್ನು ತಾನು ಹೊಂದಿದ್ದೆನೆಂದು ತೋರಿಸುವ ಯಾವುದೇ ಕೃತ್ಯವನ್ನು ಮಾಡಿದ್ದರೆ;

(ಬಿ) ಯಾವುದೇ ಸಕ್ರಿಯ ಕರ್ತವ್ಯದಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಅನುಮತಿ ಇಲ್ಲದೆ ಗೈರು ಹಾಜರಾದರೆ ಆ ವ್ಯಕ್ತಿಯು ತ್ಯಜಿಸುತ್ತಾನೆಂದು

– ಭಾವಿಸತಕ್ಕದ್ದು.

**19. ಅನುಮತಿಯಿಲ್ಲದೆ ಗೈರು ಹಾಜರಿ.**– ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ,-

(ಎ) ಅನುಮತಿ ಇಲ್ಲದೆ ಗೈರು ಹಾಜರಾದರೆ; ಅಥವಾ

(ಬಿ) ಅವನಿಗೆ ಮಂಜೂರಾದ ರಜೆ ಅವಧಿಯನ್ನು ಮೀರಿ ಹೆಚ್ಚು ದಿನ ಸಾಕಷ್ಟು ಕಾರಣವಿಲ್ಲದೆ ಉಳಿದರೆ; ಅಥವಾ

(ಸಿ) ಗೈರು ಹಾಜರಿ ರಜೆಯಲ್ಲಿದ್ದಾಗ ಮತ್ತು ಅವನು ಯಾವ ಘಟಕಕ್ಕೆ ಅಥವಾ ಅದರ ಭಾಗಕ್ಕೆ ಸೇರಿರುವನೋ ಆ ಯಾವುದೇ ಘಟಕ ಅಥವಾ ಭಾಗವು ಸಕ್ರಿಯ ಕರ್ತವ್ಯದ ಮೇಲೆ ಹಾಜರಾಗುವಂತೆ ಆದೇಶ ಮಾಡಿರುವುದರ ಬಗ್ಗೆ ಸಮುಚಿತ ಪ್ರಾಧಿಕಾರದಿಂದ ಮಾಹಿತಿ ಸ್ವೀಕರಿಸಿದ್ದಾಗ ಸಾಕಷ್ಟು ಕಾರಣವಿಲ್ಲದೆ, ವಿಳಂಬ ಮಾಡದೆ ಸಕ್ರಿಯ ಕರ್ತವ್ಯಕ್ಕೆ ಪುನಃ ಸೇರಲು ವಿಫಲನಾದರೆ; ಅಥವಾ

(ಡಿ) ಪೆರೇಡಿಗಾಗಿ ಅಥವಾ ಕವಾಯತಿಗೆ ಅಥವಾ ಕರ್ತವ್ಯಕ್ಕೆ ಗೊತ್ತುಪಡಿಸಿದ ಸ್ಥಳದಲ್ಲಿ ನಿಗದಿತ ಕಾಲದಲ್ಲಿ ಸಾಕಷ್ಟು ಕಾರಣವಿಲ್ಲದೆ ಹಾಜರಾಗಲು ವಿಫಲನಾದರೆ; ಅಥವಾ

(ಇ) ಪೆರೇಡ್‌ನಲ್ಲಿರುವಾಗ, ಅಥವಾ ಪಥಸಂಚಲನದಲ್ಲಿರುವಾಗ, ಸಾಕಷ್ಟು ಕಾರಣವಿಲ್ಲದೆ ಅಥವಾ ಅವನ ಮೇಲಧಿಕಾರಿಯಿಂದ ಅನುಮತಿ ಪಡೆಯದೆ, ಪೆರೇಡನ್ನು ಅಥವಾ ಪಥಸಂಚಲವನ್ನು ಬಿಟ್ಟು ಹೋದರೆ; ಅಥವಾ

(ಎಫ್) ಕ್ಯಾಂಪಿನಲ್ಲಿರುವಾಗ ಅಥವಾ ಬೇರೆಲ್ಲಾದರೂ ಇರುವಾಗ, ಯಾವುದೇ ಸಾಮಾನ್ಯ, ಸ್ಥಳೀಯ ಅಥವಾ ಇತರೆ ಆದೇಶದ ಮೂಲಕ, ಅವನ ಮೇಲಧಿಕಾರಿಯಿಂದ ಪಾಸು ಪಡೆಯದೆ ಅಥವಾ ಲಿಖಿತ ಅನುಮತಿ ಪಡೆಯದೆ ಯಾವುವೇ ನಿಗದಿತ ಎಲ್ಲೆಗಳನ್ನು ಅಥವಾ ಯಾವುದೇ ನಿಷೇದಿತ ಸ್ಥಳವನ್ನು ಮೀರಿ ಹೋಗಿರುವುದು ಕಂಡುಬಂದರೆ; ಅಥವಾ

(ಜಿ) ಯಾವುದೇ ಶಾಲೆಗೆ ಹಾಜರಾಗಬೇಕೆಂದು ಯುಕ್ತವಾಗಿ ಆದೇಶಿಸಿದ್ದಾಗ ಅವನ ಮೇಲಧಿಕಾರಿಯಿಂದ ಅನುಮತಿ ಪಡೆಯದೆ ಅಥವಾ ಯುಕ್ತ ಕಾರಣವಿಲ್ಲದೆ, ಗೈರು ಹಾಜರಾದರೆ

– ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**20. ಮೇಲಧಿಕಾರಿಗೆ ಹೊಡೆಯುವುದು ಅಥವಾ ಬೆದರಿಕೆ ಹಾಕುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ,–

(ಎ) ತನ್ನ ಮೇಲಧಿಕಾರಿಯ ಮೇಲೆ ಅಪರಾಧಿಕ ಬಲ ಬಳಸಿದರೆ ಅಥವಾ ಹಲ್ಲೆ ಮಾಡಿದರೆ; ಅಥವಾ

(ಬಿ) ಅಂಥ ಅಧಿಕಾರಿಗೆ ಬೆದರಿಸುವ ಭಾಷೆ ಬಳಸಿದರೆ; ಅಥವಾ

(ಸಿ) ಅಂಥ ಅಧಿಕಾರಿಗೆ ಅವಿಧೇಯ ಭಾಷೆ ಬಳಸಿದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ,–

(i) ಅಂಥ ಅಧಿಕಾರಿಯು ಅವನ ಪದದ ನಿರ್ವಹಣೆ ಮಾಡುತ್ತಿರುವ ಕಾಲದಲ್ಲಾಗಿದ್ದರೆ ಅಥವಾ ಅವನು ಸಕ್ರಿಯ ಕರ್ತವ್ಯದ ಮೇಲಿರುವಾಗ ಅಪರಾಧ ನಡೆದಿದ್ದರೆ, ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಸೂಚಿಸಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು; ಮತ್ತು

(ii) ಇತರೆ ಸಂದರ್ಭಗಳಲ್ಲಿ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅಪರಾಧದ ಸಂದರ್ಭದಲ್ಲಿ, ಕಾರಾವಾಸವು ಐದು ವರ್ಷಗಳನ್ನು ಮೀರತಕ್ಕದ್ದಲ್ಲ.

21. **ಮೇಲಧಿಕಾರಿಗೆ ಅವಿಧೇಯತೆಯನ್ನು ತೋರಿಸುವುದು.**– (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಅವನ ಮೇಲಧಿಕಾರಿಯ ಅಧಿಕಾರವನ್ನು, ಅವನ ಪದದ ನಿರ್ವಹಣೆಯಲ್ಲಿ ಅವನ ವರಿಷ್ಠ ಅಧಿಕಾರಿಯು ಮೌಖಿಕವಾಗಿಯಾಗಲಿ, ಅಥವಾ ಲಿಖಿತದಲ್ಲಾಗಲಿ ಅಥವಾ ಸಂಜ್ಞೆಯ ಮೂಲಕವಾಗಲಿ ಅಥವಾ ಇತರ ರೀತಿಯಲ್ಲಾಗಲಿ ವೈಯಕ್ತಿಕವಾಗಿ ನೀಡುವ ಯಾವುದೇ ಕಾನೂನುಸಮ್ಮತ ಆಜ್ಞೆಯನ್ನು ಉದ್ದೇಶಪೂರ್ವಕವಾಗಿ ಪ್ರತಿಭಟಿಸುವಂಥ ರೀತಿಯಲ್ಲಿ ಅವಿಧೇಯತೆ ತೋರಿದರೆ ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧ ನಿರ್ಣೀತನಾದ ನಂತರ ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

(2) ಈ ಅಧಿನಿಯಮಕ್ಕೊಳಪಟ್ಟ ಮತ್ತು ಅವನ ಮೇಲಧಿಕಾರಿಯು ನೀಡಿದ ಯಾವುದೇ ಕಾನೂನುಸಮ್ಮತ ಆಜ್ಞೆಯನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಭದ್ರತಾ ಪಡೆ ನ್ಯಾಯಾಲಯದಿಂದ

ಅಪರಾಧಿಯೆಂದು ನಿರ್ಣೀತನಾದ ತರುವಾಯ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

22. **ಹಲ್ಲೆ ಮಾಡುವುದು ಮತ್ತು ಅಡ್ಡಿಪಡಿಸುವುದು.**- ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ,-

(ಎ) ಯಾವುದೇ ಜಗಳದಲ್ಲಿ, ಬೀದಿ ಜಗಳದಲ್ಲಿ ಅಥವಾ ಗಲಭೆಯಲ್ಲಿ ತೊಡಗಿದ್ದರೆ, ಯಾರು ಅವನ ಬಂಧನಕ್ಕೆ ಆದೇಶಿಸುತ್ತಾನೋ ಅವನು ತನ್ನ ದರ್ಜೆಗಿಂತ, ಕೆಳದರ್ಜೆಯವರಾಗಿದ್ದಾಗ್ಯೂ ಅಂಥವನ ಆದೇಶವನ್ನು ಪಾಲಿಸಲು ನಿರಾಕರಿಸಿದರೆ ಅಥವಾ ಯಾರೇ ಅಂಥ ಅಧಿಕಾರಿಯ ಮೇಲೆ ಅಪರಾಧಿಕ ಬಲವನ್ನು ಪ್ರಯೋಗಿಸಿದರೆ ಅಥವಾ ಹಲ್ಲೆ ಮಾಡಿದರೆ; ಅಥವಾ

(ಬಿ) ಯಾರೇ ವ್ಯಕ್ತಿಯನ್ನು ಅವನು ಈ ಅಧಿನಿಯಮಕ್ಕೊಳಪಟ್ಟಿರಲಿ ಅಥವಾ ಪಡದಿರಲಿ, ಅವನನ್ನು ಕಾನೂನು ಸಮ್ಮತವಾಗಿ ಯಾರ ಅಭಿರಕ್ಷೆಯಲ್ಲಿಡಲಾಗಿದೆಯೋ, ಮತ್ತು ಅವನು ತನ್ನ ಮೇಲಧಿಕಾರಿಯಾಗಿರಲಿ ಅಥವಾ ಆಗಿಲ್ಲದಿರಲಿ ಅವನ ಮೇಲೆ ಅಪರಾಧಿಕ ಬಲವನ್ನು ಪ್ರಯೋಗಿಸಿದರೆ ಅಥವಾ ಹಲ್ಲೆ ಮಾಡಿದರೆ; ಅಥವಾ

(ಸಿ) ಅವನನ್ನು ಬಂಧಿಸುವ ಅಥವಾ ಅವನನ್ನು ವಶಕ್ಕೆ ತೆಗೆದುಕೊಳ್ಳುವ ಬೆಂಗಾವಲು ಪಡೆಯನ್ನು ಪ್ರತಿರೋಧಿಸಿದರೆ; ಅಥವಾ

(ಡಿ) ಸೇನಾಸಾಲು ಮನೆಗಳಿಂದ, ಶಿಬರಗಳಿಂದ ಅಥವಾ ವಸತಿಗೃಹಗಳಿಂದ ಓಡಿಹೋದರೆ; ಅಥವಾ

(ಇ) ಯಾವುದೇ ಸಾಮಾನ್ಯ, ಸ್ಥಳೀಯ ಅಥವಾ ಇತರೆ ಆದೇಶಗಳನ್ನು ಪಾಲಿಸಲು ನಿರಾಕರಿಸಿದರೆ

- ಭದ್ರತಾ ಪಡೆಯ ನ್ಯಾಯಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, (ಡಿ) ಮತ್ತು (ಇ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳ ಸಂದರ್ಭದಲ್ಲಿ ಎರಡು ವರ್ಷಗಳವರೆಗೆ ಮತ್ತು ಇತರೆ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳ ಸಂದರ್ಭದಲ್ಲಿ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸಕ್ಕೆ, ಅಥವಾ ಅವುಗಳ ಪೈಕಿ ಯಾವುದಾದರೊಂದು ಸಂದರ್ಭದಲ್ಲಿ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**23. ಅಗೌರವ ನಡತೆಯ ಕೆಲವು ರೀತಿಗಳು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ,–

(ಎ) ಕ್ರೂರ, ಅಸಭ್ಯ ಅಥವಾ ಅಸ್ವಾಭಾವಿಕ ರೀತಿಯ ಯಾವುದೇ ಅಗೌರವ ನಡತೆಯ ತಪ್ಪಿತಸ್ಥನಾಗಿದ್ದರೆ; ಅಥವಾ

(ಬಿ) ಕೆಲಸ ತಪ್ಪಿಸಿಕೊಳ್ಳಲು ಕಾಯಿಲೆಬಂದವನಂತೆ ನಟಿಸಿದರೆ ಅಥವಾ ಸೋಗು ಹಾಕಿದರೆ ಅಥವಾ ತಾನೇ ರೋಗವನ್ನು ಅಥವಾ ದುರ್ಬಲತೆಯನ್ನು ಉಂಟು ಮಾಡಿಕೊಂಡರೆ ಅಥವಾ ತನ್ನ ರೋಗವನ್ನು ವಾಸಿ ಮಾಡಿಕೊಳ್ಳಲು ಉದ್ದೇಶಪೂರ್ವಕವಾಗಿ ವಿಳಂಬಮಾಡಿದ್ದರೆ ಅಥವಾ ಅವನ ರೋಗವನ್ನು ಅಥವಾ ದುರ್ಬಲತೆಯನ್ನು ಉಲ್ಬಣಗೊಳಿಸಿಕೊಂಡರೆ; ಅಥವಾ

(ಸಿ) ಸೇವೆಗೆ ತನ್ನನ್ನು ಅನರ್ಹನನ್ನಾಗಿಸುವ ಅಥವಾ ಯಾರೇ ಇತರ ವ್ಯಕ್ತಿಯನ್ನು ಅನರ್ಹನನ್ನಾಗಿ ಮಾಡುವ ಉದ್ದೇಶದಿಂದ ಸ್ವಯಿಚ್ಛೆಯಿಂದ ತಾನೇ ಗಾಯ ಮಾಡಿಕೊಂಡರೆ ಅಥವಾ ಆ ವ್ಯಕ್ತಿಗೆ ಗಾಯಗೊಳಿಸಿದರೆ

– ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**24. ಅಧೀನ ನೌಕರನಿಗೆ ತೊಂದರೆ ಕೊಡುವುದು.–** ದರ್ಜೆ ಅಥವಾ ಸ್ಥಾನದಲ್ಲಿ ತನಗೆ ಅಧೀನವಾಗಿರುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಗೆ ಅಪರಾಧಿಕ ಬಲ ಪ್ರಯೋಗಿಸುವ ಅಥವಾ ಇತರೆ ರೀತಿಯಲ್ಲಿ ತೊಂದರೆ ಕೊಡುವ ಯಾರೇ ಅಧಿಕಾರಿಯು, ಸಹಾಯಕ ಕಮಾಂಡರನು ಅಥವಾ ಶ್ರೇಣಿ–I ರ ರೇಂಜರನು ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**25. ಪಾನಮತ್ತತೆ.–** (1) ಕರ್ತವ್ಯದ ಮೇಲಿರಲಿ ಅಥವಾ ಇಲ್ಲದಿರಲಿ ಪಾನಮತ್ತ ಸ್ಥಿತಿಯಲ್ಲಿರುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ಒಬ್ಬ ವ್ಯಕ್ತಿಯು ಮದ್ಯಸಾರವನ್ನು ಅಥವಾ ಯಾವುದೇ ಮಾದಕ ವಸ್ತುವನ್ನು ಅದೊಂದನ್ನೇ ತೆಗೆದುಕೊಳ್ಳಲಿ ಅಥವಾ ಯಾವುದೇ ಇತರೆ ವಸ್ತುವಿನೊಂದಿಗೆ ಬೆರೆಸಿ ತೆಗೆದುಕೊಳ್ಳಲಿ, ಹಾಗೆ ತೆಗೆದುಕೊಂಡು ಅದರ ಪ್ರಭಾವಕ್ಕೊಳಗಾಗಿದ್ದರೆ, ಅವನಿಗೆ ವಹಿಸಿದ ಕರ್ತವ್ಯವನ್ನು ನಿರ್ವಹಿಸಲು ಅಥವಾ ನಿರ್ವಹಿಸಲು ಅವನಿಗೆ ವಹಿಸಬಹುದಾದಂಥ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ಅಸಮರ್ಥನಾಗಿದ್ದರೆ ಅಥವಾ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸಿದರೆ ಅಥವಾ ಭದ್ರತಾ ಪಡೆಗೆ ಅಗೌರವ ತರುವ ರೀತಿಯಲ್ಲಿ ವರ್ತಿಸಿದರೆ ಅವನು ಪಾನಮತ್ತ ಸ್ಥಿತಿಯಲ್ಲಿರುವವನೆಂದು ಭಾವಿಸತಕ್ಕದ್ದು.

**26. ಅಭಿರಕ್ಷೆಯಲ್ಲಿರುವ ವ್ಯಕ್ತಿಯು ತಪ್ಪಿಸಿಕೊಳ್ಳಲು ಅನುಮತಿಸುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ,–

(ಎ) ಪಡೆಯ, ಪಿಕೆಟಿನ, ಗಸ್ತಿನ, ಸೇನಾ ತುಕಡಿಯ ಅಥವಾ ನೆಲೆಯ ಮೇಲೆ ಕಮಾಂಡಿನಲ್ಲಿರುವಾಗ, ಸೂಕ್ತ ಅಧಿಕಾರವಿಲ್ಲದೆ ಉದ್ದೇಶಪೂರ್ವಕವಾಗಿ ಅಥವಾ ಯುಕ್ತ ಕಾರಣವಿಲ್ಲದೆ ಅವನ ವಶಕ್ಕೆ ಒಪ್ಪಿಸಿರುವ ಯಾರೇ ವ್ಯಕ್ತಿಯನ್ನು ಬಿಡುಗಡೆ ಮಾಡಿದರೆ, ಅಥವಾ ಹಾಗೆ ವಶಕ್ಕೆ ಒಪ್ಪಿಸುವ ಯಾರೇ ಕೈದಿಯನ್ನು ಅಥವಾ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಳ್ಳಲು ನಿರಾಕರಿಸಿದರೆ; ಅಥವಾ

(ಬಿ) ಅವನ ವಶಕ್ಕೆ ಒಪ್ಪಿಸಿರುವ ಅಥವಾ ಯಾವ ವ್ಯಕ್ತಿಯನ್ನು ಇಟ್ಟುಕೊಳ್ಳುವುದು ಅಥವಾ ಕಾವಲು ಕಾಯುವುದು ಅವನ ಕರ್ತವ್ಯವಾಗಿದೆಯೋ ಆ ವ್ಯಕ್ತಿಯು ತಪ್ಪಿಸಿಕೊಳ್ಳಲು ಉದ್ದೇಶಪೂರ್ವಕವಾಗಿ ಅಥವಾ ಯುಕ್ತ ಕಾರಣವಿಲ್ಲದೆ ಅವಕಾಶ ನೀಡಿದರೆ

– ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಅವನು ಉದ್ದೇಶಪೂರ್ವಕವಾಗಿ ಅದನ್ನು ಮಾಡಿದ್ದರೆ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಮತ್ತು ಅವನು ಉದ್ದೇಶಪೂರ್ವಕವಾಗಿ ಅದನ್ನು ಮಾಡಿರದಿದ್ದರೆ, ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**27. ದಸ್ತಗಿರಿಗೆ ಅಥವಾ ಬಂಧನಕ್ಕೆ ಸಂಬಂಧಿಸಿದಂತೆ ಅಕ್ರಮಗಳು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ,–

(ಎ) ದಸ್ತಗಿರಿಯಾದ ಅಥವಾ ಬಂಧನದಲ್ಲಿರುವ ವ್ಯಕ್ತಿಯನ್ನು ಅಧಿವಿಚಾರಣೆಗೆ ಒಳಪಡಿಸದೆ ಅನಾವಶ್ಯಕವಾಗಿ ಅವನನ್ನು ತಡೆಹಿಡಿದಿಟ್ಟುಕೊಂಡರೆ ಅಥವಾ ತನಿಖೆಗಾಗಿ ಸೂಕ್ತ ಪ್ರಾಧಿಕಾರಿಯ ಮುಂದೆ ಅವನ ಪ್ರಕರಣವನ್ನು ತರಲು ವಿಫಲನಾದರೆ; ಅಥವಾ

(ಬಿ) ಭದ್ರತಾ ಪಡೆಯ ಅಭಿರಕ್ಷೆಗೆ ಆ ವ್ಯಕ್ತಿಯನ್ನು ಒಪ್ಪಿಸಿದ ನಂತರ ಹಾಗೆ ಒಪ್ಪಿಸಿದ ಕಾಲದಲ್ಲಿ ಯುಕ್ತ ಕಾರಣವಿಲ್ಲದೆ ಅಥವಾ ಕಾರ್ಯಸಾಧ್ಯವಾಗುವಷ್ಟು ಬೇಗ ಮತ್ತು ತದನಂತರದ ಯಾವುದೇ ಸಂದರ್ಭದಲ್ಲಿ ನಲವತ್ತೆಂಟು ಗಂಟೆಗಳೊಳಗಾಗಿ ಅಧಿಕಾರಿಯ ಅಥವಾ ದಸ್ತಗಿರಿಯಾದ ವ್ಯಕ್ತಿಯು ಯಾರ ಅಭಿರಕ್ಷೆಯಲ್ಲಿರುತ್ತಾನೋ ಆ ಇತರ ವ್ಯಕ್ತಿಯ ವಶಕ್ಕೆ ಒಪ್ಪಿಸಲು, ಯಾವ ಅಪರಾಧಕ್ಕೆ ಸಂಬಂಧಿಸಿದಂತೆ ಆ ವ್ಯಕ್ತಿಯನ್ನು ಹಾಗೆ ವಶಕ್ಕೆ ಒಪ್ಪಿಸಲಾಗಿದೆಯೋ ಆ ಅಪರಾಧದ ಬಗ್ಗೆ ತಾನೇ ಸಹಿ ಮಾಡಿದ ಲಿಖಿತದಲ್ಲಿನ ವರದಿಯನ್ನು ಸಲ್ಲಿಸಲು ವಿಫಲನಾದರೆ

– ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗಿರತಕ್ಕದ್ದು.

28. **ಅಭಿರಕ್ಷೆಯಿಂದ ತಪ್ಪಿಸಿಕೊಳ್ಳುವುದು.**– ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಕಾನೂನುಬದ್ಧ ಅಭಿರಕ್ಷೆಯಲ್ಲಿದ್ದು ತಪ್ಪಿಸಿಕೊಂಡರೆ ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ನಂತರ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗಕ್ಕದ್ದು.

29. **ಸ್ವತ್ತಿನ ಸಂಬಂಧದಲ್ಲಿನ ಅಪರಾಧಗಳು.**– ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ,–

(ಎ) ಸರ್ಕಾರಕ್ಕೆ ಅಥವಾ ಭದ್ರತಾ ಪಡೆಯ ಯಾವುದೇ ಮೆಸ್‌ಗೆ, ಬ್ಯಾಂಡ್‌ಗೆ ಅಥವಾ ಸಂಸ್ಥೆಗೆ ಅಥವಾ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಗೆ ಸೇರಿರುವ ಯಾವುದೇ ಸ್ವತ್ತನ್ನು ಕಳವು ಮಾಡಿದರೆ; ಅಥವಾ

(ಬಿ) ಅಂಥ ಯಾವುದೇ ಸ್ವತ್ತನ್ನು ತನ್ನ ಸ್ವಂತ ಉಪಯೋಗಕ್ಕೆ ಅಪ್ರಾಮಾಣಿಕವಾಗಿ ದುರುಪಯೋಗ ಮಾಡಿಕೊಂಡರೆ ಅಥವಾ ಅದನ್ನು ಮಾರ್ಪಾಡಿಸಿಕೊಂಡರೆ; ಅಥವಾ

(ಸಿ) ಅಂಥ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಅಪರಾಧಿಕ ನಂಬಿಕೆ ದ್ರೋಹ ಮಾಡಿದರೆ; ಅಥವಾ

(ಡಿ) ಯಾವ ಸ್ವತ್ತಿಗೆ ಸಂಬಂಧಿಸಿದಂತೆ (ಎ), (ಬಿ) ಮತ್ತು (ಸಿ) ಖಂಡಗಳ ಮೇರೆಗಿನ ಯಾವುದೇ ಅಪರಾಧಗಳನ್ನು ಮಾಡಲಾಗಿದೆಯೋ ಆ ಯಾವುದೇ ಅಂಥ ಸ್ವತ್ತನ್ನು ಅಂಥ ಅಪರಾಧ ನಡೆದಿದೆಯೆಂದು ತಿಳಿದೂ ತಿಳಿದೂ ಅಥವಾ ನಂಬಲು ಕಾರಣಗಳಿದ್ದರೂ ಅದನ್ನು ಅಪ್ರಾಮಾಣಿಕವಾಗಿ ಸ್ವೀಕರಿಸಿದರೆ ಅಥವಾ ತನ್ನಲ್ಲೇ ಇಟ್ಟುಕೊಂಡರೆ; ಅಥವಾ

(ಇ) ಅವನಿಗೆ ವಹಿಸಲಾಗಿರುವ ಸರ್ಕಾರದ ಯಾವುದೇ ಸ್ವತ್ತನ್ನು ಉದ್ದೇಶಪೂರ್ವಕವಾಗಿ ನಾಶಪಡಿಸಿದರೆ ಅಥವಾ ಅದಕ್ಕೆ ಹಾನಿಉಂಟು ಮಾಡಿದರೆ; ಅಥವಾ

(ಎಫ್) ಮೋಸ ಮಾಡುವ ಅಥವಾ ಒಬ್ಬ ವ್ಯಕ್ತಿಗೆ ಅಕ್ರಮವಾಗಿ ಲಾಭ ಮಾಡಿಕೊಡುವ ಕಾರಣದಿಂದ ಅಥವಾ ಮತ್ತೊಬ್ಬ ವ್ಯಕ್ತಿಗೆ ಅಕ್ರಮವಾಗಿ ನಷ್ಟ ಉಂಟು ಮಾಡುವ ಉದ್ದೇಶದಿಂದ ಯಾವುದೇ ಇತರೆ ಕೃತ್ಯವನ್ನು ಮಾಡಿದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**30. ಬಲಾದ್ಗ್ರಹಣ ಮತ್ತು ಸುಲಿಗೆ.**– ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ:–

(ಎ) ಬಲಾದ್ಗ್ರಹಣ ಮಾಡಿದರೆ; ಅಥವಾ

(ಬಿ) ಸೂಕ್ತ ಅಧಿಕಾರವಿಲ್ಲದೆ ಯಾರೇ ವ್ಯಕ್ತಿಯಿಂದ ಹಣ, ಸಾಮಾನು ಸರಂಜಾಮುಗಳನ್ನು ಬಲಾತ್ಕಾರದಿಂದ ಸುಲಿಗೆ ಮಾಡಿದರೆ ಅಥವಾ ಸೇವೆಯನ್ನು ಬಲಾತ್ಕಾರದಿಂದ ಮಾಡಿಸಿಕೊಂಡರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**31. ಸಾಧನ ಸಾಮಗ್ರಿಗಳೊಂದಿಗೆ ಓಡಿ ಹೋಗುವುದು.**– ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ,–

(ಎ) ಯಾವುವೇ ಶಸ್ತ್ರಾಸ್ತ್ರಗಳು, ಮದ್ದುಗುಂಡು, ಸಾಧನಸಾಮಗ್ರಿ, ಉಪಕರಣಗಳು, ಸಲಕರಣೆಗಳು, ಬಟ್ಟೆ ಬರೆಗಳು ಅಥವಾ ಅವನ ಉಪಯೋಗಕ್ಕಾಗಿ ನೀಡಿದ ಅಥವಾ ಅವನಿಗೆ ವಹಿಸಿದ ಸರ್ಕಾರದ ಸ್ವತ್ತಾಗಿರುವ ಇತರ ವಸ್ತುಗಳು ಇವುಗಳೊಂದಿಗೆ ಓಡಿಹೋದರೆ, ಅಥವಾ ಆ ವಸ್ತುಗಳೊಂದಿಗೆ ಹಾಗೆ ಓಡಿ ಹೋಗಲು ಅವನು ಸಂಬಂಧ ಹೊಂದಿದ್ದರೆ; ಅಥವಾ

(ಬಿ) (ಎ) ಖಂಡದಲ್ಲಿ ಹೇಳಿರುವ ಯಾವುದನ್ನಾದರೂ ನಿರ್ಲಕ್ಷ್ಯದಿಂದ ಕಳೆದುಕೊಂಡರೆ; ಅಥವಾ

(ಸಿ) ಅವನಿಗೆ ನೀಡಿದ ಯಾವುದೇ ಪದಕವನ್ನು ಅಥವಾ ಪ್ರಶಸ್ತಿಯನ್ನು ಮಾರಾಟ ಮಾಡಿದರೆ, ಗಿರವಿ ಇಟ್ಟರೆ, ನಾಶಪಡಿಸಿದರೆ ಅಥವಾ ವಿರೂಪಗೊಳಿಸಿದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳ ಸಂದರ್ಭದಲ್ಲಿ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಮತ್ತು ಇತರ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳ ಸಂದರ್ಭದಲ್ಲಿ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಇವೆರಡೂ ಸಂದರ್ಭಗಳಲ್ಲಿ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

32. **ಸ್ವತ್ತಿಗೆ ಹಾನಿ ಮಾಡುವುದು.**– ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ,–

(ಎ) 31ನೇ ಪ್ರಕರಣದ (ಎ) ಖಂಡದಲ್ಲಿ ಹೇಳಿರುವ ಯಾವುದೇ ಸ್ವತ್ತನ್ನು ಅಥವಾ ಯಾವುದೇ ಭದ್ರತಾ ಪಡೆಯ ಮೆಸ್‌ಗೆ, ಬ್ಯಾಂಡ್‌ಗೆ ಅಥವಾ ಸಂಸ್ಥೆಗೆ ಅಥವಾ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಗೆ ಸೇರಿದ ಯಾವುದೇ ಸ್ವತ್ತನ್ನು ನಾಶಗೊಳಿಸಿದರೆ ಅಥವಾ ಅದಕ್ಕೆ ಹಾನಿಯುಂಟು ಮಾಡಿದರೆ; ಅಥವಾ

(ಬಿ) ಬೆಂಕಿಯ ಅಥವಾ ಇನ್ನಾವುದೇ ಇತರೆ ರೀತಿಯ ಮೂಲಕ ಸರ್ಕಾರದ ಯಾವುದೇ ಸ್ವತ್ತಿಗೆ ಹಾನಿಯುಂಟುಮಾಡುವ, ಅಥವಾ ಅದನ್ನು ನಾಶಪಡಿಸುವಂಥ ಯಾವುದೇ ಕೃತ್ಯವನ್ನು ಮಾಡಿದರೆ; ಅಥವಾ

(ಸಿ) ಅವನಿಗೆ ವಹಿಸಿದ ಯಾವುದೇ ಪ್ರಾಣಿಯನ್ನು ಕೊಂದರೆ, ಗಾಯಗೊಳಿಸಿದರೆ, ಅದರೊಂದಿಗೆ ಓಡಿಹೋದರೆ, ಪೀಡಿಸಿದರೆ ಅಥವಾ ಅದನ್ನು ಕಳೆದುಕೊಂಡರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಅವನು ಉದ್ದೇಶಪೂರ್ವಕವಾಗಿ ಆ ಕೃತ್ಯವನ್ನು ಮಾಡಿದ್ದರೆ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಮತ್ತು ಯುಕ್ತ ಕಾರಣವಿಲ್ಲದೆ ಆ ಕೃತ್ಯವನ್ನು ಮಾಡಿದ್ದರೆ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

33. **ಸುಳ್ಳು ಆಪಾದನೆಗಳು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ,–

(ಎ) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವಿರುದ್ಧ, ಆಪಾದನೆಯು ಸುಳ್ಳೆಂದು ತಿಳಿದೂ ತಿಳಿದೂ ಅಥವಾ ಸುಳ್ಳೆಂದು ನಂಬಲು ಕಾರಣಗಳಿದ್ದೂ ಅಂಥ ಸುಳ್ಳು ಆಪಾದನೆ ಮಾಡಿದರೆ; ಅಥವಾ

(ಬಿ) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವಿರುದ್ಧ ದೂರು ನೀಡುವಾಗ, ಅಂಥ ಹೇಳಿಕೆಯು ಸುಳ್ಳೆಂದು ತಿಳಿದೂ ತಿಳಿದೂ ಅಥವಾ ಸುಳ್ಳೆಂದು ನಂಬಲು ಕಾರಣಗಳಿದ್ದೂ, ಅಂಥ ವ್ಯಕ್ತಿಯ ಚಾರಿತ್ರ್ಯಕ್ಕೆ ಧಕ್ಕೆತರುವ ಯಾವುದೇ ಹೇಳಿಕೆಯನ್ನು ನೀಡಿದರೆ ಅಥವಾ ಯಾವುದೇ ಮಹತ್ವದ ಸಂಗತಿಯನ್ನು ತಿಳಿದೂ ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ ಬಚ್ಚಿಟ್ಟರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

34. **ಸರ್ಕಾರಿ ದಸ್ತಾವೇಜುಗಳಲ್ಲಿ ಸುಳ್ಳು ನಿರೂಪಣೆ ಮಾಡುವುದು ಮತ್ತು ಸುಳ್ಳು ಘೋಷಣೆ ನೀಡುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ,–

(ಎ) ಅವನು ತಯಾರಿಸಿದ ಅಥವಾ ಸಹಿ ಮಾಡಿದ ಯಾವುದೇ ವರದಿಯಲ್ಲಿ, ವಿವರಪಟ್ಟಿಕೆಯಲ್ಲಿ, ಪಟ್ಟಿಯಲ್ಲಿ, ಪ್ರಮಾಣಪತ್ರದಲ್ಲಿ, ಪುಸ್ತಕದಲ್ಲಿ ಅಥವಾ ಇತರೆ ದಸ್ತಾವೇಜಿನಲ್ಲಿ ಅಥವಾ ಯಾವುದರ ಒಳಾಂಶಗಳ ನಿಷ್ಕೃಷ್ಟತೆಯನ್ನು ಖಚಿತಪಡಿಸಿಕೊಳ್ಳುವುದು ಅವನ

ಕರ್ತವ್ಯವಾಗಿರುವುದೋ ಅವುಗಳಲ್ಲಿ ತಿಳಿದೂ ತಿಳಿದೂ ಯಾವುದೇ ಸುಳ್ಳು ಅಥವಾ ಮೋಸದ ಹೇಳಿಕೆಯನ್ನು ಕೊಟ್ಟರೆ ಅಥವಾ ಕೊಡುವುದರಲ್ಲಿ ಭಾಗಿಯಾದರೆ; ಅಥವಾ

(ಬಿ) (ಎ) ಖಂಡದಲ್ಲಿ ಹೇಳಿರುವ ರೀತಿಯ ಯಾವುದೇ ದಸ್ತಾವೇಜಿನಲ್ಲಿ ಮೋಸ ಮಾಡುವ ಉದ್ದೇಶದಿಂದ ತಿಳಿದೂ ತಿಳಿದೂ ಯಾವುದೇ ಲೋಪ ಮಾಡಿದರೆ ಅಥವಾ ಮಾಡುವುದರಲ್ಲಿ ಭಾಗಿಯಾದರೆ; ಅಥವಾ

(ಸಿ) ತಿಳಿದೂ ತಿಳಿದೂ ಮತ್ತು ಉದ್ದೇಶಪೂರ್ವಕವಾಗಿ ಯಾರೇ ವ್ಯಕ್ತಿಗೆ ಕ್ಷತಿಯನ್ನುಂಟು ಮಾಡಿದರೆ, ಅಥವಾ .ಯಾವ ದಸ್ತಾವೇಜನ್ನು ಸಂರಕ್ಷಿಸುವುದು ಅಥವಾ ಹಾಜರುಪಡಿಸುವುದು ಅವನ ಕರ್ತವ್ಯವಾಗಿದೆಯೋ ಆ ಯಾವುದೇ ದಸ್ತಾವೇಜನ್ನು ತಿಳಿದೂ ತಿಳಿದೂ ಮತ್ತು ಮೋಸ ಮಾಡುವ ಉದ್ದೇಶದಿಂದ ಬಚ್ಚಿಟ್ಟರೆ, ವಿರೂಪಗೊಳಿಸಿದರೆ, ಬದಲಾವಣೆ ಮಾಡಿದರೆ ಅಥವಾ ತೆಗೆದುಕೊಂಡು ಓಡಿ ಹೋದರೆ; ಅಥವಾ

(ಡಿ) ಯಾವುದೇ ವಿಷಯದ ಸಂಬಂಧದಲ್ಲಿ ಘೋಷಣೆಯನ್ನು ಮಾಡುವುದು ಅವನ ಅಧಿಕೃತ ಕರ್ತವ್ಯವಾಗಿರುವಲ್ಲಿ, ಅವನು ತಿಳಿದೂ ತಿಳಿದೂ ಸುಳ್ಳು ಘೋಷಣೆ ಮಾಡಿದರೆ; ಅಥವಾ

(ಇ) ಯಾವ ಹೇಳಿಕೆಯು ಸುಳ್ಳಾಗಿರುವುದೋ ಆ ಸುಳ್ಳು ಹೇಳಿಕೆಯ ಮೂಲಕ ಮತ್ತು ಸುಳ್ಳೆಂದು ತಿಳಿದೂ ಅಥವಾ ನಂಬಿಯೂ ಅಥವಾ ನಿಜವೆಂದು ನಂಬಲು ಆಗದಿರುವ ಹೇಳಿಕೆಯ ಮೂಲಕ, ಅಥವಾ ಯಾವುದೇ ಪುಸ್ತಕದಲ್ಲಿ ಅಥವಾ ದಾಖಲೆಯಲ್ಲಿ ಸುಳ್ಳು ನಮೂದನ್ನು ಮಾಡುವ ಮೂಲಕ ಅಥವಾ ಅದರಲ್ಲಿ ನಮೂದನ್ನು ಬಳಸಿಕೊಳ್ಳುವ ಮೂಲಕ; ಅಥವಾ ಸುಳ್ಳು ಹೇಳಿಕೆಯನ್ನೊಳಗೊಂಡಿರುವ ಯಾವುದೇ ದಸ್ತಾವೇಜನ್ನು ತಯಾರಿಸುವ ಮೂಲಕ ಅಥವಾ ನಿಜವಾದ ನಮೂದು ಮಾಡುವುದನ್ನು ಅಥವಾ ನಿಜವಾದ ಹೇಳಿಕೆಯನ್ನು ಒಳಗೊಂಡಿರುವ ದಸ್ತಾವೇಜನ್ನು ತಯಾರಿಸಲು ತಪ್ಪುವ ಮೂಲಕ ತನಗೆ ಅಥವಾ ಯಾರೇ ಇತರ ವ್ಯಕ್ತಿಗೆ ಯಾವುದೇ ವಿಶ್ರಾಂತಿ ವೇತನವನ್ನು, ಭತ್ಯೆವನ್ನು ಅಥವಾ ಇತರ ಪ್ರಯೋಜನವನ್ನು ಅಥವಾ ವಿಶೇಷ ಸವಲತ್ತನ್ನು ಪಡೆದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**35. ನೇಮಕದ ಸಮಯದಲ್ಲಿ ಸುಳ್ಳು ಘೋಷಣೆ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಅವನ ನೇಮಕದ ಸಮಯದಲ್ಲಿ, ಅವನ ನೇಮಕಕ್ಕೆ ಸಂಬಂಧಿಸಿದಂತೆ, ಉದ್ದೇಶಪೂರ್ವಕವಾಗಿ ಸುಳ್ಳು ಹೇಳಿಕೆಯನ್ನು ನೀಡಿದ್ದಾನೆಂದು, ಅಥವಾ ಘೋಷಣೆಯನ್ನು ಮಾಡಿದ್ದಾನೆಂದು ಕಂಡುಬಂದರೆ, ಭದ್ರತಾ ಪಡೆಯ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**36. ಭದ್ರತಾ ಪಡೆ ನ್ಯಾಯಾಲಯಕ್ಕೆ ಸಂಬಂಧಿಸಿದ ಅಪರಾಧಗಳು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು ಮಾಡಿದರೆ, ಎಂದರೆ,–

(ಎ) ಭದ್ರತಾ ಪಡೆ ನ್ಯಾಯಾಲಯದ ಮುಂದೆ ಸಾಕ್ಷಿದಾರನಾಗಿ ಹಾಜರಾಗಲು ಕ್ರಮಬದ್ಧವಾಗಿ ಸಮನು ಹೊರಡಿಸಿದಾಗ ಅಥವಾ ಆದೇಶಿಸಿದಾಗ ಉದ್ದೇಶಪೂರ್ವಕವಾಗಿ ಅಥವಾ ಯುಕ್ತ ಕಾರಣವಿಲ್ಲದೆ ಹಾಜರಾಗಲು ತಪ್ಪಿದರೆ; ಅಥವಾ

(ಬಿ) ಪ್ರಮಾಣ ಅಥವಾ ದೃಢೀಕರಣ ಮಾಡುವಂತೆ ಭದ್ರತಾ ಪಡೆ ನ್ಯಾಯಾಲಯವು ಕಾನೂನುಸಮ್ಮತವಾಗಿ ಅಗತ್ಯಪಡಿಸಿದಾಗ ಹಾಗೆ ಮಾಡಲು ನಿರಾಕರಿಸಿದರೆ; ಅಥವಾ

(ಸಿ) ಅವನ ಅಧಿಕಾರದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ದಸ್ತಾವೇಜನ್ನು ಹಾಜರುಪಡಿಸಬೇಕೆಂದು ಅಥವಾ ವಶಕ್ಕೆ ಒಪ್ಪಿಸಬೇಕೆಂದು ಭದ್ರತಾ ಪಡೆ ನ್ಯಾಯಾಲಯವು, ಕಾನೂನುಸಮ್ಮತವಾಗಿ ಅಗತ್ಯಪಡಿಸಿದಾಗ, ಅದನ್ನು ಹಾಜರುಪಡಿಸಲು ಅಥವಾ ವಶಕ್ಕೆ ಒಪ್ಪಿಸಲು ನಿರಾಕರಿಸಿದರೆ; ಅಥವಾ

(ಡಿ) ಸಾಕ್ಷಿದಾರನಾಗಿ, ಯಾವುದೇ ಪ್ರಶ್ನೆಗೆ ಉತ್ತರಿಸಲು ಕಾನೂನಿನ ಮೂಲಕ ಬದ್ಧನಾಗಿರುವಾಗ ಆ ಯಾವುದೇ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದರೆ; ಅಥವಾ

(ಇ) ಭದ್ರತಾ ಪಡೆ ನ್ಯಾಯಾಲಯದ ವ್ಯವಹರಣೆಗಳಲ್ಲಿ ಅಪಮಾನಕರ ಅಥವಾ ಬೆದರಿಸುವ ಭಾಷೆಯನ್ನು ಬಳಸುವ ಮೂಲಕ ಅಥವಾ ಯಾವುದೇ ಅಡ್ಡಿಯುಂಟು ಮಾಡುವ ಮೂಲಕ ಅಥವಾ ಅಡಚಣೆ ಉಂಟುಮಾಡುವ ಮೂಲಕ ಆ ನ್ಯಾಯಾಲಯ ನಿಂದನೆಯ ತಪ್ಪಿತಸ್ಥನಾದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

37. **ಸುಳ್ಳು ಸಾಕ್ಷ್ಯ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಯಾವುದೇ ಭದ್ರತಾ ಪಡೆ ನ್ಯಾಯಾಲಯದ ಮುಂದೆ, ಈ ಅಧಿನಿಯಮದ ಮೇರೆಗೆ ಪ್ರಮಾಣ ಅಥವಾ ದೃಢೀಕರಣ ಮಾಡಿಸಲು ಸಕ್ಷಮನಾದ ಯಾರೇ ಅಧಿಕಾರಿಯ ಮುಂದೆ ಅಥವಾ ಈ ಅಧಿನಿಯಮದ ಮೇರೆಗೆ ರಚಿತವಾದ ವಿಚಾರಣಾ ನ್ಯಾಯಾಲಯದ ಮುಂದೆ ಪ್ರಮಾಣ ಅಥವಾ ದೃಢೀಕರಣವನ್ನು ಮಾಡಿ ಸುಳ್ಳಾಗಿರುವ ಮತ್ತು ಸುಳ್ಳೆಂದು ತಿಳಿದೂ ಅಥವಾ ನಂಬಿಯೂ ಅಥವಾ ನಿಜವೆಂದು ನಂಬಲು ಆಗದಿರುವ ಯಾವುದೇ ಹೇಳಿಕೆಯನ್ನು ನೀಡಿದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

38. **ವೇತನವನ್ನು ಕಾನೂನುಬಾಹಿರವಾಗಿ ತಡೆಹಿಡಿದಿಡುವುದು.–** ಈ ಅಧಿನಿಯಮಕೊಳ್ಳಪಟ್ಟ ವ್ಯಕ್ತಿಯ ವೇತನವನ್ನು ಸ್ವೀಕರಿಸಿರುವ ಯಾರೇ ಅಧಿಕಾರಿ, ಸಹಾಯಕ ಕಮಾಂಡರ್ ಅಥವಾ ರೇಂಜರ್ ಗ್ರೇಡ್ I – ಇವರು ಅದನ್ನು ಕೊಡಬೇಕಾದಾಗ ಸಂದಾಯ ಮಾಡಲು ಕಾನೂನು ಬಾಹಿರವಾಗಿ ತಡೆ ಹಿಡಿದರೆ ಅಥವಾ ಸಂದಾಯ ಮಾಡಲು ನಿರಾಕರಿಸಿದರೆ ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಐದು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

39. **ತಕ್ಕುದಲ್ಲದ ನಡತೆ.–** ತಮ್ಮ ಸ್ಥಾನಕ್ಕೆ ತಕ್ಕುದಲ್ಲದ ಮತ್ತು ಅವನಿಂದ ಅಪೇಕ್ಷಿಸಲಾಗುವ ಚಾರಿತ್ರ್ಯಕ್ಕೆ ತಕ್ಕುದಲ್ಲದ ರೀತಿಯಲ್ಲಿ ವರ್ತಿಸುವ ಯಾರೇ ಅಧಿಕಾರಿಯು ಅಥವಾ ಸಹಾಯಕ ಕಮಾಂಡರ್‌ನು, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ವಜಾಗೊಳ್ಳುವುದಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

40. **ಸುವ್ಯವಸ್ಥೆ ಮತ್ತು ಶಿಸ್ತಿನ ಉಲ್ಲಂಘನೆ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರದಿದ್ದರೂ ಸಹ, ಭದ್ರತಾ ಪಡೆಯ ಸುವ್ಯವಸ್ಥೆಗೆ ಮತ್ತು ಶಿಸ್ತಿಗೆ ಧಕ್ಕೆತರುವಂಥ ಯಾವುದೇ ಕೃತ್ಯದ ಅಥವಾ ಲೋಪದ ತಪ್ಪಿತಸ್ಥನಾದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಏಳು ವರ್ಷಗಳವರೆಗೆ

ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**41. ಸಂಕೀರ್ಣ ಅಪರಾಧಗಳು.–** ಈ ಅಧಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಈ ಮುಂದಿನ ಯಾವುವೇ ಅಪರಾಧಗಳನ್ನು, ಎಂದರೆ,–

(ಎ) ಯಾವುದೇ ಸೇನಾ ತುಕಡಿ ಅಥವಾ ನೆಲೆ ಅಥವಾ ಪಥಸಂಚಲನದ ಕಮಾಂಡಿನಲ್ಲಿರುವ ಮತ್ತು ಅವನ ಕಮಾಂಡಿನಲ್ಲಿರುವ ಯಾರೊಬ್ಬ ವ್ಯಕ್ತಿಯನ್ನು ಹೊಡೆಯಲಾಗಿದೆಯೆಂದು ಅಥವಾ ಇತರ ರೀತಿಯಲ್ಲಿ ಕೆಟ್ಟ ರೀತಿಯಿಂದ ನಡೆದುಕೊಳ್ಳಲಾಗಿದೆಯೆಂದು ಅಥವಾ ಯಾರೇ ವ್ಯಕ್ತಿಯನ್ನು ಪೀಡಿಸಲಾಗಿದೆಯೆಂದು ಅಥವಾ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಗಲಭೆ ಉಂಟು ಮಾಡಲಾಗಿದೆಯೆಂದು, ಅಥವಾ ಯಾವುದೇ ದೊಂಬಿಯನ್ನು ಅಥವಾ ಅತಿಕ್ರಮ ಪ್ರವೇಶವನ್ನು ಮಾಡಲಾಗಿದೆಯೆಂದು ದೂರನ್ನು ಸ್ವೀಕರಿಸಿದ ನಂತರ, ಗಾಯಗೊಂಡಿರುವ ವ್ಯಕ್ತಿಗೆ ಯುಕ್ತ ಹಾನಿ ಪರಿಹಾರವನ್ನು ಕೊಡಲು ಅಥವಾ ಯುಕ್ತ ಅಧಿಕಾರಿಗೆ ಪ್ರಕರಣವನ್ನು ವರದಿ ಮಾಡಲು ವಿಫಲನಾದರೆ; ಅಥವಾ

(ಬಿ) ಯಾವುದೇ ಪೂಜಾಸ್ಥಳವನ್ನು ಅಪವಿತ್ರಗೊಳಿಸಿದರೆ, ಅಥವಾ ಇತರ ರೀತಿಯಲ್ಲಿ ಧರ್ಮವನ್ನು ಉದ್ದೇಶಪೂರ್ವಕವಾಗಿ ಅಪಮಾನಗೊಳಿಸಿದರೆ, ಅಥವಾ ಯಾರೇ ವ್ಯಕ್ತಿಯ ಧಾರ್ಮಿಕ ಭಾವನೆಗಳಿಗೆ ನೋವನ್ನುಂಟು ಮಾಡಿದರೆ; ಅಥವಾ

(ಸಿ) ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿದರೆ, ಮತ್ತು ಅಂಥ ಪ್ರಯತ್ನದಲ್ಲಿ ಅಂಥ ಅಪರಾಧ ಮಾಡುವ ಬಗ್ಗೆ ಯಾವುದೇ ಕೃತ್ಯ ಮಾಡಿದರೆ; ಅಥವಾ

(ಡಿ) ಸಹಾಯಕ ಕಮಾಂಡರ್ ದರ್ಜೆಗಿಂತ ಕಡಿಮೆ ದರ್ಜೆಯ ಹುದ್ದೆಯಲ್ಲಿ ಇದ್ದು, ಕರ್ತವ್ಯದ ಮೇಲಿಲ್ಲದಾಗ, ಯುಕ್ತ ಅಧಿಕಾರಿಯ ಅನುಮತಿಯಿಲ್ಲದೆ, ಶಿಬಿರದ ಒಳಗೆ ಅಥವಾ ಅದರ ಸುತ್ತಮುತ್ತ ಅಥವಾ ಯಾವುದೇ ಪಟ್ಟಣದ ಒಳಗೆ ಅಥವಾ ಅದರ ಸುತ್ತಮುತ್ತ ಅಥವಾ ಅಲ್ಲಿಗೆ ಹೋಗುವಾಗ ಅಥವಾ ಅಲ್ಲಿಂದ ಹಿಂತಿರುಗುವಾಗ ರೈಫಲ್‌ನ್ನು, ಖಡ್ಗವನ್ನು ಅಥವಾ ಇತರ ಮಾರಕ ಆಯುಧವನ್ನು ಒಯ್ಯುತ್ತಿರುವುದು ಕಂಡು ಬಂದರೆ; ಅಥವಾ

(ಇ) ಯಾರೇ ವ್ಯಕ್ತಿಗೆ ನೇಮಕವನ್ನು ಅಥವಾ ಸೇವೆಯಲ್ಲಿರುವ ಯಾರೇ ವ್ಯಕ್ತಿಗೆ ಗೈರು ಹಾಜರಿ ರಜೆಯನ್ನು ಅಥವಾ ಪದೋನ್ನತಿಯನ್ನು ಅಥವಾ ಯಾವುದೇ ಇತರ ಅನುಕೂಲ ದೊರಕಿಸಿಕೊಡುವುದಕ್ಕಾಗಿ ಅಥವಾ ಅವನಿಗೆ ತೃಪ್ತಿಪಡಿಸುವುದಕ್ಕಾಗಿ ತನಗಾಗಿ ಅಥವಾ ಯಾರೇ ಇತರೆ ವ್ಯಕ್ತಿಗಾಗಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯಾವುದೇ ಪ್ರತಿಫಲವಾಗಿ ಅಥವಾ

ಇನಾಮಾಗಿ ಯಾವುದೇ ಪಾರಿತೋಷವನ್ನು ಅಂಗೀಕರಿಸಿದರೆ ಅಥವಾ ಪಡೆದರೆ, ಅಥವಾ ಅಂಗೀಕರಿಸಲು ಒಪ್ಪಿದರೆ, ಅಥವಾ ಪಡೆಯಲು ಪ್ರಯತ್ನಿಸಿದರೆ; ಅಥವಾ

(ಎಫ್) ಅವನು ಎಲ್ಲಿ ಸೇವೆ ಸಲ್ಲಿಸುತ್ತಿರುತ್ತಾನೋ ಅ ದೇಶದ ಯಾರೇ ನಿವಾಸಿಯ ಅಥವಾ ಆ ದೇಶದಲ್ಲಿ ವಾಸಿಸುತ್ತಿರುವ ವ್ಯಕ್ತಿಯ ಸ್ವತ್ತಿನ ಅಥವಾ ಆ ವ್ಯಕ್ತಿಯ ವಿರುದ್ಧ ಯಾವುದೇ ಅಪರಾಧವನ್ನು ಮಾಡಿದರೆ

– ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**42. ಪ್ರಯತ್ನಿಸುವುದು.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, 15 ರಿಂದ 41 ರವರೆಗಿನ (ಎರಡೂ ಸೇರಿ) ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುವೇ ಅಪರಾಧಗಳನ್ನು ಮಾಡಲು ಪ್ರಯತ್ನಿಸಿದರೆ, ಅಂಥ ಪ್ರಯತ್ನದಲ್ಲಿ ಅಪರಾಧ ಮಾಡುವುದರ ಸಂಬಂಧದಲ್ಲಿ ಯಾವುದೇ ಕೃತ್ಯವನ್ನು ಮಾಡಿದರೆ ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಅಂಥ ಪ್ರಯತ್ನದ ದಂಡನೆಗೆ ಈ ಅಧಿನಿಯಮದಲ್ಲಿ ಯಾವುದೇ ವ್ಯಕ್ತ ಉಪಬಂಧವನ್ನು ಕಲ್ಪಿಸದಿರುವಲ್ಲಿ,–

(ಎ) ಮಾಡಲು ಪ್ರಯತ್ನಿಸಿದ ಅಪರಾಧಕ್ಕೆ ಮರಣದಂಡನೆಯನ್ನು ವಿಧಿಸಬಹುದಾಗಿದ್ದರೆ, ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ; ಮತ್ತು

(ಬಿ) ಮಾಡಲು ಪ್ರಯತ್ನಿಸಿದಂತಹ ಅಪರಾಧಕ್ಕೆ ಕಾರಾವಾಸದ ಶಿಕ್ಷೆ ವಿಧಿಸಬಹುದಾಗಿದ್ದರೆ, ಆ ಅಪರಾಧಕ್ಕಾಗಿ ಉಪಬಂಧಿಸಿದ ದೀರ್ಘಾವಧಿಯ ಅರ್ಧದಷ್ಟು ಅವಧಿಯವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ

– ಗುರಿಯಾಗತಕ್ಕದ್ದು.

**43. ಮಾಡಲಾದ ಅಪರಾಧಗಳಿಗೆ ದುಷ್ಪ್ರೇರಣೆ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, 15 ರಿಂದ 41 ರವರೆಗಿನ (ಎರಡೂ ಸೇರಿ) ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುವೇ ಅಪರಾಧಗಳನ್ನು ಮಾಡಲು ದುಷ್ಪ್ರೇರಿಸಿದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ ಹಾಗೆ ದುಷ್ಪ್ರೇರಿಸಲಾದ ಕೃತ್ಯವನ್ನು ದುಷ್ಪ್ರೇರಣೆಯ ಪರಿಣಾಮವಾಗಿ

ಮಾಡಿದ್ದರೆ ಮತ್ತು ಅಂಥ ದುಷ್ಪ್ರೇರಣೆಗೆ ದಂಡನೆ ವಿಧಿಸುವುದಕ್ಕಾಗಿ ಈ ಅಧಿನಿಯಮದಲ್ಲಿ ಯಾವುದೇ ವ್ಯಕ್ತ ಉಪಬಂಧವನ್ನು ಕಲ್ಪಿಸದಿರುವಲ್ಲಿ, ಆ ಅಪರಾಧಕ್ಕಾಗಿ ಉಪಬಂಧಿಸಲಾದ ದಂಡನೆಗೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**44. ಮಾಡದೇ ಇರುವ ಅಪರಾಧಗಳಿಗೆ ದುಷ್ಪ್ರೇರಣೆ.–** (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, 15ನೇ, 17ನೇ ಪ್ರಕರಣಗಳ ಮತ್ತು 18ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಮರಣ ದಂಡನೆಯಿಂದ ದಂಡನೀಯವಾಗಬಹುದಾದ ಯಾವುವೇ ಅಪರಾಧಗಳನ್ನು ಮಾಡಲು ದುಷ್ಪ್ರೇರಿಸಿದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಆ ಅಪರಾಧವನ್ನು ದುಷ್ಪ್ರೇರಣೆಯ ಪರಿಣಾಮವಾಗಿ ಮಾಡಿರದಿದ್ದರೆ, ಮತ್ತು ಅಂಥ ದುಷ್ಪ್ರೇರಣೆಯ ದಂಡನೆಗೆ ಈ ಅಧಿನಿಯಮದಲ್ಲಿ ಯಾವುದೇ ವ್ಯಕ್ತ ಉಪಬಂಧವನ್ನು ಕಲ್ಪಿಸದಿರುವಲ್ಲಿ, ಹದಿನಾಲ್ಕು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

(2) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು 15 ರಿಂದ 41ರವರೆಗಿನ (ಎರಡೂ ಸೇರಿ) ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿರುವ ಮತ್ತು ಕಾರಾವಾಸದಿಂದ ದಂಡನೀಯವಾಗಬಹುದಾದ ಯಾವುವೇ ಅಪರಾಧಗಳನ್ನು ಮಾಡಲು ದುಷ್ಪ್ರೇರಿಸಿದರೆ, ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದ ತರುವಾಯ, ಆ ಅಪರಾಧವನ್ನು ದುಷ್ಪ್ರೇರಣೆಯ ಪರಿಣಾಮವಾಗಿ ಮಾಡಿಲ್ಲದಿದ್ದರೆ, ಮತ್ತು ಅಂಥ ದುಷ್ಪ್ರೇರಣೆಯ ದಂಡನೆಗೆ ಈ ಅಧಿನಿಯಮದಲ್ಲಿ ಯಾವುದೇ ವ್ಯಕ್ತ ಉಪಬಂಧವನ್ನು ಕಲ್ಪಿಸದಿರುವಲ್ಲಿ, ಆ ಅಪರಾಧಕ್ಕಾಗಿ ಉಪಬಂಧಿಸಿದ ಗರಿಷ್ಠ ಅವಧಿಯ ಅರ್ಧದಷ್ಟರವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**45. ಸಿವಿಲ್ ಅಪರಾಧಗಳು.–** 46ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಭಾರತದಲ್ಲಿ ಅಥವಾ ಭಾರತದ ಆಚೆ ಯಾವುದೇ ಸಿವಿಲ್ ಅಪರಾಧವನ್ನು ಮಾಡಿದರೆ ಅವನನ್ನು ಈ ಅಧಿನಿಯಮದ ವಿರುದ್ಧದ ಅಪರಾಧದ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದು ಮತ್ತು ಈ ಪ್ರಕರಣದ ಮೇರೆಗೆ ಹಾಗೆ ಆರೋಪಿಸಲಾಗಿದ್ದರೆ ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಗೆ ಒಳಪಡಲು ಗುರಿಯಾಗತಕ್ಕದ್ದು ಮತ್ತು ಅಪರಾಧಿಯೆಂದು ನಿರ್ಣೀತನಾದ ತರುವಾಯ, ಈ ಮುಂದಿನಂತೆ ದಂಡಿತನಾಗತಕ್ಕದ್ದು, ಎಂದರೆ,–

(ಎ) ಅಪರಾಧವು ಭಾರತದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಮರಣದಂಡನೆಯಿಂದ ದಂಡನೀಯವಾಗುವಂಥ ಅಪರಾಧವಾಗಿದ್ದರೆ, ಅವನು ಮೇಲೆ ಹೇಳಿದ ಕಾನೂನಿನ ಮೇರೆಗೆ ಆ ಅಪರಾಧಕ್ಕಾಗಿ ಗೊತ್ತುಪಡಿಸಿರುವ ಯಾವುದೇ ದಂಡನೆಗೆ ಮತ್ತು ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು; ಮತ್ತು

(ಬಿ) ಯಾವುದೇ ಇತರೆ ಸಂದರ್ಭದಲ್ಲಿ, ಅವನು ಭಾರತದಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ಆ ಅಪರಾಧಕ್ಕಾಗಿ ಗೊತ್ತುಪಡಿಸಿರುವ ಯಾವುದೇ ದಂಡನೆಗೆ ಅಥವಾ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸಕ್ಕೆ ಅಥವಾ ಈ ಅಧಿನಿಯಮದಲ್ಲಿ ಹೇಳಿರುವಂಥ ಕಡಿಮೆ ದಂಡನೆಗೆ ಗುರಿಯಾಗತಕ್ಕದ್ದು.

**46. ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಗೊಳಪಡದ ಸಿವಿಲ್ ಅಪರಾಧಗಳು.–** ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯು, ಈ ಅಧಿನಿಯಮಕ್ಕೊಳಪಡದ ವ್ಯಕ್ತಿಗೆ ಸಂಬಂಧಿಸಿದಂತೆ ಅವನ ವಿರುದ್ಧ ಕೊಲೆ ಅಥವಾ ಕೊಲೆಯೆನಿಸದ ಅಪರಾಧಿಕ ನರಹತ್ಯೆಯ ಅಥವಾ ಈ ಅಧಿನಿಯಮಕ್ಕೊಳಪಡದ ವ್ಯಕ್ತಿಯ ಮೇಲೆ ಬಲಾತ್ ಸಂಭೋಗದ ಅಪರಾಧವನ್ನೆಸಗುವ ವ್ಯಕ್ತಿಯನ್ನು, ಅವನು,–

(ಎ) ಸಕ್ರಿಯ ಕರ್ತವ್ಯದ ಮೇಲಿರುವಾಗ; ಅಥವಾ

(ಬಿ) ಭಾರತದ ಹೊರಗಿನ ಯಾವುದೇ ಸ್ಥಳದಲ್ಲಿ

– ಸದರಿ ಅಪರಾಧಗಳ ಪೈಕಿ ಯಾವುದೇ ಅಪರಾಧಗಳನ್ನು ಮಾಡಿದ್ದ ಹೊರತು

– ಈ ಅಧಿನಿಯಮದ ಮೇರೆಗಿನ ಅಪರಾಧದ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದಲ್ಲ ಮತ್ತು ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಗೊಳಪಡತಕ್ಕದ್ದಲ್ಲ.

## ಅಧ್ಯಾಯ IV
## ದಂಡನೆಗಳು

**47. ಭದ್ರತಾ ಪಡೆ ನ್ಯಾಯಾಲಯಗಳು ವಿಧಿಸಬಹುದಾದ ದಂಡನೆಗಳು.–** ಈ ಅಧಿನಿಯಮಕ್ಕೊಳಪಟ್ಟ ಮತ್ತು ಭದ್ರತಾ ಪಡೆ ನ್ಯಾಯಾಲಯಗಳಿಂದ ಅಪರಾಧಿಯೆಂದು ನಿರ್ಣೀತರಾದ ವ್ಯಕ್ತಿಗಳು ಮಾಡಿದ ಅಪರಾಧಗಳಿಗೆ ಸಂಬಂಧಿಸಿದಂತೆ ಈ ಮುಂದಿನ ಪ್ರಮಾಣಕ್ಕನುಸಾರವಾಗಿ ದಂಡನೆಗಳನ್ನು ವಿಧಿಸಬಹುದು, ಎಂದರೆ,–

(ಎ) ಮರಣದಂಡನೆ;

(ಬಿ) ಭದ್ರತಾ ಪಡೆಯ ಅಭಿರಕ್ಷೆಯಲ್ಲಿ ಮೂರು ತಿಂಗಳನ್ನು ಮೀರದ ಅವಧಿಯ ಕಾರಾವಾಸವನ್ನು ಹೊರತುಪಡಿಸಿ, ಆಜೀವ ಕಾರಾವಾಸ ಅಥವಾ ಯಾವುದೇ ಇತರೆ ಕಡಿಮೆ ಅವಧಿಯ ಕಾರಾವಾಸ;

(ಸಿ) ಸೇವೆಯಿಂದ ವಜಾ;

(ಡಿ) ಭದ್ರತಾ ಪಡೆ ಅಭಿರಕ್ಷೆಯಲ್ಲಿ ಮೂರು ತಿಂಗಳನ್ನು ಮೀರದ ಅವಧಿಯ ಕಾರಾವಾಸ;

(ಇ) ರೇಂಜರ್ ದರ್ಜೆ I ರ ಸಂದರ್ಭದಲ್ಲಿ ಶ್ರೇಣಿಗಳಲ್ಲಿ ಕಡಿಮೆ ಮಾಡುವುದು ಅಥವಾ ಕೆಳ ಶ್ರೇಣಿಗೆ ಅಥವಾ ದರ್ಜೆಗೆ ಇಳಿಸುವುದು;

(ಎಫ್) ಶ್ರೇಣಿಯ ಜ್ಯೇಷ್ಠತೆಯ ಮುಟ್ಟುಗೋಲು ಮತ್ತು ಬಡ್ತಿಯು ಸೇವಾವಧಿಯನ್ನು ಅವಲಂಬಿಸಿರುವಲ್ಲಿ ಬಡ್ತಿಯ ಉದ್ದೇಶಕ್ಕಾಗಿ ಸೇವೆಯ ಎಲ್ಲ ಅಥವಾ ಯಾವುದೇ ಭಾಗದ ಮುಟ್ಟುಗೋಲು;

(ಜಿ) ವೇತನ ಬಡ್ತಿಯ ಅಥವಾ ವಿಶ್ರಾಂತಿ ವೇತನದ ಅಥವಾ ನಿಯಮಿಸಲಾದ ಇತರ ಉದ್ದೇಶಕ್ಕಾಗಿ ಸೇವೆಯ ಮುಟ್ಟುಗೋಲು;

(ಹೆಚ್) ರೇಂಜರ್ ದರ್ಜೆ I ಕ್ಕಿಂತ ಕಡಿಮೆ ಇರುವ ವ್ಯಕ್ತಿಗಳ ಸಂದರ್ಭದಲ್ಲಿ ಹೊರತು ತೀವ್ರ ವಾಗ್ದಂಡನೆ ಅಥವಾ ವಾಗ್ದಂಡನೆ;

(ಐ) ಸೇವೆಯಿಂದ ವಜಾ ಶಿಕ್ಷೆಗೆ ಒಳಗಾದ ವ್ಯಕ್ತಿಯ ಸಂದರ್ಭದಲ್ಲಿ ವೇತನ ಮತ್ತು ಭತ್ಯೆಗಳ ಎಲ್ಲಾ ಬಾಕಿಗಳ ಮತ್ತು ಹಾಗೆ ವಜಾಗೊಂಡ ಕಾಲದಲ್ಲಿ ಅವನಿಗೆ ಬರಬೇಕಾಗಿದ್ದ ಇತರ ಸರ್ಕಾರಿ ಹಣದ ಮುಟ್ಟುಗೋಲು;

(ಜೆ) ಯಾವ ಅಪರಾಧಕ್ಕಾಗಿ ಅವನು ಅಪರಾಧಿಯೆಂದು ನಿರ್ಣೀತನಾಗಿರುವನೋ ಆ ಅಪರಾಧದಿಂದ ಉಂಟಾದ ಯಾವುದೇ ರುಜುವಾತಾದ ನಷ್ಟ ಅಥವಾ ಹಾನಿಯನ್ನು ತುಂಬಿಕೊಡಲು ಅವನ ವೇತನ ಮತ್ತು ಭತ್ಯೆಗಳಿಂದ ಕಡಿತ.

(2) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರತಿಯೊಂದು ದಂಡನೆಗಳನ್ನು ಮೇಲೆ ತಿಳಿಸಿದ ಪ್ರಮಾಣದಲ್ಲಿ ಅದರ ಹಿಂದಿನ ಪ್ರತಿಯೊಂದು ದಂಡನೆಗಿಂತಲೂ ಕೆಳದರ್ಜೆಯದೆಂದು ಭಾವಿಸತಕ್ಕದ್ದು.

**48. ಭದ್ರತಾ ಪಡೆ ನ್ಯಾಯಾಲಯಗಳು ನೀಡಬಹುದಾದ ಪರ್ಯಾಯ ದಂಡನೆಗಳು.–** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಭದ್ರತಾ ಪಡೆ ನ್ಯಾಯಾಲಯವು, 15 ರಿಂದ 44ರ (ಎರಡೂ ಸೇರಿ) ವರೆಗಿನ ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದ ಯಾವುವೇ ಅಪರಾಧಗಳಿಗಾಗಿ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಅಪರಾಧಿ ಎಂದು ನಿರ್ಣಯಿಸಿದ ಮೇಲೆ ಯಾವ ದಂಡನೆಯಿಂದ ಆ ಅಪರಾಧಗಳಿಗೆ ಸದರಿ ಪ್ರಕರಣಗಳಲ್ಲಿ ದಂಡನೆ ವಿಧಿಸಬಹುದೆಂದು ಹೇಳಲಾಗಿದೆಯೋ ಆ ನಿರ್ದಿಷ್ಟ ದಂಡನೆಯನ್ನಾಗಲಿ ಅಥವಾ ಅದರ ಬದಲಾಗಿ, ಅಪರಾಧದ ಸ್ವರೂಪ ಮತ್ತು ಪ್ರಮಾಣವನ್ನು ಗಮನದಲ್ಲಿರಿಸಿಕೊಂಡು 47ನೇ ಪ್ರಕರಣದಲ್ಲಿ ನಿರೂಪಿಸಿರುವ ಪ್ರಮಾಣದಲ್ಲಿ ಯಾವುದಾದರೊಂದು ಕಡಿಮೆ ದಂಡನೆಯನ್ನು ವಿಧಿಸಬಹುದು.

**49. ದಂಡನೆಗಳ ಸಂಯೋಜನೆ.–** ಭದ್ರತಾ ಪಡೆ ನ್ಯಾಯಾಲಯದ ಶಿಕ್ಷೆಯನ್ನು, 47ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಿದ ದಂಡನೆಯ ಮತ್ತು ಆ ಉಪಪ್ರಕರಣದ (ಇ) ಯಿಂದ (ಜೆ) ವರೆಗಿನ (ಎರಡೂ ಸೇರಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಒಂದು ಅಥವಾ ಹೆಚ್ಚು ದಂಡನೆಗಳ ಜೊತೆಗೆ, ಅಥವಾ ಯಾವುದಾದರೊಂದು ಇತರ ದಂಡನೆ ಇಲ್ಲದೆ ವಿಧಿಸಬಹುದು.

**50. ಭದ್ರತಾ ಪಡೆ ನ್ಯಾಯಾಲಯಗಳಿಂದಲ್ಲದೆ ಅನ್ಯಥಾ ವಿಧಿಸಬಹುದಾದ ದಂಡನೆಗಳು.–** ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಗಳು ಮಾಡಿದ ಅಪರಾಧಗಳ ಸಂಬಂಧದಲ್ಲಿ ದಂಡನೆಗಳನ್ನು 51 ಮತ್ತು 53ನೇ ಪ್ರಕರಣಗಳಲ್ಲಿ ಹೇಳಿರುವ ರೀತಿಯಲ್ಲಿ ಭದ್ರತಾ ಪಡೆ ನ್ಯಾಯಾಲಯದ ಮಧ್ಯಪ್ರವೇಶವಿಲ್ಲದೆಯೂ ಸಹ ವಿಧಿಸಬಹುದು.

**51. ಲಘು ದಂಡನೆಗಳು.–** (1) 52ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಗ್ರೂಪ್ ಕಮಾಂಡರನ ದರ್ಜೆಯ ಮತ್ತು ಗ್ರೂಪ್ ಕಮಾಂಡರ ದರ್ಜೆಗೆ ಮೇಲ್ಪಟ್ಟ ಕಮಾಂಡರನು, ಅಧಿಕಾರಿಯನ್ನು ಅಥವಾ ಸಹಾಯಕ ಕಮಾಂಡರ್‌ನನ್ನು ಹೊರತುಪಡಿಸಿ ಈ ಅಧಿನಿಯಮದ ಮೇರೆಗೆ ಯಾರ ವಿರುದ್ಧ ದೋಷಾರೋಪಣೆಯನ್ನು ಹೊರಿಸಲಾಗಿದೆಯೋ ಈ ಅಧಿನಿಯಮಕ್ಕೊಳಪಟ್ಟ ಆ ಯಾರೇ ವ್ಯಕ್ತಿಯ ವಿರುದ್ಧ ನಿಯಮಿಸಲಾದ ರೀತಿಯಲ್ಲಿ ವ್ಯವಹರಣೆಯನ್ನು ನಡೆಸಬಹುದು ಮತ್ತು ಅಂಥ ವ್ಯಕ್ತಿಗೆ ನಿಯಮಿಸಿದಷ್ಟರ ಮಟ್ಟಿಗೆ ಈ ಮುಂದಿನ ಒಂದು ಅಥವಾ ಹೆಚ್ಚು ಶಿಕ್ಷೆಗಳನ್ನು ವಿಧಿಸಬಹುದು, ಎಂದರೆ,–

(ಎ) ಇಪ್ಪತ್ತೆಂಟು ದಿನಗಳವರೆಗೆ ಭದ್ರತಾ ಪಡೆ ಅಭಿರಕ್ಷೆಯಲ್ಲಿ ಕಾರಾವಾಸ;

(ಬಿ) ಇಪ್ಪತ್ತೆಂಟು ದಿನಗಳವರೆಗೆ ತಡೆಹಿಡಿದಿರಿಸುವುದು;

(ಸಿ) ಇಪ್ಪತ್ತೆಂಟು ದಿನಗಳವರೆಗೆ ಸೈನಿಕ ನೆಲೆಗಳಿಗೆ ಸೀಮಿತಗೊಳಿಸುವುದು;

(ಡಿ) ಹೆಚ್ಚಿನ ಪಹರೆ ಕೆಲಸವನ್ನು ಅಥವಾ ಕರ್ತವ್ಯಗಳನ್ನು ಮಾಡಿಸುವುದು;

(ಇ) ಯಾವುದೇ ಹಂಗಾಮಿ ದರ್ಜೆಯಿಂದ ವಂಚಿತನನ್ನಾಗಿಸುವುದು; ಆದರೆ ಅಂಥ ದರ್ಜೆಯನ್ನು ಅವನು ಎರಡು ವರ್ಷಗಳಿಗಿಂತ ಹೆಚ್ಚಿಗೆ ಧಾರಣ ಮಾಡಿರಬಾರದು.

(ಎಫ್) ತೀವ್ರ ವಾಗ್ದಂಡನೆ ಅಥವಾ ವಾಗ್ದಂಡನೆ;

(ಜಿ) ಯಾವ ಅಪರಾಧಕ್ಕಾಗಿ ಅವನನ್ನು ಶಿಕ್ಷಿಸಲಾಯಿತೋ ಆ ಅಪರಾಧದಿಂದ ಉಂಟಾದ ಯಾವುದೇ ನಷ್ಟವನ್ನು ಅಥವಾ ಹಾನಿಯನ್ನು ತುಂಬಿಕೊಡಲು ಅಗತ್ಯವಿರುವ ಯಾವುದೇ ಮೊತ್ತವನ್ನು ಅವನ ವೇತನದಿಂದ ಮತ್ತು ಭತ್ಯೆಗಳಿಂದ ಕಡಿತಗೊಳಿಸುವುದು.

(2) ಒಂದು ಸಮೂಹವನ್ನು ಸ್ಕ್ವಾಡ್ರನ್ ಕಮಾಂಡರ್ ಅಥವಾ ಟೀಮ್ ಕಮಾಂಡರನ ದರ್ಜೆಯ ಅಧಿಕಾರಿಯು ತಾತ್ಕಾಲಿಕವಾಗಿ ಕಮಾಂಡ್ ಮಾಡುತ್ತಿದ್ದರೆ, ಅಂಥ ಅಧಿಕಾರಿಯು (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಕಮಾಂಡರ್‌ನ ಸಂಪೂರ್ಣ ಅಧಿಕಾರಗಳನ್ನು ಹೊಂದಿರತಕ್ಕದ್ದು.

(3) 52ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಸ್ಕ್ವಾಡ್ರನ್‌ನನ್ನು ಅಥವಾ ಟೀಮನ್ನು ಅಥವಾ ಯಾವುದೇ ಸೇನಾ ತುಕಡಿಯನ್ನು ಕಮಾಂಡ್ ಮಾಡುತ್ತಿರುವ ಸ್ಕ್ವಾಡ್ರನ್ ಕಮಾಂಡರ್ ಅಥವಾ ಟೀಮಿನ ಕಮಾಂಡರನು, ಈ ಅಧಿನಿಯಮದ ಮೇರೆಗೆ ಯಾರ ವಿರುದ್ಧ ಅಪರಾಧದ ದೋಷಾರೋಪಣೆ ಮಾಡಲಾಗಿದೆಯೋ ಈ ಅಧಿನಿಯಮಕ್ಕೊಳಪಟ್ಟ ಆ ವ್ಯಕ್ತಿಯ ವಿರುದ್ಧ, ಅಧಿಕಾರಿಯನ್ನು ಅಥವಾ ಸಹಾಯಕ ಕಮಾಂಡರನನ್ನು ಹೊರತುಪಡಿಸಿ ವ್ಯವಹರಣೆ ಹೂಡುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು, ಅಂಥ ವ್ಯಕ್ತಿಗೆ (1)ನೇ ಉಪಪ್ರಕರಣದ (ಎ) ಯಿಂದ (ಡಿ) ವರೆಗಿನ ಮತ್ತು (ಜಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಒಂದು ಅಥವಾ ಹೆಚ್ಚು ದಂಡನೆಗಳನ್ನು ನಿಯಮಿಸಿರುವಷ್ಟರ ಮಟ್ಟಿಗೆ ವಿಧಿಸತಕ್ಕದ್ದು. ಆದರೆ, (ಎ), (ಬಿ) ಮತ್ತು (ಸಿ) ಖಂಡಗಳ ಪ್ರತಿಯೊಂದರ ಅಡಿಯಲ್ಲಿ ವಿಧಿಸಲಾದ ದಂಡನೆಯ ಗರಿಷ್ಠ ಮಿತಿಯು ಹದಿನಾಲ್ಕು ದಿನಗಳನ್ನು ಮೀರತಕ್ಕದ್ದಲ್ಲ.

**52. 51ನೇ ಪ್ರಕರಣದ ಮೇರೆಗೆ ದಂಡನೆಗಳ ಪರಿಮಿತಿ.–** (1) 51ನೇ ಪ್ರಕರಣದ (1)ನೇ ಉಪಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಎರಡು ಅಥವಾ ಹೆಚ್ಚು ದಂಡನೆಗಳನ್ನು ವಿಧಿಸಿರುವ ಸಂದರ್ಭದಲ್ಲಿ, (ಸಿ) ಅಥವಾ (ಡಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಗಳು (ಎ) ಖಂಡದಲ್ಲಿ ಅಥವಾ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ದಂಡನೆ ಕೊನೆಗೊಂಡ ನಂತರವೇ ಪರಿಣಾಮಕಾರಿಯಾಗತಕ್ಕದ್ದು.

(2) ಸದರಿ (ಎ), (ಬಿ) ಮತ್ತು (ಸಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಎರಡು ಅಥವಾ ಎರಡಕ್ಕಿಂತ ಹೆಚ್ಚು ದಂಡನೆಗಳನ್ನು ಒಟ್ಟೊಟ್ಟಿಗೆ ಒಬ್ಬ ವ್ಯಕ್ತಿಗೆ ವಿಧಿಸಿರುವಾಗ, ಅಥವಾ ಸದರಿ ದಂಡನೆಗಳಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ದಂಡನೆಗಳನ್ನು ಈಗಾಗಲೇ ಅನುಭವಿಸುತ್ತಿರುವಾಗ ದಂಡನೆಗಳ ಇಡೀ ಅವಧಿಯು ಒಟ್ಟು ಐವತ್ತಾರು ದಿನಗಳನ್ನು ಮೀರತಕ್ಕದ್ದಲ್ಲ.

(3) ಸದರಿ (ಎ), (ಬಿ) ಮತ್ತು (ಸಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಗಳನ್ನು ರೇಂಜರ್ ಗ್ರೇಡ್–I ದರ್ಜೆಯಲ್ಲಿರುವ ಅಥವಾ ಯಾವ ಅಪರಾಧಕ್ಕಾಗಿ ಅವನನ್ನು ದಂಡಿಸಲಾಗಿದೆಯೋ ಆ ಅಪರಾಧವನ್ನು ಮಾಡುವ ಕಾಲದಲ್ಲಿ ಅಂಥ ದರ್ಜೆಯಲ್ಲಿದ್ದ ಯಾರೇ ವ್ಯಕ್ತಿಗೆ ವಿಧಿಸತಕ್ಕದ್ದಲ್ಲ.

(4) 51ನೇ ಪ್ರಕರಣದ (1)ನೇ ಉಪಪ್ರಕರಣದ (ಎಫ್) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಯನ್ನು ರೇಂಜರ್ ಗ್ರೇಡ್–I ದರ್ಜೆಗಿಂತ ಕಡಿಮೆ ದರ್ಜೆಯ ಯಾರೇ ವ್ಯಕ್ತಿಗೆ ವಿಧಿಸತಕ್ಕದ್ದಲ್ಲ.

**53. ಇನ್‌ಸ್ಪೆಕ್ಟರ್ ಜನರಲ್‌ರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗಳು, ಸ್ಕ್ವಾಡ್ರನ್ ಕಮಾಂಡರುಗಳ ದರ್ಜೆಯ ಅಧಿಕಾರಿಗಳಿಗೆ ಅಥವಾ ಅವರಿಗಿಂತ ಕಡಿಮೆ ದರ್ಜೆಯ ಅಧಿಕಾರಿಗಳಿಗೆ ದಂಡನೆ ವಿಧಿಸುವುದು.–** ಇನ್‌ಸ್ಪೆಕ್ಟರ್ ಜನರಲ್ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು ನಿಯಮಿಸಿದ ರೀತಿಯಲ್ಲಿ ಯಾರ ವಿರುದ್ಧ ಈ ಅಧಿನಿಯಮದ ಮೇರೆಗಿನ ಅಪರಾಧದ ಆಪಾದನೆ ಮಾಡಲಾಗಿದೆಯೋ ಆ ಸ್ಕ್ವಾಡ್ರನ್ ಕಮಾಂಡರನ ದರ್ಜೆಯ ಅಧಿಕಾರಿಯ ಅಥವಾ ಆ ದರ್ಜೆಗಿಂತ ಕಡಿಮೆ ದರ್ಜೆಯ ಅಧಿಕಾರಿಯ ವಿರುದ್ಧ ವ್ಯವಹರಣೆಯನ್ನು ಹೂಡಬಹುದು ಮತ್ತು ಈ ಮುಂದಿನ ಒಂದು ಅಥವಾ ಹೆಚ್ಚು ದಂಡನೆಗಳನ್ನು ವಿಧಿಸಬಹುದು, ಎಂದರೆ,–

(ಎ) ಜ್ಯೇಷ್ಠತೆಯ ಮುಟ್ಟುಗೋಲು, ಅಥವಾ ಅವರಲ್ಲಿ ಯಾರೊಬ್ಬರ ಬಡ್ತಿಯು ಸೇವಾವಧಿಯ ಮೇಲೆ ಅವಲಂಬಿತವಾಗಿದೆಯೋ ಅವರ ಸಂದರ್ಭದಲ್ಲಿ, ಒಂದು ವರ್ಷವನ್ನು ಮೀರದ ಅವಧಿಗಾಗಿ ಬಡ್ತಿಯ ಉದ್ದೇಶಕ್ಕಾಗಿ ಸೇವೆಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು, ಆದರೆ, ಹಾಗೆ ವಿಧಿಸುವುದಕ್ಕೆ ಮುಂಚೆ ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಗೆ ಒಳಗಾಗಲು ಆತನು ಆಯ್ಕೆ ಮಾಡಿಕೊಳ್ಳುವ ಆತನ ಹಕ್ಕಿಗೆ ಒಳಪಟ್ಟಿರಬೇಕು;

(ಬಿ) ತೀವ್ರ ವಾಗ್ದಂಡನೆ ಅಥವಾ ವಾಗ್ದಂಡನೆ;

(ಸಿ) ಯಾವ ಅಪರಾಧಕ್ಕಾಗಿ ಅವನನ್ನು ಅಪರಾಧಿಯೆಂದು ನಿರ್ಣಯಿಸಲಾಯಿತೋ ಆ ಅಪರಾಧದಿಂದ ಉಂಟಾದ ಯಾವುದೇ ರುಜುವಾತಾದ ನಷ್ಟವನ್ನು ಅಥವಾ ಹಾನಿಯನ್ನು

ತುಂಬಿಕೊಡಲು ಅಗತ್ಯವಿರುವ ಯಾವುದೇ ಮೊತ್ತವನ್ನು ಅವನ ವೇತನದಿಂದ ಮತ್ತು ಭತ್ಯೆಗಳಿಂದ ಕಡಿತಗೊಳಿಸುವುದು.

54. **ಸಹಾಯಕ ಕಮಾಂಡರನ ದರ್ಜೆಯ ವ್ಯಕ್ತಿಗಳಿಗೆ ದಂಡನೆ.**– (1) ಡೆಪ್ಯೂಟಿ ಇನ್‌ಸ್ಪೆಕ್ಟರ್ ಜನರಲ್‌ನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು, ನಿಯಮಿಸಿದ ರೀತಿಯಲ್ಲಿ, ಈ ಅಧಿನಿಯಮದ ಮೇರೆಗೆ ಯಾರ ವಿರುದ್ಧ ಅಪರಾಧದ ದೋಷಾರೋಪ ಮಾಡಲಾಗಿದೆಯೋ ಆ ಸಹಾಯಕ ಕಮಾಂಡರನ ದರ್ಜೆಯ ವ್ಯಕ್ತಿಯ ವಿರುದ್ಧ ವ್ಯವಹರಣೆಯನ್ನು ನಡೆಸಬಹುದು ಮತ್ತು ಈ ಮುಂದಿನ ದಂಡನೆಗಳ ಪೈಕಿ ಒಂದು ಅಥವಾ ಹೆಚ್ಚು ದಂಡನೆಗಳನ್ನು ವಿಧಿಸಬಹುದು, ಎಂದರೆ,–

(ಎ) ಜ್ಯೇಷ್ಠತೆಯ ಮುಟ್ಟುಗೋಲು, ಅಥವಾ ಅವರಲ್ಲಿ ಯಾರೊಬ್ಬರ ಬಡ್ತಿಯು ಸೇವಾವಧಿಯ ಮೇಲೆ ಅವಲಂಬಿತವಾಗಿದೆಯೋ ಅವರ ಸಂದರ್ಭದಲ್ಲಿ, ಒಂದು ವರ್ಷವನ್ನು ಮೀರದ ಅವಧಿಗಾಗಿ ಬಡ್ತಿಯ ಉದ್ದೇಶಕ್ಕಾಗಿ ಸೇವೆಯನ್ನು ಮುಟ್ಟುಗೋಲು ಹಾಕಿಕೊಳ್ಳುವುದು, ಆದರೆ, ಹಾಗೆ ವಿಧಿಸುವುದಕ್ಕೆ ಮುಂಚೆ ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಗೆ ಒಳಗಾಗಲು ಆತನು ಆಯ್ಕೆ ಮಾಡಿಕೊಳ್ಳುವ ಆತನ ಹಕ್ಕಿಗೆ ಒಳಪಟ್ಟಿರಬೇಕು;

(ಬಿ) ತೀವ್ರ ವಾಗ್ದಂಡನೆ ಅಥವಾ ವಾಗ್ದಂಡನೆ;

(ಸಿ) ಯಾವ ಅಪರಾಧಕ್ಕಾಗಿ ಅವನನ್ನು ಅಪರಾಧಿಯೆಂದು ನಿರ್ಣಯಿಸಲಾಯಿತೋ ಆ ಅಪರಾಧದಿಂದ ಉಂಟಾದ ಯಾವುದೇ ರುಜುವಾತಾದ ನಷ್ಟವನ್ನು ಅಥವಾ ಹಾನಿಯನ್ನು ತುಂಬಿಕೊಡಲು ಅಗತ್ಯವಿರುವ ಯಾವುದೇ ಮೊತ್ತವನ್ನು ಅವನ ವೇತನದಿಂದ ಮತ್ತು ಭತ್ಯೆಗಳಿಂದ ಕಡಿತಗೊಳಿಸುವುದು.

(2) ಗ್ರೂಪ್ ಕಮಾಂಡರ್‌ನ ದರ್ಜೆಯ ಅಧಿಕಾರಿಯು, ನಿಯಮಿಸಿದ ರೀತಿಯಲ್ಲಿ, ಈ ಅಧಿನಿಯಮದ ಮೇರೆಗೆ ಯಾರ ವಿರುದ್ಧ ಅಪರಾಧದ ದೋಷಾರೋಪ ಮಾಡಲಾಗಿದೆಯೋ ಆ ಸಹಾಯಕ ಕಮಾಂಡರನ ದರ್ಜೆಯ ವ್ಯಕ್ತಿಯ ವಿರುದ್ಧ ವ್ಯವಹರಣೆಯನ್ನು ನಡೆಸಬಹುದು ಮತ್ತು ಈ ಮುಂದಿನ ದಂಡನೆಗಳ ಪೈಕಿ ಯಾವುದೇ ಒಂದು ದಂಡನೆಯನ್ನು ಅಥವಾ ಅವೆರಡೂ ದಂಡನೆಗಳನ್ನು ವಿಧಿಸಬಹುದು, ಎಂದರೆ,–

(ಎ) ತೀವ್ರ ವಾಗ್ದಂಡನೆ ಅಥವಾ ವಾಗ್ದಂಡನೆ;

(ಬಿ) ಯಾವ ಅಪರಾಧಕ್ಕಾಗಿ ಅವನನ್ನು ಅಪರಾಧಿಯೆಂದು ನಿರ್ಣಯಿಸಲಾಯಿತೋ ಆ ಅಪರಾಧದಿಂದ ಉಂಟಾದ ಯಾವುದೇ ರುಜುವಾತಾದ ನಷ್ಟವನ್ನು ಅಥವಾ ಹಾನಿಯನ್ನು

ತುಂಬಿಕೊಡಲು ಅಗತ್ಯವಿರುವ ಯಾವುದೇ ಮೊತ್ತವನ್ನು ಅವನ ವೇತನದಿಂದ ಮತ್ತು ಭತ್ಯೆಗಳಿಂದ ಕಡಿತಗೊಳಿಸುವುದು.

## ಅಧ್ಯಾಯ V

## ದಸ್ತಗಿರಿ ಮತ್ತು ಅಧಿವಿಚಾರಣೆ ಮಾಡುವುದಕ್ಕೆ ಮುಂಚೆ ವ್ಯವಹರಣೆಗಳು

**55. ಅಪರಾಧಿಗಳ ಅಭಿರಕ್ಷೆ.–** (1) ಯಾರ ಮೇಲೆ ಅಪರಾಧದ ದೋಷಾರೋಪಣೆ ಹೊರಿಸಲಾಗಿದೆಯೋ ಈ ಅಧಿನಿಯಮಕ್ಕೊಳಪಟ್ಟ ಆ ಯಾರೇ ವ್ಯಕ್ತಿಯನ್ನು ಯಾರೇ ಮೇಲಧಿಕಾರಿಯ ಆದೇಶದ ಮೇರೆಗೆ ಭದ್ರತಾ ಪಡೆಯ ಅಭಿರಕ್ಷೆಗೆ ತೆಗೆದುಕೊಳ್ಳಬಹುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅಧಿಕಾರಿಯು ಇತರ ಯಾರೇ ಅಧಿಕಾರಿಯನ್ನು ಅಂಥ ಇತರ ಅಧಿಕಾರಿಯು ಉನ್ನತ ದರ್ಜೆಯವನಾಗಿದ್ದರೂ ಬೀದಿಜಗಳದಲ್ಲಿ ಅಥವಾ ಗಲಭೆಯಲ್ಲಿ ತೊಡಗಿದ್ದರೆ ಭದ್ರತಾ ಪಡೆ ಅಭಿರಕ್ಷೆಗೆ ತೆಗೆದುಕೊಳ್ಳಲು ಆದೇಶಿಸಬಹುದು.

**56. ತಡೆಹಿಡಿದಿರಿಸುವುದಕ್ಕೆ ಸಂಬಂಧಿಸಿದಂತೆ ಕಮಾಂಡರನ ಕರ್ತವ್ಯ.–** (1) ಒಂದು ಅಪರಾಧದ ದೋಷಾರೋಪಣೆಯನ್ನು ಹೊರಿಸಲಾಗಿರುವ ತನ್ನ ಕಮಾಂಡಿನಲ್ಲಿರುವ ವ್ಯಕ್ತಿಯನ್ನು, ಆ ಅಪರಾಧವನ್ನು ತನಿಖೆ ಮಾಡದೆಯೇ ಅಭಿರಕ್ಷೆಗೆ ಒಪ್ಪಿಸಲಾಗಿದೆಯೆಂದು ಅವನಿಗೆ ವರದಿ ಬಂದ ನಂತರ, ಸಾರ್ವಜನಿಕ ಸೇವೆಯನ್ನು ಗಮನದಲ್ಲಿಟ್ಟುಕೊಂಡು ಆ ಅವಧಿಯೊಳಗೆ ಆ ತನಿಖೆ ಮಾಡುವುದು ಕಾರ್ಯ ಸಾಧ್ಯವಲ್ಲವೆಂದು ಅವನಿಗೆ ಕಂಡು ಬಂದ ಹೊರತು ನಲವತ್ತೆಂಟು ಗಂಟೆಗಳಿಗಿಂತ ಹೆಚ್ಚಿನ ಅವಧಿಗೆ ಆತನನ್ನು ಅಭಿರಕ್ಷೆಯಲ್ಲಿ ಇಟ್ಟುಕೊಂಡಿಲ್ಲವೆಂಬ ಬಗ್ಗೆ ಎಚ್ಚರಿಕೆ ವಹಿಸುವುದು ಪ್ರತಿಯೊಬ್ಬ ಕಮಾಂಡರನ ಕರ್ತವ್ಯವಾಗಿರತಕ್ಕದ್ದು.

(2) ನಲವತ್ತೆಂಟು ಗಂಟೆಗಳ ಅವಧಿಯನ್ನು ಮೀರಿ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಿಕೊಂಡಿರುವ ಪ್ರತಿಯೊಬ್ಬ ವ್ಯಕ್ತಿಯ ಸಂದರ್ಭದಲ್ಲಿ ಮತ್ತು ಅದರ ಸಂಬಂಧದ ಕಾರಣಗಳನ್ನು ಕಮಾಂಡರನು ಅವನ ನಿಕಟ ಮೇಲ್ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ನಲವತ್ತೆಂಟು ಗಂಟೆಗಳ ಅವಧಿಯನ್ನು ಲೆಕ್ಕ ಹಾಕುವಾಗ, ಭಾನುವಾರಗಳನ್ನು ಮತ್ತು ಇತರೆ ಸಾರ್ವಜನಿಕ ರಜಾ ದಿನಗಳನ್ನು ಬಿಟ್ಟುಬಿಡತಕ್ಕದ್ದು.

(4) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕೇಂದ್ರ ಸರ್ಕಾರವು, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು, ಅವನು ಮಾಡಿದ ಯಾವುದೇ ಅಪರಾಧಕ್ಕಾಗಿ ಯಾವುದೇ

ಸಕ್ಷಮ ಪ್ರಾಧಿಕಾರದಿಂದ ಅಧಿವಿಚಾರಣೆ ಇತ್ಯರ್ಥದಲ್ಲಿರುವಾಗ, ಭದ್ರತಾ ಪಡೆ ಅಭಿರಕ್ಷೆಗೆ ತೆಗೆದುಕೊಳ್ಳಬಹುದಾದ ಮತ್ತು ತಡೆಹಿಡಿದಿರಿಸಿಕೊಳ್ಳಬಹುದಾದ ರೀತಿಯನ್ನು ಮತ್ತು ಅವಧಿಯನ್ನು ಉಪಬಂಧಿಸಿ ನಿಯಮಗಳನ್ನು ರಚಿಸಬಹುದು.

**57. ಒಪ್ಪಿಸುವಿಕೆಯ ಮತ್ತು ಅಧಿವಿಚಾರಣೆಯ ನಡುವಿನ ಅಂತರ.–** 55ನೇ ಪ್ರಕರಣದಲ್ಲಿ ಹೇಳಲಾದಂಥ ಮತ್ತು ಸಕ್ರಿಯ ಕರ್ತವ್ಯದ ಮೇಲಿಲ್ಲದಂಥ ಯಾರೇ ವ್ಯಕ್ತಿಯನ್ನು ಅವನ ಅಧಿವಿಚಾರಣೆ ನಡೆಸುವುದಕ್ಕೆ ಭದ್ರತಾ ಪಡೆ ನ್ಯಾಯಾಲಯವು ಸಮಾವೇಶಗೊಳ್ಳದಿರುವ ಕಾರಣದಿಂದ ಎಂಟು ದಿನಗಳಿಗಿಂತ ಹೆಚ್ಚಿನ ಅವಧಿಗೆ ಅವನನ್ನು ಉಳಿಸಿಕೊಂಡಿರುವ ಪ್ರತಿಯೊಂದು ಸಂದರ್ಭದಲ್ಲಿಯೂ, ವಿಳಂಬಕ್ಕಾಗಿ ಕಾರಣಗಳನ್ನು ನೀಡಿ ಅವನ ಕಮಾಂಡರನು ಒಂದು ವಿಶೇಷ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ಭದ್ರತಾ ಪಡೆ ನ್ಯಾಯಾಲಯವು ಸಮಾವೇಶಗೊಳ್ಳುವವರೆಗೆ ಅಥವಾ ಅಂಥ ವ್ಯಕ್ತಿಯನ್ನು ಅಭಿರಕ್ಷೆಯಿಂದ ಬಿಡುಗಡೆ ಮಾಡುವವರೆಗೆ ಪ್ರತಿ ಎಂಟು ದಿನಗಳ ಅಂತರಗಳಲ್ಲಿ ಅದೇ ರೀತಿಯ ವರದಿಯನ್ನು ಕಳುಹಿಸಿಕೊಡತಕ್ಕದ್ದು.

**58. ಸಿವಿಲ್ ಅಧಿಕಾರಿಗಳಿಂದ ದಸ್ತಗಿರಿ.–** ಈ ಅಧಿನಿಯಮದ ಮೇರೆಗೆ ಅಪರಾಧದ ಆಪಾದಿತನಾಗಿರುವ, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಯಾರೇ ಮ್ಯಾಜಿಸ್ಟ್ರೇಟನ ಅಥವಾ ಪೋಲೀಸ್ ಅಧಿಕಾರಿಯ ಅಧಿಕಾರವ್ಯಾಪ್ತಿಯೊಳಗಿದ್ದಾಗಲೆಲ್ಲಾ, ಅಂಥ ಮ್ಯಾಜಿಸ್ಟ್ರೇಟ್‌ನು ಅಥವಾ ಪೋಲೀಸ್ ಅಧಿಕಾರಿಯು ಅವನ ದಸ್ತಗಿರಿಗೆ ನೆರವು ನೀಡತಕ್ಕದ್ದು ಮತ್ತು ಅವನ ಕಮಾಂಡರ್ ಅಥವಾ ಆ ಸಂಬಂಧವಾಗಿ ಕಮಾಂಡರನಿಂದ ಅಧಿಕಾರ ಪಡೆದ ಅಧಿಕಾರಿಯು ಆ ಬಗ್ಗೆ ಸಹಿ ಮಾಡಿದ ಒಂದು ಲಿಖಿತ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅಂಥ ವ್ಯಕ್ತಿಯನ್ನು ಭದ್ರತಾ ಪಡೆ ಅಭಿರಕ್ಷೆಗೆ ಒಪ್ಪಿಸತಕ್ಕದ್ದು.

**59. ತ್ಯಜಿಸಿ ಹೋದವರನ್ನು ಸೆರೆಹಿಡಿಯುವುದು.–** (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ತ್ಯಜಿಸಿ ಹೋದಾಗಲೆಲ್ಲಾ, ಅವನು ಯಾವ ಘಟಕಕ್ಕೆ ಸೇರಿರುತ್ತಾನೋ ಆ ಘಟಕದ ಕಮಾಂಡರನ ಅಭಿಪ್ರಾಯದಲ್ಲಿ ತ್ಯಜಿಸಿ ಹೋದವನನ್ನು ಸೆರೆಹಿಡಿಯಲು ನೆರವನ್ನು ಒದಗಿಸಲು ಸಾಧ್ಯವಿರುವಂತಹ ಸಿವಿಲ್ ಅಧಿಕಾರಿಗಳಿಗೆ ತ್ಯಜಿಸಿ ಹೋಗಿರುವುದರ ಬಗ್ಗೆ ಮಾಹಿತಿಯನ್ನು ನೀಡತಕ್ಕದ್ದು ಮತ್ತು ಅಂಥ ಅಧಿಕಾರಿಗಳು, ಆ ತರುವಾಯ ಒಬ್ಬ ವ್ಯಕ್ತಿಯ ಬಂಧನಕ್ಕಾಗಿ ಮ್ಯಾಜಿಸ್ಟ್ರೇಟನು ವಾರಂಟ್‌ನ್ನು ಹೊರಡಿಸಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಸದರಿ ತ್ಯಜಿಸಿ ಹೋದವನ ಬಂಧನಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು ಮತ್ತು ತ್ಯಜಿಸಿ ಹೋದವವನನ್ನು ಬಂಧಿಸಿದಾಗ ಅವನನ್ನು ಭದ್ರತಾ ಪಡೆ ಅಭಿರಕ್ಷೆಗೆ ಒಪ್ಪಿಸತಕ್ಕದ್ದು.

(2) ಈ ಅಧಿನಿಯಮಕ್ಕೊಳಪಟ್ಟಿರುವವನೆಂದು, ಮತ್ತು ತ್ಯಜಿಸಿ ಹೋಗುವವನೆಂದು ಯುಕ್ತವಾಗಿ ನಂಬಲು ಕಾರಣಗಳಿರುವ ಯಾರೇ ವ್ಯಕ್ತಿಯನ್ನು ಯಾರೇ ಪೊಲೀಸ್ ಅಧಿಕಾರಿಯು ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು ಮತ್ತು ಅವನನ್ನು ವಿಳಂಬಮಾಡದೆ ಕಾನೂನಿಗನುಸಾರವಾಗಿ ವ್ಯವಹರಿಸಲು ಅತ್ಯಂತ ಸಮೀಪದ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸತಕ್ಕದ್ದು.

**60. ಅನುಮತಿ ಇಲ್ಲದೆ ಗೈರು ಹಾಜರಾದ ಬಗ್ಗೆ ವಿಚಾರಣೆ.–** (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಯುಕ್ತ ಅನುಮತಿ ಇಲ್ಲದೆ ಮೂವತ್ತು ದಿನಗಳ ಅವಧಿಯವರೆಗೆ ಕರ್ತವ್ಯದಿಂದ ಗೈರು ಹಾಜರಾದಾಗ, ಕಾರ್ಯಸಾಧ್ಯವಾದಷ್ಟು ಬೇಗನೆ, ಅವನು ಯಾರ ಕಮಾಂಡಿನಲ್ಲಿ ತತ್ಕಾಲದಲ್ಲಿ ಸೇವೆ ಸಲ್ಲಿಸುತ್ತಿರುತ್ತಾನೋ ಅಂಥ ಗ್ರೂಪ್ ಕಮಾಂಡರನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು ವಿಚಾರಣಾ ನ್ಯಾಯಾಲಯವನ್ನು ನೇಮಕ ಮಾಡತಕ್ಕದ್ದು ಮತ್ತು ಅಂಥ ನ್ಯಾಯಾಲಯವು, ನಿಯಮಿಸಿದ ರೀತಿಯಲ್ಲಿ ಅವನಿಗೆ ಪ್ರಮಾಣವನ್ನು ಅಥವಾ ದೃಢೀಕರಣವನ್ನು ಮಾಡಿಸಿದ ಮೇಲೆ, ವ್ಯಕ್ತಿಯ ಗೈರುಹಾಜರಿಯ ಬಗ್ಗೆ ವಿಚಾರಣೆ ನಡೆಸತಕ್ಕದ್ದು ಮತ್ತು ಅವನ ಜವಾಬ್ದಾರಿಗೆ ವಹಿಸಿದ್ದ ಸರ್ಕಾರದ ಸ್ವತ್ತಿನಲ್ಲಿ ಅಥವಾ ಯಾವುದೇ ಶಸ್ತ್ರಾಸ್ತ್ರಗಳು, ಮದ್ದುಗುಂಡು, ಉಪಕರಣ, ಸಾಧನ ಸಾಮಗ್ರಿಗಳು, ಬಟ್ಟೆಬರೆಗಳು ಅಥವಾ ಇತರ ಅವಶ್ಯಕ ವಸ್ತುಗಳಲ್ಲಿ ಏನಾದರೂ ಕೊರತೆ ಇದ್ದರೆ; ಮತ್ತು ಯುಕ್ತ ಅನುಮತಿ ಇಲ್ಲದೆ ಅಥವಾ ಇತರೆ ಸಾಕಷ್ಟು ಕಾರಣವಿಲ್ಲದೆ ಹಾಗೆ ಗೈರು ಹಾಜರಾಗಿರುವ ಬಗೆಗಿನ ವಾಸ್ತವಾಂಶವನ್ನು ಮನದಟ್ಟು ಮಾಡಿಕೊಂಡರೆ, ನ್ಯಾಯಾಲಯವು ಅಂಥ ಗೈರು ಹಾಜರಿಯನ್ನು ಮತ್ತು ಅದರ ಅವಧಿಯನ್ನು ಮತ್ತು ಸದರಿ ಕೊರತೆ ಏನಾದರೂ ಆಗಿದ್ದರೆ ಅದನ್ನು ಘೋಷಿಸತಕ್ಕದ್ದು ಮತ್ತು ವಿಚಾರಣಾ ನ್ಯಾಯಾಲಯದ ವ್ಯವಹರಣೆಗಳನ್ನು ಮುಂದಿನ ಕ್ರಮಕ್ಕಾಗಿ ವಿಚಾರಣಾ ನ್ಯಾಯಾಲಯವನ್ನು ನೇಮಕ ಮಾಡಿದ ಅಧಿಕಾರಿಗೆ ಕಳುಹಿಸತಕ್ಕದ್ದು.

(2) ಗೈರು ಹಾಜರಾಗಿರುವನೆಂದು ಘೋಷಿತನಾದ ವ್ಯಕ್ತಿಯು ತದನಂತರವೂ ಶರಣಾಗದಿದ್ದರೆ ಅಥವಾ ಅವನನ್ನು ಬಂಧಿಸದಿದ್ದರೆ, ಈ ಅಧಿನಿಯಮದ ಉದ್ದೇಶಗಳಿಗಾಗಿ ಅವನನ್ನು ತ್ಯಜಿಸಿ ಹೋದವನೆಂದು ಭಾವಿಸತಕ್ಕದ್ದು.

## ಅಧ್ಯಾಯ VI

## ಭದ್ರತಾ ಪಡೆ ನ್ಯಾಯಾಲಯಗಳು

**61. ಭದ್ರತಾ ಪಡೆ ನ್ಯಾಯಾಲಯಗಳ ವಿಧಗಳು.–** ಈ ಅಧಿನಿಯಮದ ಉದ್ದೇಶಗಳಿಗಾಗಿ ಮೂರು ಪ್ರಕಾರಗಳ ಭದ್ರತಾ ಪಡೆ ನ್ಯಾಯಾಲಯಗಳಿರತಕ್ಕದ್ದು, ಎಂದರೆ,–

(ಎ) ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯಗಳು;

(ಬಿ) ಭದ್ರತಾ ಪಡೆ ಲಘು ನ್ಯಾಯಾಲಯಗಳು;

(ಸಿ) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯಗಳು.

**62. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವನ್ನು ಸಮಾವೇಶಗೊಳಿಸಲು ಅಧಿಕಾರ.**– ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವನ್ನು ಕೇಂದ್ರ ಸರ್ಕಾರವು ಅಥವಾ ಮಹಾ ನಿರ್ದೇಶಕನು ಅಥವಾ ಮಹಾ ನಿರ್ದೇಶಕನ ವಾರಂಟಿನ ಮೂಲಕ ಈ ಸಂಬಂಧವಾಗಿ ಅಧಿಕಾರ ಪಡೆದ ಯಾರೇ ಅಧಿಕಾರಿಯು ಸಮಾವೇಶಗೊಳಿಸಬಹುದು.

**63. ಭದ್ರತಾ ಪಡೆ ಲಘು ನ್ಯಾಯಾಲಯವನ್ನು ಸಮಾವೇಶಗೊಳಿಸಲು ಅಧಿಕಾರ.**– ಭದ್ರತಾ ಪಡೆ ಲಘು ನ್ಯಾಯಾಲಯವನ್ನು, ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವನ್ನು ಸಮಾವೇಶಗೊಳಿಸುವ ಅಧಿಕಾರ ಹೊಂದಿರುವ ಅಧಿಕಾರಿಯು ಅಥವಾ ಯಾರೇ ಅಂಥ ಅಧಿಕಾರಿಯ ವಾರಂಟಿನ ಮೂಲಕ ಈ ಸಂಬಂಧವಾಗಿ ಅಧಿಕಾರ ಪಡೆದ ಯಾರೇ ಅಧಿಕಾರಿಯು ಸಮಾವೇಶಗೊಳಿಸಬಹುದು.

**64. 62ನೇ ಮತ್ತು 63ನೇ ಪ್ರಕರಣಗಳ ಮೇರೆಗೆ ಹೊರಡಿಸಿದ ವಾರಂಟುಗಳ ಒಳಾಂಶಗಳು.**– 62ನೇ ಪ್ರಕರಣದ ಅಥವಾ 63ನೇ ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟು, ಅದನ್ನು ಹೊರಡಿಸುವ ಅಧಿಕಾರಿಯು ಸೂಕ್ತವೆಂದು ಭಾವಿಸಬಹುದಾದಂಥ ನಿರ್ಬಂಧಗಳನ್ನು, ಪರಿಮಿತಿಗಳನ್ನು ಅಥವಾ ಷರತ್ತುಗಳನ್ನು ಒಳಗೊಂಡಿರಬಹುದು.

**65. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ರಚನೆ.**– ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವು ಐದಕ್ಕಿಂತ ಕಡಿಮೆ ಇಲ್ಲದಷ್ಟು ಅಧಿಕಾರಿಗಳನ್ನು ಒಳಗೊಂಡಿರತಕ್ಕದ್ದು.

**66. ಭದ್ರತಾ ಪಡೆಯ ಲಘು ನ್ಯಾಯಾಲಯದ ರಚನೆ.**– ಭದ್ರತಾ ಪಡೆಯ ಲಘು ನ್ಯಾಯಾಲಯವು ಮೂರಕ್ಕಿಂತ ಕಡಿಮೆ ಇಲ್ಲದಷ್ಟು ಅಧಿಕಾರಿಗಳನ್ನು ಒಳಗೊಂಡಿರತಕ್ಕದ್ದು.

**67. ಭದ್ರತಾ ಪಡೆಯ ಕ್ಷಿಪ್ರ ನ್ಯಾಯಾಲಯ.**– (1) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವನ್ನು ಭದ್ರತಾ ಪಡೆಯ ಯಾವುದೇ ಘಟಕದ ಕಮಾಂಡರನು ನಡೆಸತಕ್ಕದ್ದು ಮತ್ತು ಅವನು ಮಾತ್ರವೇ ನ್ಯಾಯಾಲಯ ಆಗಿರತಕ್ಕದ್ದು.

(2) ಅಧಿಕಾರಿಗಳಾಗಿರುವ ಅಥವಾ ಸಹಾಯಕ ಕಮಾಂಡರುಗಳಾಗಿರುವ ಇತರ ಇಬ್ಬರು ವ್ಯಕ್ತಿಗಳು ಅಥವಾ ಅವರಿಬ್ಬರಲ್ಲಿ ಒಬ್ಬರು ಇಡೀ ವ್ಯವಹರಣೆಗಳಲ್ಲಿ ಹಾಜರಾಗತಕ್ಕದ್ದು ಮತ್ತು ಅವರು ಹಾಗೆಂದು ಪ್ರಮಾಣ ಮಾಡತಕ್ಕದ್ದಲ್ಲ ಅಥವಾ ದೃಢೀಕರಣ ಮಾಡತಕ್ಕದ್ದಲ್ಲ:

ಪರಂತು, ಒಬ್ಬ ಅಧಿಕಾರಿಯ ಅಧಿವಿಚಾರಣೆಗಾಗಿ ನ್ಯಾಯಾಲಯಕ್ಕೆ ಹಾಜರಾಗುವ ವ್ಯಕ್ತಿಗಳು ಸಾರ್ವಜನಿಕ ಸೇವೆಯ ಜರೂರು ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಅಂಥ ದರ್ಜೆಯ ಅಧಿಕಾರಿಗಳು ದೊರೆಯುವುದಿಲ್ಲವೆಂದು ಸಮಾವೇಶಗೊಳಿಸುವ ಅಧಿಕಾರಿಯು ಅಭಿಪ್ರಾಯಪಟ್ಟು ಸಮಾವೇಶಗೊಳಿಸುವ ಆದೇಶದಲ್ಲಿ ಅದನ್ನು ದಾಖಲಿಸಿದ ಹೊರತು, ಆ ಅಧಿಕಾರಿಯ ದರ್ಜೆಗಿಂತ ಕಡಿಮೆ ದರ್ಜೆಯವರಾಗಿರತಕ್ಕದ್ದಲ್ಲ.

**68. ಭದ್ರತಾ ಪಡೆ ನ್ಯಾಯಾಲಯದ ವಿಸರ್ಜನೆ.–** (1) ಅಧಿವಿಚಾರಣೆ ಪ್ರಾರಂಭವಾದ ನಂತರ, ಭದ್ರತಾ ಪಡೆ ನ್ಯಾಯಾಲಯವು ಈ ಅಧಿನಿಯಮದ ಮೂಲಕ ಅಗತ್ಯಪಡಿಸಿದ ಅಧಿಕಾರಿಗಳ ಕನಿಷ್ಠ ಸಂಖ್ಯೆಯಲ್ಲಿ ಕಡಿಮೆಯಾದರೆ ಅದನ್ನು ವಿಸರ್ಜಿಸತಕ್ಕದ್ದು.

(2) ಸಂಬಂಧಿಸಿದ ಜಡ್ಜ್ ಅಟಾರ್ನಿಯ ಅಥವಾ ಸಂದರ್ಭಾನುಸಾರ, ಡೆಪ್ಯೂಟಿ ಜಡ್ಜ್ ಅಟಾರ್ನಿ – ಜನರಲ್‌ನ ಅಥವಾ ಅಡಿಷನಲ್ ಜಡ್ಜ್ ಅಟಾರ್ನಿ ಜನರಲ್‌ನ ಅಥವಾ ನಿರ್ಣಯಕ್ಕೆ ಮುಂಚೆ ಆಪಾದಿತನ ಅನಾರೋಗ್ಯದ ಕಾರಣದಿಂದಾಗಿ ಅಧಿವಿಚಾರಣೆಯನ್ನು ಮುಂದುವರೆಸುವುದು ಅಸಾಧ್ಯವಾದರೆ, ಭದ್ರತಾ ಪಡೆ ನ್ಯಾಯಾಲಯವನ್ನು ವಿಸರ್ಜಿಸತಕ್ಕದ್ದು.

(3) ಭದ್ರತಾ ಪಡೆ ನ್ಯಾಯಾಲಯವನ್ನು ಸಮಾವೇಶಗೊಳಿಸುವ ಪ್ರಾಧಿಕಾರಕ್ಕೆ ಅಥವಾ ಅಧಿಕಾರಿಗೆ ಸೇವೆಯ ಜರೂರು ಅವಶ್ಯಕತೆಗಳಿಂದ ಅಥವಾ ಶಿಸ್ತಿನ ಅವಶ್ಯಕತೆಗಳಿಂದ ಸದರಿ ಭದ್ರತಾ ಪಡೆಯ ನ್ಯಾಯಾಲಯವನ್ನು ಮುಂದುವರೆಸುವುದು ಅಸಾಧ್ಯವೆಂದು ಅಥವಾ ವಿಹಿತವಲ್ಲವೆಂದು ಅದಕ್ಕೆ ಅಥವಾ ಅವನಿಗೆ ಕಂಡುಬಂದರೆ, ಅದನ್ನು ವಿಸರ್ಜಿಸಬಹುದು.

(4) ಈ ಪ್ರಕರಣದ ಮೇರೆಗೆ ಭದ್ರತಾ ಪಡೆ ನ್ಯಾಯಾಲಯವನ್ನು ವಿಸರ್ಜಿಸಿದಲ್ಲಿ, ಆಪಾದಿತನನ್ನು ಪುನಃ ಅಧಿವಿಚಾರಣೆಗೊಳಪಡಿಸಬಹುದು.

**69. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ಅಧಿಕಾರಗಳು.–** ಈ ಅಧಿನಿಯಮದ ಮೇರೆಗೆ ದಂಡನೀಯವಾಗುವ ಯಾವುದೇ ಅಪರಾಧಕ್ಕಾಗಿ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ಅಧಿವಿಚಾರಣೆ ನಡೆಸುವುದಕ್ಕೆ ಮತ್ತು ಆ ಮೂಲಕ ಅಧಿಕೃತಗೊಳಿಸಿದ ಯಾವುದೇ ಶಿಕ್ಷೆಯನ್ನು ನೀಡುವುದಕ್ಕೆ ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವು ಅಧಿಕಾರ ಹೊಂದಿರತಕ್ಕದ್ದು.

**70. ಭದ್ರತಾ ಪಡೆ ಲಘು ನ್ಯಾಯಾಲಯದ ಅಧಿಕಾರಗಳು.–** ಅಧಿಕಾರಿಯನ್ನು ಅಥವಾ ಸಹಾಯಕ ಕಮಾಂಡರ್‌ನನ್ನು ಹೊರತುಪಡಿಸಿ, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದ ಮೇರೆಗೆ ದಂಡನೀಯವಾಗುವ ಯಾವುದೇ ಅಪರಾಧಕ್ಕಾಗಿ ಅಧಿವಿಚಾರಣೆ ನಡೆಸುವುದಕ್ಕೆ ಮತ್ತು ಮರಣದಂಡನೆಯನ್ನು ಅಥವಾ ಎರಡು ವರ್ಷಗಳನ್ನು ಮೀರಿದ ಅವಧಿಯ ಕಾರಾವಾಸ

ಶಿಕ್ಷೆಯನ್ನು ಹೊರತುಪಡಿಸಿ ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಯಾವುದೇ ಶಿಕ್ಷೆಯನ್ನು ನೀಡುವುದಕ್ಕೆ ಭದ್ರತಾ ಪಡೆ ಲಘು ನ್ಯಾಯಾಲಯವು ಅಧಿಕಾರ ಹೊಂದಿರತಕ್ಕದ್ದು.

71. **ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ಅಧಿಕಾರಗಳು.**– (1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾಗುವ ಯಾವುದೇ ಅಪರಾಧದ ಅಧಿವಿಚಾರಣೆ ನಡೆಸಬಹುದು.

(2) ತ್ವರಿತ ಕ್ರಮಕ್ಕಾಗಿ ಯಾವುದೇ ಗಂಭೀರ ಕಾರಣವಿಲ್ಲದಿರುವಾಗ ಮತ್ತು ಶಿಸ್ತಿಗೆ ಹಾನಿಯಾಗದಂತೆ ಆರೋಪಿತ ಅಪರಾಧಿಯ ಅಧಿವಿಚಾರಣೆ ನಡೆಸಲು ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವನ್ನು ಸಮಾವೇಶಗೊಳಿಸಲು ಅಧಿಕಾರ ಹೊಂದಿರುವ ಅಧಿಕಾರಿಗೆ ಉಲ್ಲೇಖ ಮಾಡಬಹುದು. ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವನ್ನು ನಡೆಸುವ ಅಧಿಕಾರಿಯು 15ನೇ, 17ನೇ ಮತ್ತು 45ನೇ ಪ್ರಕರಣಗಳ ಪೈಕಿ ಯಾವುದೇ ಪ್ರಕರಣದ ಅಡಿಯಲ್ಲಿ ದಂಡನೀಯವಾಗುವ ಯಾವುದೇ ಅಪರಾಧದ ಅಥವಾ ನ್ಯಾಯಾಲಯವನ್ನು ನಡೆಸುವ ಅಧಿಕಾರಿಯ ವಿರುದ್ಧದ ಯಾವುದೇ ಅಪರಾಧದ ಉಲ್ಲೇಖವಿಲ್ಲದೆ ಅಧಿವಿಚಾರಣೆ ನಡೆಸತಕ್ಕದ್ದಲ್ಲ.

(3) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವು, ಒಬ್ಬ ಅಧಿಕಾರಿಯನ್ನು, ಅಥವಾ ಸಹಾಯಕ ಕಮಾಂಡರ್‌ನನ್ನು ಹೊರತುಪಡಿಸಿ ಈ ಅಧಿನಿಯಮಕ್ಕೊಳಪಟ್ಟ ಮತ್ತು ನ್ಯಾಯಾಲಯವನ್ನು ನಡೆಸುವ ಅಧಿಕಾರಿಯ ಕಮಾಂಡಿಗೆ ಒಳಪಟ್ಟಿರುವ ಯಾರೇ ವ್ಯಕ್ತಿಯ ಅಧಿವಿಚಾರಣೆ ನಡೆಸಬಹುದು.

(4) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವು ಮರಣ ದಂಡನೆ ಶಿಕ್ಷೆ ಅಥವಾ (5)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಮಿತಿಯನ್ನು ಮೀರಿದ ಅವಧಿಯ ಕಾರಾವಾಸ ಶಿಕ್ಷೆಯ ಹೊರತು ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ಯಾವುದೇ ಶಿಕ್ಷೆಯನ್ನು ವಿಧಿಸಬಹುದು.

(5) (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಮಿತಿಯು,–

(ಎ) ಭದ್ರತಾ ಪಡೆ ನ್ಯಾಯಾಲಯವನ್ನು ನಡೆಸುವ ಅಧಿಕಾರಿಯು ಗ್ರೂಪ್ ಕಮಾಂಡರನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯನ್ನು ಹೊಂದಿರುವ ಅಧಿಕಾರಿಯಾಗಿದ್ದರೆ, ಒಂದು ವರ್ಷವಾಗಿರತಕ್ಕದ್ದು;

(ಬಿ) ಇತರೆ ಯಾವುದೇ ಸಂದರ್ಭದಲ್ಲಿ ಮೂರು ತಿಂಗಳುಗಳಾಗಿರತಕ್ಕದ್ದು.

72. **ಪುನಃ ಅಧಿವಿಚಾರಣೆಗೆ ನಿಷೇಧ.**– (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಭದ್ರತಾ ಪಡೆ ನ್ಯಾಯಾಲಯವು ಅಥವಾ ಕ್ರಿಮಿನಲ್ ನ್ಯಾಯಾಲಯವು ಖುಲಾಸೆಗೊಳಿಸಿದಾಗ ಅಥವಾ

ಅಪರಾಧಿಯೆಂದು ನಿರ್ಣಯಿಸಿದಾಗ ಅಥವಾ 51ನೇ ಪ್ರಕರಣದ ಅಥವಾ 53ನೇ ಪ್ರಕರಣದ ಅಥವಾ 54ನೇ ಪ್ರಕರಣದ ಮೇರೆಗೆ ಅವನ ಬಗ್ಗೆ ವ್ಯವಹರಿಸಿದ್ದಾಗ, ಅವನು ಭದ್ರತಾ ಪಡೆ ನ್ಯಾಯಾಲಯದಿಂದ ಅದೇ ಅಪರಾಧಕ್ಕಾಗಿ ಪುನಃ ಅಧಿವಿಚಾರಣೆಗೆ ಗುರಿಯಾಗತಕ್ಕದ್ದಲ್ಲ ಅಥವಾ ಸದರಿ ಪ್ರಕರಣಗಳ ಮೇರೆಗೆ ಅವನ ಬಗ್ಗೆ ವ್ಯವಹರಿಸತಕ್ಕದ್ದಲ್ಲ.

(2) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಭದ್ರತಾ ಪಡೆ ನ್ಯಾಯಾಲಯವು ಖುಲಾಸೆಗೊಳಿಸಿದಾಗ ಅಥವಾ ಅಪರಾಧಿಯೆಂದು ನಿರ್ಣಯಿಸಿದಾಗ ಅಥವಾ 51ನೇ ಪ್ರಕರಣದ ಅಥವಾ 53ನೇ ಪ್ರಕರಣದ ಅಥವಾ 54ನೇ ಪ್ರಕರಣದ ಮೇರೆಗೆ ಅವನ ಬಗ್ಗೆ ವ್ಯವಹರಿಸಿದ್ದಾಗ, ಅವನು ಅದೇ ಅಪರಾಧಕ್ಕಾಗಿ ಅಥವಾ ಅವೇ ಸಂಗತಿಗಳ ಮೇಲೆ ಕ್ರಿಮಿನಲ್ ನ್ಯಾಯಾಲಯದಿಂದ ಪುನಃ ಅಧಿವಿಚಾರಣೆಗೆ ಗುರಿಯಾಗತಕ್ಕದ್ದಲ್ಲ.

73. **ಅಧಿವಿಚಾರಣೆಗಾಗಿ ಕಾಲ ಪರಿಮಿತಿ.–** (1) (2)ನೇ ಉಪಪ್ರಕರಣದ ಮೂಲಕ ಉಪಬಂಧಿಸಿದಂತೆ ಹೊರತು, ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಯಾವುದೇ ಅಪರಾಧಕ್ಕಾಗಿ ಭದ್ರತಾ ಪಡೆ ನ್ಯಾಯಾಲಯವು ಅಂಥ ಅಪರಾಧದ ದಿನಾಂಕದಿಂದ ಮೂರು ವರ್ಷಗಳ ಅವಧಿ ಅಂತ್ಯವಾದ ನಂತರ ಅಧಿವಿಚಾರಣೆಯನ್ನು ಪ್ರಾರಂಭಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳು ತ್ಯಜಿಸಿಹೋಗಿರುವ ಅಪರಾಧದ ಅಥವಾ 17ನೇ ಪ್ರಕರಣದಲ್ಲಿ ಸೂಚಿಸಿರುವ ಅಪರಾಧಗಳ ಪೈಕಿ ಯಾವುದೇ ಅಪರಾಧದ ಅಧಿವಿಚಾರಣೆಗೆ ಅನ್ವಯವಾಗತಕ್ಕದ್ದಲ್ಲ.

(3) (1)ನೇ ಉಪಪ್ರಕರಣದಲ್ಲಿ ಹೇಳಿರುವ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಅಪರಾಧ ಮಾಡಿದ ತರುವಾಯ ಅಂಥ ವ್ಯಕ್ತಿಯು ದಸ್ತಗಿರಿ ಆಗುವುದನ್ನು ತಪ್ಪಿಸಿಕೊಂಡ ಯಾವುದೇ ಕಾಲವನ್ನು ಹೊರತುಪಡಿಸತಕ್ಕದ್ದು.

74. **ಅಪರಾಧಿಯು ಈ ಅಧಿನಿಯಮಕ್ಕೊಳಪಟ್ಟಿರುವುದು ನಿಂತುಹೋದಾಗ ಅಧಿವಿಚಾರಣೆ, ಇತ್ಯಾದಿ.–** (1) ಈ ಅಧಿನಿಯಮಕ್ಕೊಳಪಟ್ಟಿರುವಾಗ, ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡಿರುವಲ್ಲಿ, ಮತ್ತು ಅವನು ಹಾಗೆ ಒಳಪಟ್ಟಿರುವುದು ನಿಂತುಹೋಗಿರುವಾಗ, ಅವನನ್ನು ಭದ್ರತಾ ಪಡೆಯ ಅಭಿರಕ್ಷೆಗೆ ತೆಗೆದುಕೊಳ್ಳಬಹುದು ಮತ್ತು ಅಭಿರಕ್ಷೆಯಲ್ಲಿಟ್ಟುಕೊಳ್ಳಬಹುದು ಮತ್ತು ಹಾಗೆ ಒಳಪಟ್ಟಿರುವುದು ಮುಂದುವರೆದಿದ್ದರೆ ಹೇಗೋ ಹಾಗೆ ಅಂಥ ಅಪರಾಧದ ಅಧಿವಿಚಾರಣೆ ನಡೆಸತಕ್ಕದ್ದು ಮತ್ತು ದಂಡಿಸತಕ್ಕದ್ದು.

(2) ಅಂಥ ಯಾರೇ ವ್ಯಕ್ತಿಯನ್ನು ಈ ಅಧಿನಿಯಮಕ್ಕೊಳಪಡುವುದು ನಿಂತುಹೋದ ನಂತರ ಆರು ತಿಂಗಳೊಳಗಾಗಿ ಅವನ ಅಧಿವಿಚಾರಣೆ ಪ್ರಾರಂಭ ಮಾಡಿದ ಹೊರತು, ಅಪರಾಧದ ಅಧಿವಿಚಾರಣೆ ನಡೆಸತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ತ್ಯಜಿಸಿಹೋಗಿರುವ ಅಪರಾಧಕ್ಕಾಗಿ ಅಥವಾ 17ನೇ ಪ್ರಕರಣದಲ್ಲಿ ಸೂಚಿಸಿರುವ ಯಾವುದೇ ಅಪರಾಧಕ್ಕಾಗಿ ಅಂಥ ಯಾರೇ ವ್ಯಕ್ತಿಯ ಅಧಿವಿಚಾರಣೆ ನಡೆಸಲು ಅನ್ವಯವಾಗತಕ್ಕದ್ದಲ್ಲ ಅಥವಾ ಕ್ರಿಮಿನಲ್ ನ್ಯಾಯಾಲಯವು ಹಾಗೂ ಭದ್ರತಾ ಪಡೆ ನ್ಯಾಯಾಲಯವು ಅಧಿವಿಚಾರಣೆ ಮಾಡಬಹುದಾದ ಯಾವುದೇ ಅಪರಾಧದ ಅಧಿವಿಚಾರಣೆ ಮಾಡುವ ಅಂಥ ನ್ಯಾಯಾಲಯಗಳ ಅಧಿಕಾರವ್ಯಾಪ್ತಿಗೆ ಬಾಧಕವುಂಟುಮಾಡತಕ್ಕದ್ದಲ್ಲ.

**75. ಶಿಕ್ಷೆಯ ಅವಧಿಯಲ್ಲಿ ಅಧಿನಿಯಮದ ಅನ್ವಯ.–** (1) ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಗೆ ಭದ್ರತಾ ಪಡೆ ನ್ಯಾಯಾಲಯವು ಕಾರಾವಾಸ ಶಿಕ್ಷೆಯನ್ನು ವಿಧಿಸಿದಾಗ, ಅವನ ಶಿಕ್ಷೆಯ ಅವಧಿಯಲ್ಲಿ, ಅವನನ್ನು ಭದ್ರತಾ ಪಡೆಯಿಂದ ವಜಾಗೊಳಿಸಿದ್ದಾಗ್ಯೂ ಅಥವಾ ಈ ಅಧಿನಿಯಮಕ್ಕೊಳಪಟ್ಟಿರುವುದು ಅನ್ಯಥಾ ನಿಂತುಹೋಗಿರುವಾಗ್ಯೂ, ಅವನಿಗೆ ಈ ಅಧಿನಿಯಮವು ಅನ್ವಯಿಸತಕ್ಕದ್ದು ಮತ್ತು ಅವನು ಈ ಅಧಿನಿಯಮಕ್ಕೊಳಪಟ್ಟು ಮುಂದುವರೆದಿದ್ದರೆ ಹೇಗೋ ಹಾಗೆ ಅವನನ್ನು ಇಟ್ಟುಕೊಳ್ಳತಕ್ಕದ್ದು, ತೆಗೆದುಹಾಕತಕ್ಕದ್ದು, ಕಾರಾವಾಸದಲ್ಲಿಡತಕ್ಕದ್ದು ಮತ್ತು ಶಿಕ್ಷಿಸತಕ್ಕದ್ದು.

(2) ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಗೆ ಭದ್ರತಾ ಪಡೆ ನ್ಯಾಯಾಲಯವು ಮರಣ ದಂಡನೆ ವಿಧಿಸಿದಾಗ, ಅವನಿಗೆ ಆ ದಂಡನೆಯನ್ನು ಕಾರ್ಯಗತಗೊಳಿಸುವವರೆಗೂ ಈ ಅಧಿನಿಯಮವು ಅನ್ವಯವಾಗತಕ್ಕದ್ದು.

**76. ಅಧಿವಿಚಾರಣೆಯ ಸ್ಥಳ.–** ಈ ಅಧಿನಿಯಮದ ವಿರುದ್ಧ ಯಾವುದೇ ಅಪರಾಧವನ್ನು ಮಾಡುವ ಈ ಅಧಿನಿಯಮಕ್ಕೊಳಪಟ್ಟಿರುವ ಯಾರೇ ವ್ಯಕ್ತಿಯನ್ನು, ಅಂಥ ಅಪರಾಧಕ್ಕಾಗಿ ಯಾವುದೇ ಸ್ಥಳದಲ್ಲಿ ಅಧಿವಿಚಾರಣೆ ಮಾಡಬಹುದು ಮತ್ತು ಶಿಕ್ಷಿಸಬಹುದು.

**77. ಕ್ರಿಮಿನಲ್ ನ್ಯಾಯಾಲಯ ಮತ್ತು ಭದ್ರತಾ ಪಡೆ ನ್ಯಾಯಾಲಯದ ನಡುವೆ ಆಯ್ಕೆ.–** ಪ್ರತಿಯೊಂದು ಕ್ರಿಮಿನಲ್ ನ್ಯಾಯಾಲಯವು ಮತ್ತು ಭದ್ರತಾ ಪಡೆ ನ್ಯಾಯಾಲಯವು ಒಂದು ಅಪರಾಧದ ಸಂಬಂಧದಲ್ಲಿ ಅಧಿಕಾರವ್ಯಾಪ್ತಿಯನ್ನು ಹೊಂದಿರುವಾಗ, ಯಾವ ನ್ಯಾಯಾಲಯದ ಮುಂದೆ ವ್ಯವಹರಣೆಗಳನ್ನು ಹೂಡತಕ್ಕದ್ದೆಂದು ತೀರ್ಮಾನಿಸುವುದು ಆಪಾದಿತ ವ್ಯಕ್ತಿಯು ಯಾರ ಕಮಾಂಡಿನೊಳಗೆ ಸೇವೆ ಸಲ್ಲಿಸುತ್ತಿರುತ್ತಾನೋ ಆ ಮಹಾನಿರ್ದೇಶಕನ, ಅಥವಾ ಮಹಾನಿರೀಕ್ಷಕನ ಅಥವಾ ಉಪ ಮಹಾನಿರೀಕ್ಷಕನ ಅಥವಾ ನಿಯಮಿಸಬಹುದಾದಂಥ ಇತರೆ ಅಧಿಕಾರಿಯ ವಿವೇಚನೆಗೆ

ಸೇರಿರತಕ್ಕದ್ದು ಮತ್ತು ಆ ಅಧಿಕಾರಿಯು ಅವುಗಳನ್ನು ಭದ್ರತಾ ಪಡೆ ನ್ಯಾಯಾಲಯದ ಮುಂದೆ ಹೂಡತಕ್ಕದ್ದೆಂದು ತೀರ್ಮಾನಿಸಿದರೆ, ಆ ಆಪಾದಿತ ವ್ಯಕ್ತಿಯನ್ನು ಭದ್ರತಾ ಪಡೆ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸತಕ್ಕದ್ದೆಂದು ನಿರ್ದೇಶಿಸತಕ್ಕದ್ದು.

**78. ಅಪರಾಧಿಯನ್ನು ಒಪ್ಪಿಸುವಂತೆ ಅಗತ್ಯಪಡಿಸುವುದಕ್ಕೆ ಕ್ರಿಮಿನಲ್ ನ್ಯಾಯಾಲಯದ ಅಧಿಕಾರ.–** (1) ಅಧಿಕಾರವ್ಯಾಪ್ತಿ ಹೊಂದಿರುವ ಕ್ರಿಮಿನಲ್ ನ್ಯಾಯಾಲಯವು ಯಾವುದೇ ಆರೋಪಿತ ಅಪರಾಧದ ಸಂಬಂಧದಲ್ಲಿ ತನ್ನ ಮುಂದೆ ವ್ಯವಹರಣೆಗಳನ್ನು ಹೂಡತಕ್ಕದ್ದೆಂದು ಅಭಿಪ್ರಾಯಪಟ್ಟಾಗ, ಅದು ಲಿಖಿತ ನೋಟೀಸಿನ ಮೂಲಕ 77ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಅಧಿಕಾರಿಯನ್ನು ತನ್ನ ಆಯ್ಕೆ ಪ್ರಕಾರ ಕಾನೂನಿನ ಅನುಸಾರವಾಗಿ ಅವನ ವಿರುದ್ಧ ವ್ಯವಹರಣೆಯನ್ನು ಮುಂದುವರೆಸಲು ಹತ್ತಿರದ ಮ್ಯಾಜಿಸ್ಟ್ರೇಟ್‌ರಿಗೆ ಅಪರಾಧಿಯನ್ನು ಒಪ್ಪಿಸುವುದಕ್ಕೆ ಅಥವಾ ಕೇಂದ್ರ ಸರ್ಕಾರಕ್ಕೆ ಉಲ್ಲೇಖಿಸುವುದನ್ನು ಇತ್ಯರ್ಥದಲ್ಲಿರಿಸಿ ವ್ಯವಹರಣೆಗಳನ್ನು ಮುಂದೂಡುವುದಕ್ಕೆ ಅಗತ್ಯಪಡಿಸಬಹುದು.

(2) ಅಂಥ ಪ್ರತಿಯೊಂದು ಪ್ರಕರಣದಲ್ಲಿ, ಸದರಿ ಅಧಿಕಾರಿಯು, ಕೋರಿಕೆಗೆ ಅನುಸಾರವಾಗಿ ಅಪರಾಧಿಯನ್ನು ಒಪ್ಪಿಸತಕ್ಕದ್ದು ಅಥವಾ ವ್ಯವಹರಣೆಗಳನ್ನು ಯಾವ ನ್ಯಾಯಾಲಯದ ಮುಂದೆ ಹೂಡಬೇಕೆಂಬ ಬಗ್ಗೆ ಪ್ರಶ್ನೆಯನ್ನು ಕೇಂದ್ರ ಸರ್ಕಾರದ ನಿರ್ಧಾರಕ್ಕೆ ಕೂಡಲೇ ಉಲ್ಲೇಖಿಸತಕ್ಕದ್ದು ಮತ್ತು ಹಾಗೆ ಉಲ್ಲೇಖಿಸಿದಾಗ ಕೇಂದ್ರ ಸರ್ಕಾರದ ಆದೇಶವೇ ಅಂತಿಮವಾಗಿರತಕ್ಕದ್ದು.

## ಅಧ್ಯಾಯ VII

## ಭದ್ರತಾ ಪಡೆ ನ್ಯಾಯಾಲಯಗಳ ಪ್ರಕ್ರಿಯೆ

**79. ಪೀಠಾಸೀನ ಅಧಿಕಾರಿ.–** ಪ್ರತಿಯೊಂದು ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದಲ್ಲಿ ಅಥವಾ ಭದ್ರತಾ ಪಡೆ ಲಘು ನ್ಯಾಯಾಲಯದಲ್ಲಿ ಹಿರಿಯ ಸದಸ್ಯರು ಪೀಠಾಸೀನ ಅಧಿಕಾರಿಯಾಗಿರತಕ್ಕದ್ದು.

**80. ಜಡ್ಜ್ ಅಟಾರ್ನಿಗಳು, ಇತ್ಯಾದಿ.–** ಪ್ರತಿಯೊಂದು ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದಲ್ಲಿ ಮತ್ತು ಪ್ರತಿಯೊಂದು ಭದ್ರತಾ ಪಡೆ ಲಘು ನ್ಯಾಯಾಲಯದಲ್ಲಿ ಜಡ್ಜ್ ಅಟಾರ್ನಿ ಅಥವಾ ಡೆಪ್ಯೂಟಿ ಜಡ್ಜ್ ಅಟಾರ್ನಿ–ಜನರಲ್ ಅಥವಾ ಹೆಚ್ಚುವರಿ ಜಡ್ಜ್ ಅಟಾರ್ನಿ–ಜನರಲ್‌ನು, ಅಥವಾ ಅಂಥ ಅಧಿಕಾರಿ ದೊರೆಯದಿದ್ದರೆ, ಜಡ್ಜ್ ಅಟರ್ನಿ ಜನರಲ್‌ನು ಅನುಮೋದಿಸಿದ ಅಧಿಕಾರಿ ಅಥವಾ ಈ ಬಗ್ಗೆ ಜಡ್ಜ್ ಅಟಾರ್ನಿ ಜನರಲ್‌ನು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು ಹಾಜರಾಗತಕ್ಕದ್ದು ಮತ್ತು ಹಾಜರಾಗಬಹುದು.

**81. ಆಕ್ಷೇಪಣೆಗಳು.–** (1) ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯ ಅಥವಾ ಭದ್ರತಾ ಪಡೆ ಲಘು ನ್ಯಾಯಾಲಯವು ನಡೆಸುವ ಎಲ್ಲಾ ಅಧಿವಿಚಾರಣೆಗಳಲ್ಲಿ, ನ್ಯಾಯಾಲಯವು ಸಮಾವೇಶಗೊಂಡ ಕೂಡಲೇ, ಪೀಠಾಸೀನ ಅಧಿಕಾರಿಯ ಮತ್ತು ಸದಸ್ಯರ ಹೆಸರುಗಳನ್ನು ಆಪಾದಿತನಿಗೆ ಓದಿ ಹೇಳತಕ್ಕದ್ದು, ಆನಂತರ ನ್ಯಾಯಾಲಯದಲ್ಲಿ ಆಸೀನರಾಗಿರುವ ಯಾರೇ ಅಧಿಕಾರಿಯು ಅಧಿವಿಚಾರಣೆ ಮಾಡಲು ಏನಾದರೂ ಆಕ್ಷೇಪಣೆ ಇದೆಯೇ ಎಂದು ಅವನನ್ನು ಕೇಳತಕ್ಕದ್ದು.

(2) ಆಪಾದಿತನು, ಅಂಥ ಅಧಿಕಾರಿಯನ್ನು ಆಕ್ಷೇಪಿಸಿದರೆ, ಅವನ ಆಕ್ಷೇಪಣೆಯನ್ನು ಮತ್ತು ಆಕ್ಷೇಪಣೆಗೆ ಒಳಗಾದ ಅಧಿಕಾರಿಯು ಅದಕ್ಕೆ ನೀಡುವ ಉತ್ತರವನ್ನು ಸಹ ಆಲಿಸತಕ್ಕದ್ದು ಮತ್ತು ದಾಖಲಿಸತಕ್ಕದ್ದು ಮತ್ತು ನ್ಯಾಯಾಲಯದ ಉಳಿದ ಅಧಿಕಾರಿಗಳು ಆಕ್ಷೇಪಣೆಗೊಳಗಾದ ಅಧಿಕಾರಿಯ ಗೈರು ಹಾಜರಿಯಲ್ಲಿ, ಆಕ್ಷೇಪಣೆಯ ಬಗ್ಗೆ ತೀರ್ಮಾನಿಸತಕ್ಕದ್ದು.

(3) ಮತ ಚಲಾಯಿಸಲು ಹಕ್ಕುಳ್ಳ ಅಧಿಕಾರಿಗಳ ಮತದ ಅರ್ಧದಷ್ಟು ಅಥವಾ ಅದಕ್ಕೂ ಹೆಚ್ಚು ಮತಗಳಿಂದ ಆಕ್ಷೇಪಣೆಯು ಅಂಗೀಕೃತವಾದರೆ, ಆ ಆಕ್ಷೇಪಣೆಯನ್ನು ಪುರಸ್ಕರಿಸತಕ್ಕದ್ದು ಮತ್ತು ಆಕ್ಷೇಪಕ್ಕೊಳಗಾದ ಸದಸ್ಯನು ನಿರ್ಗಮಿಸತಕ್ಕದ್ದು ಮತ್ತು ಅವನ ಖಾಲಿ ಸ್ಥಾನವನ್ನು, ಆಕ್ಷೇಪಿಸಲು ಆಪಾದಿತನಿಗಿರುವ ಅವೇ ಹಕ್ಕಿಗೊಳಪಟ್ಟು ಮತ್ತೊಬ್ಬ ಅಧಿಕಾರಿಯನ್ನು ಆ ಸ್ಥಾನಕ್ಕೆ ನಿಯಮಿಸಿದ ರೀತಿಯಲ್ಲಿ ತುಂಬತಕ್ಕದ್ದು.

(4) ಯಾವುದೇ ಆಕ್ಷೇಪಣೆಯನ್ನು ಮಾಡದಿದ್ದಾಗ ಅಥವಾ ಆಕ್ಷೇಪಣೆಯನ್ನು ಮಾಡಿದ್ದು ಅದನ್ನು ತಿರಸ್ಕರಿಸಿದ್ದಾಗ ಅಥವಾ ಯಾವ ಅಧಿಕಾರಿಯ ಬಗೆಗಿನ ಆಕ್ಷೇಪಣೆಯನ್ನು ಅಂಗೀಕರಿಸಲಾಯಿತೋ ಆ ಪ್ರತಿಯೊಬ್ಬ ಅಧಿಕಾರಿಯ ಸ್ಥಾನಕ್ಕೆ ಯಾವ ಅಧಿಕಾರಿಯ ಬಗ್ಗೆ ಯಾವ ಆಕ್ಷೇಪಣೆಯನ್ನೂ ಮಾಡಲಾಗಿಲ್ಲವೋ ಅಥವಾ ಪುರಸ್ಕರಿಸಿಲ್ಲವೋ ಅಂಥ ಮತ್ತೊಬ್ಬ ಅಧಿಕಾರಿಯನ್ನು ಭರ್ತಿಮಾಡಿದಾಗ ನ್ಯಾಯಾಲಯವು ಅಧಿವಿಚಾರಣೆಯನ್ನು ಮುಂದುವರೆಸತಕ್ಕದ್ದು.

**82. ಸದಸ್ಯರ, ಜಡ್ಜ್ ಅಟಾರ್ನಿಯ ಮತ್ತು ಸಾಕ್ಷಿದಾರರ ಪ್ರಮಾಣಗಳು.–** (1) ಅಧಿವಿಚಾರಣೆ ಪ್ರಾರಂಭವಾಗುವುದಕ್ಕೆ ಮುಂಚೆ ಪ್ರತಿಯೊಂದು ಭದ್ರತಾ ಪಡೆ ನ್ಯಾಯಾಲಯದ ಪ್ರತಿಯೊಬ್ಬ ಸದಸ್ಯನಿಗೆ ಮತ್ತು ಜಡ್ಜ್ ಅಟಾರ್ನಿನಿಗೆ ಅಥವಾ ಸಂದರ್ಭಾನುಸಾರ, ಡೆಪ್ಯೂಟಿ ಜಡ್ಜ್ ಅಟಾರ್ನಿ ಜನರಲ್‌ನಿಗೆ ಅಥವಾ ಹೆಚ್ಚುವರಿ ಜಡ್ಜ್ ಅಟಾರ್ನಿ–ಜನರಲ್‌ನಿಗೆ ಅಥವಾ 80ನೇ ಪ್ರಕರಣದ ಮೇರೆಗೆ ಅನುಮೋದನೆಗೊಂಡ ಅಧಿಕಾರಿಗೆ ನಿಯಮಿಸಲಾದ ರೀತಿಯಲ್ಲಿ ಪ್ರಮಾಣ ವಚನವನ್ನು ಅಥವಾ ಪ್ರತಿಜ್ಞಾ ವಚನವನ್ನು ಬೋಧಿಸತಕ್ಕದ್ದು.

(2) ಭದ್ರತಾ ಪಡೆ ನ್ಯಾಯಾಲಯದ ಮುಂದೆ ಸಾಕ್ಷ್ಯ ನೀಡುವ ಪ್ರತಿಯೊಬ್ಬ ವ್ಯಕ್ತಿಯನ್ನು ನಿಯಮಿಸಿದ ರೀತಿಯಲ್ಲಿ ಕ್ರಮಬದ್ಧವಾಗಿ ಪ್ರಮಾಣ ಮಾಡಿಸಿದ ಅಥವಾ ಪ್ರತಿಜ್ಞೆ ಮಾಡಿಸಿದ ನಂತರ ಪರೀಕ್ಷಿಸತಕ್ಕದ್ದು.

(3) ಸಾಕ್ಷಿದಾರನು ಹನ್ನೆರಡು ವರ್ಷದ ಒಳಗಿರುವ ಮಗುವಾಗಿರುವಲ್ಲಿ ಮತ್ತು ಭದ್ರತಾ ಪಡೆ ನ್ಯಾಯಾಲಯವು ಸಾಕ್ಷಿದಾರನಿಗೆ ನಿಜ ನುಡಿಯುವುದು ಕರ್ತವ್ಯವೆಂದು ಗೊತ್ತಿದ್ದರೂ ಸಹ, ಅವನು ಪ್ರಮಾಣದ ಅಥವಾ ಪ್ರತಿಜ್ಞೆಯ ಸ್ವರೂಪವು ಅವನಿಗೆ ಗೊತ್ತಿಲ್ಲವೆಂದು ಅಭಿಪ್ರಾಯಪಟ್ಟರೆ (2)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.

**83. ಸದಸ್ಯರುಗಳಿಂದ ಮತದಾನ.–** (1) (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಭದ್ರತಾ ಪಡೆ ನ್ಯಾಯಾಲಯದ ಪ್ರತಿಯೊಂದು ತೀರ್ಮಾನವನ್ನು ಸಂಪೂರ್ಣ ಬಹುಮತದಿಂದ ಮಾತ್ರವೇ ಅಂಗೀಕರಿಸತಕ್ಕದ್ದು; ಮತ್ತು ನಿರ್ಣಯದ ಬಗ್ಗೆಯಾಗಲೀ ಅಥವಾ ಶಿಕ್ಷೆಯ ಬಗ್ಗೆಯಾಗಲೀ ಸಮಾನ ಮತಗಳು ಬಂದಲ್ಲಿ, ತೀರ್ಮಾನವು ಆಪಾದಿತನ ಪರವಾಗಿರತಕ್ಕದ್ದು.

(2) ಮರಣದಂಡನೆಯನ್ನು ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ಸದಸ್ಯರಲ್ಲಿ ಕನಿಷ್ಠ ಪಕ್ಷ 2/3 ರಷ್ಟು ಸದಸ್ಯರ ಸಹಮತ ಇರದಿದ್ದರೆ, ನ್ಯಾಯಾಲಯವು ಅದನ್ನು ಅಂಗೀಕರಿಸತಕ್ಕದ್ದಲ್ಲ.

(3) ಆಕ್ಷೇಪಣೆಯನ್ನು ಅಥವಾ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಹೊರತುಪಡಿಸಿ ಇತರೆ ವಿಷಯಗಳಲ್ಲಿ ಪೀಠಾಸೀನ ಅಧಿಕಾರಿಯು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

**84. ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ಸಾಮಾನ್ಯ ನಿಯಮ.–** 1872ರ ಭಾರತ ಸಾಕ್ಷ್ಯ ಅಧಿನಿಯಮವು, (1872ರ 1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಭದ್ರತಾ ಪಡೆ ನ್ಯಾಯಾಲಯದ ಮುಂದಿರುವ ಎಲ್ಲಾ ವ್ಯವಹರಣೆಗಳಿಗೂ ಅನ್ವಯವಾಗತಕ್ಕದ್ದು.

**85. ನ್ಯಾಯಿಕ ಗಮನ.–** ಭದ್ರತಾ ಪಡೆಯ ಅಧಿಕಾರಿಗಳಾಗಿ ಸದಸ್ಯರ ಸಾಮಾನ್ಯ ತಿಳುವಳಿಕೆಗೆ ಬಂದ ಯಾವುದೇ ವಿಷಯದ ಬಗ್ಗೆ ಭದ್ರತಾ ಪಡೆ ನ್ಯಾಯಾಲಯವು ನ್ಯಾಯಿಕ ಗಮನ ತೆಗೆದುಕೊಳ್ಳಬಹುದು.

**86. ಸಾಕ್ಷಿಗಳನ್ನು ಸಮನು ಮಾಡುವುದು.–** (1) ಸಮಾವೇಶಾಧಿಕಾರಿಯು, ಭದ್ರತಾ ಪಡೆ ನ್ಯಾಯಾಲಯದ ಪೀಠಾಸೀನ ಅಧಿಕಾರಿಯು, ಜಡ್ಜ್ ಅಟಾರ್ನಿಯು ಅಥವಾ ಸಂದರ್ಭಾನುಸಾರ, ಡೆಪ್ಯೂಟಿ ಜಡ್ಜ್ ಅಟಾರ್ನಿ–ಜನರಲ್‌ನು ಅಥವಾ ಹೆಚ್ಚುವರಿ ಜಡ್ಜ್ ಅಟಾರ್ನಿ–ಜನರಲ್‌ನು ಅಥವಾ

80ನೇ ಪ್ರಕರಣದ ಮೇರೆಗೆ ಅನುಮೋದನೆಗೊಂಡ ಅಧಿಕಾರಿಯು ಅಥವಾ ಆಪಾದಿತ ವ್ಯಕ್ತಿಯ ಕಮಾಂಡರನು ತನ್ನ ಸಹಿಯೊಂದಿಗೆ ಸಮನ್ನುಗಳನ್ನು ಹೊರಡಿಸಿ, ಸಮನ್ನುಗಳಲ್ಲಿ ಸೂಚಿಸಬಹುದಾದ ಕಾಲದಲ್ಲಿ ಮತ್ತು ಸ್ಥಳದಲ್ಲಿ, ಸಾಕ್ಷ್ಯವನ್ನು ನೀಡುವುದಕ್ಕಾಗಲಿ ಅಥವಾ ಯಾವುದೇ ದಸ್ತಾವೇಜನ್ನು ಅಥವಾ ಇತರೆ ವಸ್ತುವನ್ನು ಹಾಜರುಪಡಿಸುವುದಕ್ಕಾಗಲಿ ಯಾರೇ ವ್ಯಕ್ತಿಯ ಹಾಜರಾತಿಯನ್ನು ಅಗತ್ಯಪಡಿಸಬಹುದು.

(2) ಈ ಅಧಿನಿಯಮಕ್ಕೊಳಪಟ್ಟಿರುವ ಸಾಕ್ಷಿದಾರನ ಸಂದರ್ಭದಲ್ಲಿ, ಸಮನ್ನುಗಳನ್ನು ಅವನ ಕಮಾಂಡರನಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ತದನುಸಾರವಾಗಿ ಅವನಿಗೆ ಅದನ್ನು ಜಾರಿಮಾಡತಕ್ಕದ್ದು.

(3) ಯಾರೇ ಇತರೆ ಸಾಕ್ಷಿದಾರನ ಸಂದರ್ಭದಲ್ಲಿ, ಅವನು ಯಾವ ಮ್ಯಾಜಿಸ್ಟ್ರೇಟನ ಅಧಿಕಾರವ್ಯಾಪ್ತಿಯಲ್ಲಿ ಇರುವನೋ ಅಥವಾ ವಾಸಿಸುತ್ತಿರುವನೋ ಆ ಮ್ಯಾಜಿಸ್ಟ್ರೇಟನಿಗೆ ಸಮನುಗಳನ್ನು ಕಳುಹಿಸತಕ್ಕದ್ದು ಮತ್ತು ಆ ಮ್ಯಾಜಿಸ್ಟ್ರೇಟನು, ಆ ಸಾಕ್ಷಿದಾರನನ್ನು ತನ್ನ ನ್ಯಾಯಾಲಯದಲ್ಲಿ ಹಾಜರಿರಬೇಕೆಂದು ಅಗತ್ಯಪಡಿಸಿದ್ದಿದ್ದರೆ ಹೇಗೋ ಹಾಗೆ ಸಮನ್ನುಗಳನ್ನು ಜಾರಿ ಮಾಡತಕ್ಕದ್ದು.

(4) ಸಾಕ್ಷಿದಾರನ ವಶದಲ್ಲಿರುವ ಅಥವಾ ಅಧಿಕಾರದಲ್ಲಿರುವ ಯಾವುದೇ ನಿರ್ದಿಷ್ಟ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸುವಂತೆ ಅವನನ್ನು ಅಗತ್ಯಪಡಿಸಿದಾಗ, ಸಮನು ಅದರ ಬಗ್ಗೆ ಯುಕ್ತ ಖಚಿತತೆಯನ್ನು ವಿವರಿಸಿರತಕ್ಕದ್ದು.

**87. ದಸ್ತಾವೇಜುಗಳನ್ನು ಹಾಜರುಪಡಿಸುವುದರಿಂದ ವಿನಾಯಿತಿ.–** (1) 86ನೇ ಪ್ರಕರಣದಲ್ಲಿರುವುದು ಯಾವುದೂ, ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರ 123ನೇ ಮತ್ತು 124ನೇ ಪ್ರಕರಣಗಳನ್ನು ಪರಿಣಾಮಕಾರಿಯನ್ನಾಗಿ ಮಾಡುತ್ತದೆಂದು ಅಥವಾ ಅಂಚೆ ಅಥವಾ ಟೆಲಿಗ್ರಾಫ್ ಪ್ರಾಧಿಕಾರಿಗಳ ಅಭಿರಕ್ಷೆಯಲ್ಲಿರುವ ಯಾವುದೇ ಪತ್ರಕ್ಕೆ, ಅಂಚೆಕಾರ್ಡ್‌ಗೆ, ಟೆಲಿಗ್ರಾಂಗೆ ಅಥವಾ ಇತರೆ ದಸ್ತಾವೇಜುಗಳಿಗೆ ಅನ್ವಯವಾಗುವಂತೆ ಮಾಡುತ್ತದೆಂದು ಭಾವಿಸತಕ್ಕದ್ದಲ್ಲ.

(2) ಅಂಥ ಅಭಿರಕ್ಷೆಯಲ್ಲಿರುವ ಯಾವುದೇ ದಸ್ತಾವೇಜು ಯಾವುದೇ ಜಿಲ್ಲಾ ಮ್ಯಾಜಿಸ್ಟ್ರೇಟನ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ, ಸೆಷನ್ಸ್ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಅಭಿಪ್ರಾಯದಲ್ಲಿ ಯಾವುದೇ ಭದ್ರತಾ ಪಡೆ ನ್ಯಾಯಾಲಯದ ಉದ್ದೇಶಕ್ಕಾಗಿ ಬೇಕಾಗಿದ್ದರೆ ಆ ಮ್ಯಾಜಿಸ್ಟ್ರೇಟನು ಅಥವಾ ನ್ಯಾಯಾಲಯವು ನಿರ್ದೇಶಿಸಬಹುದಾದಂಥ ವ್ಯಕ್ತಿಗೆ ಸಂದರ್ಭಾನುಸಾರ, ಅಂಚೆ ಅಥವಾ ಟೆಲಿಗ್ರಾಫ್ ಪ್ರಾಧಿಕಾರಿಗಳು ಅಂಥ ದಸ್ತಾವೇಜುಗಳನ್ನು ಒಪ್ಪಿಸಬೇಕೆಂದು ನಿರ್ದೇಶಿಸುತ್ತಾರೋ ಆ ವ್ಯಕ್ತಿಗೆ ಅಂಥ ದಸ್ತಾವೇಜನ್ನು ಒಪ್ಪಿಸುವುದಕ್ಕೆ ಅಗತ್ಯಪಡಿಸಬಹುದು.

(3) ಯಾರೇ ಇತರೆ ಮ್ಯಾಜಿಸ್ಟ್ರೇಟನ ಅಥವಾ ಯಾರೇ ಪೊಲೀಸ್ ಕಮೀಷನರನ ಅಥವಾ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟನ ಅಭಿಪ್ರಾಯದಲ್ಲಿ, ಯಾವುದೇ ಅಂಥ ದಸ್ತಾವೇಜು ಯಾವುದೇ ಅಂಥ ಉದ್ದೇಶಕ್ಕಾಗಿ ಬೇಕಾಗಿದ್ದರೆ, ಅವನು ಸಂದರ್ಭಾನುಸಾರ ಅಂಚೆ ಅಥವಾ ಟೆಲಿಗ್ರಾಫ್ ಪ್ರಾಧಿಕಾರಿಗಳನ್ನು ಅಂಥ ಶೋಧನೆ ಮಾಡಿಸುವಂತೆ ಅಗತ್ಯಪಡಿಸಬಹುದು ಮತ್ತು ಅಂಥ ದಸ್ತಾವೇಜನ್ನು ಯಾವುದೇ ಅಂಥ ಜಿಲ್ಲಾ ಮ್ಯಾಜಿಸ್ಟ್ರೇಟನ, ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟನ, ಸೆಷನ್ ನ್ಯಾಯಾಲಯದ ಅಥವಾ ಉಚ್ಚ ನ್ಯಾಯಾಲಯದ ಆದೇಶವು ಇತ್ಯರ್ಥದಲ್ಲಿರುವಾಗ ತಡೆಹಿಡಿದಿಟ್ಟುಕೊಳ್ಳುವಂತೆ ಅಗತ್ಯಪಡಿಸಬಹುದು.

**88. ಸಾಕ್ಷಿದಾರರ ಪರೀಕ್ಷೆಗಾಗಿ ಕಮೀಷನುಗಳು.–** (1) ಭದ್ರತಾ ಪಡೆ ನ್ಯಾಯಾಲಯದಿಂದ ಅಧಿವಿಚಾರಣೆಯು ನಡೆಯುತ್ತಿರುವಾಗಲೆಲ್ಲಾ, ನ್ಯಾಯೋದ್ದೇಶಕ್ಕಾಗಿ ಸಾಕ್ಷಿದಾರನ ಪರೀಕ್ಷೆಯ ಅವಶ್ಯಕತೆ ಇದೆ ಎಂದು ಮತ್ತು ಪ್ರಕರಣದ ಸಂದರ್ಭಗಳಲ್ಲಿ ಯಾವ ವಿಳಂಬವು, ವೆಚ್ಚವು ಅಥವಾ ಅನಾನುಕೂಲತೆಯು ಅಸಮಂಜಸವಾಗುವುದೋ ಆ ವಿಳಂಬ, ವೆಚ್ಚ ಅಥವಾ ಅನಾನುಕೂಲತೆಯನ್ನು ಉಂಟುಮಾಡದೆಯೇ ಅಂಥ ಸಾಕ್ಷಿದಾರನ ಹಾಜರಾತಿಯನ್ನು ದೊರಕಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲವೆಂದು ನ್ಯಾಯಾಲಯಕ್ಕೆ ಕಂಡುಬಂದಾಗ ಆ ನ್ಯಾಯಾಲಯವು ಆ ಸಾಕ್ಷಿದಾರನ ಸಾಕ್ಷ್ಯವನ್ನು ತೆಗೆದುಕೊಳ್ಳುವುದಕ್ಕೆ ಕಮಿಷನ್ ಹೊರಡಿಸಬಹುದೆಂದು ಜಡ್ಜ್ ಅಟಾರ್ನಿ ಜನರಲ್‌ರಿಗೆ ತಿಳಿಸಬಹುದು.

(2) ಜಡ್ಜ್ ಅಟಾರ್ನಿ–ಜನರಲ್‌ನು ಆನಂತರ, ಅವಶ್ಯವೆಂದು ಭಾವಿಸಿದರೆ, ಅಂಥ ಸಾಕ್ಷಿದಾರನ ಸಾಕ್ಷ್ಯವನ್ನು ತೆಗೆದುಕೊಳ್ಳುವುದಕ್ಕಾಗಿ ಆ ಸಾಕ್ಷಿದಾರನು ಯಾವ ಮುಖ್ಯ ನ್ಯಾಯಿಕ ದಂಡಾಧಿಕಾರಿಯ ಅಥವಾ ಪ್ರಥಮ ದರ್ಜೆ ದಂಡಾಧಿಕಾರಿಯ ಅಧಿಕಾರವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ವಾಸವಾಗಿರುವನೋ ಆ ಯಾರೇ ಮುಖ್ಯ ನ್ಯಾಯಿಕ ದಂಡಾಧಿಕಾರಿಗೆ ಅಥವಾ ಪ್ರಥಮ ದರ್ಜೆ ದಂಡಾಧಿಕಾರಿಗೆ ಕಮಿಷನನ್ನು ಹೊರಡಿಸಬಹುದು.

(3) ಯಾವ ದಂಡಾಧಿಕಾರಿಗೆ ಅಥವಾ ಅಧಿಕಾರಿಗೆ, ಕಮಿಷನನ್ನು ಹೊರಡಿಸಲಾಗಿದೆಯೋ ಆ ದಂಡಾಧಿಕಾರಿಯು ಅಥವಾ ಅಧಿಕಾರಿಯು ಅಥವಾ ಅವನು ಮುಖ್ಯ ನ್ಯಾಯಿಕ ದಂಡಾಧಿಕಾರಿಯಾಗಿದ್ದರೆ, ಅವನು ಅಥವಾ ಈ ಬಗ್ಗೆ ಅವನು ನೇಮಿಸುವಂಥ ಪ್ರಥಮ ದರ್ಜೆ ದಂಡಾಧಿಕಾರಿಯು ಸಾಕ್ಷಿಯು ಇರುವ ಸ್ಥಳಕ್ಕೆ ಹೋಗತಕ್ಕದ್ದು ಅಥವಾ ತನ್ನ ಮುಂದೆ ಹಾಜರಾಗುವಂತೆ ಸಾಕ್ಷಿದಾರನಿಗೆ ಸಮನು ಹೊರಡಿಸತಕ್ಕದ್ದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ ವಾರಂಟ್ ಪ್ರಕರಣಗಳಲ್ಲಿ ಅಧಿವಿಚಾರಣೆಗಳನ್ನು ನಡೆಸುವ ರೀತಿಯಲ್ಲಿಯೇ ಅವನ ಸಾಕ್ಷ್ಯವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅವೇ ಅಧಿಕಾರಗಳನ್ನು ಚಲಾಯಿಸಬಹುದು.

(4) ಸಾಕ್ಷಿದಾರನು ಬುಡಕಟ್ಟು ಪ್ರದೇಶದಲ್ಲಿ ಅಥವಾ ಭಾರತದ ಹೊರಗೆ ಯಾವುದೇ ಸ್ಥಳದಲ್ಲಿ ವಾಸಿಸುತ್ತಿದ್ದರೆ, ದಂಡ ಪ್ರಕ್ರಿಯಾ ಸಂಹಿತೆ, 1973ರ XXIII-ಬಿ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿಯೇ ಕಮಿಷನ್ನನ್ನು ಹೊರಡಿಸಬಹುದು.

**89. ಕಮಿಷನ್ ಹೊರಡಿಸುವ ಮೂಲಕ ಸಾಕ್ಷಿದಾರನ ವಿಚಾರಣೆ.-** (1) ಪ್ರಾಸಿಕ್ಯೂಟರ್‌ನು ಮತ್ತು ಯಾವ ಪ್ರಕರಣದಲ್ಲಿ ಕಮಿಷನ್ನನ್ನು 88ನೇ ಪ್ರಕರಣದ ಮೇರೆಗೆ ಹೊರಡಿಸಲಾಗಿದೆಯೋ ಆ ಯಾವುದೇ ಪ್ರಕರಣದಲ್ಲಿ ಆಪಾದಿತ ವ್ಯಕ್ತಿಯು ಅನುಕ್ರಮವಾಗಿ ನ್ಯಾಯಾಲಯವು ವಿವಾದಾಂಶಕ್ಕೆ ಸಂಬಂಧಿಸಿದಂತೆ ಅದು ಸೂಕ್ತವೆಂದು ಭಾವಿಸುವಂತೆ ಲಿಖಿತದಲ್ಲಿ ಯಾವುವೇ ಪ್ರಶ್ನೆಗಳನ್ನು ಕಳುಹಿಸಬಹುದು ಮತ್ತು ಮ್ಯಾಜಿಸ್ಟ್ರೇಟ್‌ನು ಅಥವಾ ಕಮಿಷನನ್ನು ನಿರ್ವಹಿಸುವ ಅಧಿಕಾರಿಯು ಅಂಥ ಪ್ರಶ್ನೆಗಳ ಮೇಲೆ ಸಾಕ್ಷಿದಾರನನ್ನು ವಿಚಾರಣೆ ಮಾಡತಕ್ಕದ್ದು.

(2) ಪ್ರಾಸಿಕ್ಯೂಟರ್‌ನು ಮತ್ತು ಆಪಾದಿತ ವ್ಯಕ್ತಿಯು ವಕೀಲರ ಮೂಲಕ ಅಂಥ ಮ್ಯಾಜಿಸ್ಟ್ರೇಟ್‌ನ ಅಥವಾ ಅಧಿಕಾರಿಯ ಮುಂದೆ ಹಾಜರಾಗಬಹುದು ಅಥವಾ ಆಪಾದಿತನು ಅಭಿರಕ್ಷೆಯಲ್ಲಿ ಇದ್ದ ಹೊರತು ಖುದ್ದಾಗಿ ಹಾಜರಾಗಬಹುದು ಮತ್ತು ಸದರಿ ಸಾಕ್ಷಿದಾರನನ್ನು ವಿಚಾರಣೆ ಮಾಡಬಹುದು, ಪಾಟಿ ಸವಾಲು ಮಾಡಬಹುದು ಮತ್ತು ಸಂದರ್ಭಾನುಸಾರ ಮರುವಿಚಾರಣೆ ಮಾಡಬಹುದು.

(3) 88ನೇ ಪ್ರಕರಣದ ಮೇರೆಗೆ ಕಮಿಷನನ್ನು ಹೊರಡಿಸಿದ ಮತ್ತು ಅದನ್ನು ಕ್ರಮಬದ್ಧವಾಗಿ ಜಾರಿಗೊಳಿಸಿದ ತರುವಾಯ ಅದರ ಮೇರೆಗೆ ವಿಚಾರಣೆ ಮಾಡಿದ ಸಾಕ್ಷಿದಾರರ ಸಾಕ್ಷ್ಯದೊಂದಿಗೆ ಜಡ್ಜ್ ಅಟಾರ್ನಿ ಜನರಲ್‌ನಿಗೆ ಹಿಂತಿರುಗಿಸತಕ್ಕದ್ದು.

(4) (3)ನೇ ಉಪಪ್ರಕರಣದ ಮೇರೆಗೆ ಹಿಂತಿರುಗಿಸಲಾದ ಕಮಿಷನನ್ನು ಮತ್ತು ಸಾಕ್ಷಿದಾರರ ಹೇಳಿಕೆಯನ್ನು ಸ್ವೀಕರಿಸಿದ ಮೇಲೆ, ಜಡ್ಜ್ ಅಟಾರ್ನಿ-ಜನರಲ್‌ನು ಯಾರ ಕೋರಿಕೆಯಂತೆ ಕಮೀಷನನ್ನು ಹೊರಡಿಸಲಾಗಿತ್ತೋ ಆ ನ್ಯಾಯಾಲಯಕ್ಕೆ ಅದನ್ನು ಅಥವಾ ಅಂಥ ನ್ಯಾಯಾಲಯವನ್ನು ವಿಸರ್ಜಿಸಲಾಗಿದ್ದರೆ, ಆಪಾದಿತ ವ್ಯಕ್ತಿಯ ಅಧಿವಿಚಾರಣೆಗಾಗಿ ಸಮಾವೇಶಗೊಳಿಸಿದ್ದ ಇತರ ಯಾವುದೇ ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು ಮತ್ತು ಹಿಂದಿರುಗಿಸಿದ ಕಮಿಷನ್ನನ್ನು ಮತ್ತು ಸಾಕ್ಷಿದಾರರ ಹೇಳಿಕೆಯು ಪ್ರಾಸಿಕ್ಯೂಟರನು ಮತ್ತು ಆಪಾದಿತ ವ್ಯಕ್ತಿಯು ಪರಿಶೀಲಿಸಲು ಮುಕ್ತವಾಗಿರತಕ್ಕದ್ದು ಮತ್ತು ಎಲ್ಲಾ ನ್ಯಾಯಸಮ್ಮತ ಅಪವಾದಗಳಿಗೊಳಪಟ್ಟು ಪ್ರಾಸಿಕ್ಯೂಟರ್‌ನಾಗಲಿ ಅಥವಾ ಆಪಾದಿತ ವ್ಯಕ್ತಿಯಾಗಲಿ ಆ ಪ್ರಕರಣದಲ್ಲಿ ಅದನ್ನು ಸಾಕ್ಷ್ಯವಾಗಿ ಓದಬಹುದು ಮತ್ತು ಅದು ನ್ಯಾಯಾಲಯದ ವ್ಯವಹರಣೆಗಳ ಭಾಗವಾಗಿರತಕ್ಕದ್ದು.

(5) 88ನೇ ಪ್ರಕರಣದ ಮೇರೆಗೆ ಯಾವ ಪ್ರಕರಣದಲ್ಲಿ ಕಮಿಷನ್ನನ್ನು ಹೊರಡಿಸಲಾಗಿದೆಯೋ ಆ ಪ್ರತಿಯೊಂದು ಪ್ರಕರಣದಲ್ಲಿ ಕಮಿಷನನ್ನು ಜಾರಿಗೊಳಿಸಲು ಮತ್ತು ಅದನ್ನು ಹಿಂದಿರುಗಿಸಲು ಸಾಕಷ್ಟು ಯುಕ್ತ ನಿರ್ದಿಷ್ಟ ಕಾಲದವರೆಗೆ ಅಧಿವಿಚಾರಣೆಯನ್ನು ಮುಂದೂಡಬಹುದು.

**90. ಆರೋಪಿಸಲಾಗಿರದ ಅಪರಾಧದ ಅಪರಾಧ ನಿರ್ಣಯ.–** ಭದ್ರತಾ ಪಡೆ ನ್ಯಾಯಾಲಯದ ಮುಂದೆ,-

(ಎ) ತ್ಯಜಿಸಿಹೋದವನೆಂದು ಆರೋಪಿತನಾಗಿರುವ ವ್ಯಕ್ತಿಯು ತ್ಯಜಿಸಿಹೋಗಲು ಪ್ರಯತ್ನಿಸಿದ ತಪ್ಪಿತಸ್ಥನೆಂದು ಅಥವಾ ಅನುಮತಿ ಇಲ್ಲದೆ ಗೈರುಹಾಜರಾಗಿರುವ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಬಿ) ತ್ಯಜಿಸಿಹೋಗಲು ಪ್ರಯತ್ನಿಸುವುದಕ್ಕೆ ಸಂಬಂಧಿಸಿದಂತೆ ಆರೋಪಿತನಾದ ವ್ಯಕ್ತಿಯ ಅನುಮತಿ ಪಡೆಯದೆ ಗೈರುಹಾಜರಾಗಿರುವ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಸಿ) ಅಪರಾಧಿಕ ಬಲ ಪ್ರಯೋಗದ ಆರೋಪಿತನಾಗಿರುವ ವ್ಯಕ್ತಿಯು ಹಲ್ಲೆ ಮಾಡಿದ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಡಿ) ಬೆದರಿಸುವ ಭಾಷೆಯನ್ನು ಬಳಸಿದ ಆರೋಪಕ್ಕೆ ಗುರಿಯಾದ ವ್ಯಕ್ತಿಯು ಅವಿಧೇಯ ಭಾಷೆಯನ್ನು ಬಳಸಿದ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಇ) 29ನೇ ಪ್ರಕರಣದ (ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳ ಪೈಕಿ ಯಾವುದೇ ಅಪರಾಧದ ಆರೋಪಿತನಾಗಿರುವ ವ್ಯಕ್ತಿಯು, ಈ ಅಪರಾಧಗಳ ಪೈಕಿ ಯಾವುದೇ ಇತರೆ ಅಪರಾಧಕ್ಕಾಗಿ ಅವನ ಮೇಲೆ ಆರೋಪ ಹೊರಿಸಬಹುದಾಗಿತ್ತೋ ಆ ಯಾವುದೇ ಇತರ ಅಪರಾಧದ ತಪ್ಪಿತಸ್ಥನೆಂದು ನಿರ್ಣಯಿಸಬಹುದು.

(ಎಫ್) 45ನೇ ಪ್ರಕರಣದ ಮೇರೆಗೆ ದಂಡನೀಯವಾಗುವ ಅಪರಾಧದ ಆರೋಪಿತನಾಗಿರುವ ವ್ಯಕ್ತಿಯು ದಂಡಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳು ಅನ್ವಯವಾಗುವಂತಿದ್ದರೆ ಆ ಅಪರಾಧದ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಜಿ) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕಾಗಿ ಆರೋಪಿತನಾಗಿರುವ ವ್ಯಕ್ತಿಯು ಹೆಚ್ಚು ತೀವ್ರ ಸ್ವರೂಪದ ದಂಡನೆಯನ್ನು ಒಳಗೊಂಡ ಸನ್ನಿವೇಶಗಳಲ್ಲಿ ಅಪರಾಧವನ್ನು ಮಾಡಿದ್ದಾನೆಂದು ರುಜುವಾತುಪಡಿಸಲು ವಿಫಲನಾಗಿರುವಾಗ

ಕಡಿಮೆ ತೀವ್ರತೆಯ ದಂಡನೆಯನ್ನು ಒಳಗೊಳ್ಳುವ ಸನ್ನಿವೇಶಗಳಲ್ಲಿ ಮಾಡಿರುವ ಅದೇ ಅಪರಾಧದ ತಪ್ಪಿತಸ್ಥನೆಂದು ನಿರ್ಣಯಿಸಬಹುದು;

(ಹೆಚ್) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧಕ್ಕಾಗಿ ಆರೋಪಿತನಾಗಿರುವ ವ್ಯಕ್ತಿಯು, ಆ ಅಪರಾಧ ಮಾಡಲು ಪ್ರಯತ್ನಿಸುವ ಅಥವಾ ದುಷ್ಪ್ರೇರಿಸುವ ಅಪರಾಧಗಳಿಗಾಗಿ ಪ್ರತ್ಯೇಕವಾಗಿ ಆರೋಪಿಸದಿದ್ದರೂ ಆ ಅಪರಾಧವನ್ನು ಮಾಡಲು ಪ್ರಯತ್ನಿಸಿದ್ದಾನೆ ಅಥವಾ ದುಷ್ಪ್ರೇರಿಸಿರುವ ತಪ್ಪಿತಸ್ಥನೆಂದು ನಿರ್ಣಯಿಸಬಹುದು.

**91. ಸಹಿಗಳ ಬಗ್ಗೆ ಪೂರ್ವಭಾವನೆ.–** ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ, ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಯು ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ಯಾವುದೇ ಅರ್ಜಿಯನ್ನು, ಪ್ರಮಾಣಪತ್ರವನ್ನು, ವಾರಂಟ್‍ನ್ನು, ಉತ್ತರವನ್ನು ಅಥವಾ ಇತರೆ ದಸ್ತಾವೇಜನ್ನು ಹಾಜರುಪಡಿಸಿದ ಮೇಲೆ, ತದ್ವಿರುದ್ಧವಾದುದನ್ನು ತೋರಿಸುವವರೆಗೆ ಯಾವ ವ್ಯಕ್ತಿಯು ಮತ್ತು ಯಾವ ಲಿಪಿಯಲ್ಲಿ ಅದಕ್ಕೆ ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಯೇ ಮತ್ತು ಆ ಲಿಪಿಯಲ್ಲಿಯೇ ಕ್ರಮಬದ್ಧವಾಗಿ ಸಹಿ ಮಾಡಿದ್ದಾನೆಂದು ಪೂರ್ವ ಭಾವನೆ ಮಾಡತಕ್ಕದ್ದು.

**92. ನೇಮಕದ ಪತ್ರ.–** (1) ನೇಮಕ ಪ್ರಾಧಿಕಾರಿಯು ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ಯಾವುದೇ ನೇಮಕದ ಪತ್ರವು, ಈ ಅಧಿನಿಯಮದ ಮೇರೆಗಿನ ವ್ಯವಹರಣೆಗಳಲ್ಲಿ, ಯಾವ ಪ್ರಶ್ನೆಗಳಿಗೆ ಅವನು ಉತ್ತರ ನೀಡಿದ್ದಾನೆಂದು ನಿರೂಪಿಸಿರುವನೋ ಆ ಪ್ರಶ್ನೆಗಳಿಗೆ ಉತ್ತರ ನೀಡಿದ್ದಾನೆಂಬ ಬಗ್ಗೆ ನೇಮಕಗೊಂಡ ವ್ಯಕ್ತಿಯ ಸಾಕ್ಷ್ಯವಾಗಿರತಕ್ಕದ್ದು.

(2) ಅಂಥ ವ್ಯಕ್ತಿಯ ನೇಮಕವನ್ನು, ಅವನ ನೇಮಕದ ಮೂಲ ಪತ್ರವನ್ನು ಅಥವಾ ನೇಮಕದ ಪತ್ರದ ಅಭಿರಕ್ಷೆ ಹೊಂದಿರುವ ಅಧಿಕಾರಿಯ ನೈಜ ಪ್ರತಿಯೆಂದು ಪ್ರಮಾಣೀಕರಿಸಿರುವುದಾಗಿ ತಾತ್ಪರ್ಯವಾಗುವ ಅವನ ನೇಮಕದ ಪತ್ರದ ಪ್ರತಿಯನ್ನು ಹಾಜರುಪಡಿಸುವುದರ ಮೂಲಕ ಸಾಬೀತುಪಡಿಸಬಹುದು.

**93. ಕೆಲವು ದಸ್ತಾವೇಜುಗಳ ಬಗ್ಗೆ ಪೂರ್ವಭಾವನೆ.–** ಭದ್ರತಾ ಪಡೆಯ ಯಾವುದೇ ಘಟಕದಲ್ಲಿನ ಯಾರೇ ವ್ಯಕ್ತಿಯ ಸೇವೆಗೆ ಅಥವಾ ಅದರಲ್ಲಿರುವ ಯಾರೇ ವ್ಯಕ್ತಿಯನ್ನು ವಜಾ ಮಾಡಿದ್ದಕ್ಕೆ ಅಥವಾ ಬಿಡುಗಡೆ ಮಾಡಿದ್ದಕ್ಕೆ ಸಂಬಂಧಿಸಿದ ಅಥವಾ ಭದ್ರತಾ ಪಡೆಯ ಯಾವುದೇ ಘಟಕದಲ್ಲಿ ಸೇವೆ ಸಲ್ಲಿಸಿರದ ಅಥವಾ ಅದಕ್ಕೆ ಸೇರಿರದ ಸನ್ನಿವೇಶಗಳಲ್ಲಿ ಅಂಥ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ ಪತ್ರಕ್ಕೆ, ವಿವರಪಟ್ಟಿಕೆಗೆ ಅಥವಾ ಇತರ ದಸ್ತಾವೇಜಿಗೆ, ಕೇಂದ್ರ ಸರ್ಕಾರವು ಅಥವಾ ಮಹಾನಿರ್ದೇಶಕನು, ಅಥವಾ ಯಾರೇ ಇತರ ಸಕ್ಷಮ ಪ್ರಾಧಿಕಾರಿಯು ಅಥವಾ ಅವನ ಪರವಾಗಿ ಸಹಿ ಮಾಡಿದ್ದಾನೆಂದು

ತಾತ್ಪರ್ಯವಾಗುವಂತಿದ್ದರೆ, ಅದು, ಅಂಥ ಪತ್ರದಲ್ಲಿ, ವಿವರಪಟ್ಟಿಕೆಯಲ್ಲಿ ಅಥವಾ ಇತರ ದಸ್ತಾವೇಜಿನಲ್ಲಿ ಹೇಳಿರುವ ಸಂಗತಿಗಳ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು.

(2) ಪ್ರಾಧಿಕಾರವು ಪ್ರಕಟಿಸಿದೆಯೆಂದು ತಾತ್ಪರ್ಯವಾಗುವ ರಾಷ್ಟ್ರೀಯ ಭದ್ರತಾ ಪಡೆಯ ಪಟ್ಟಿ ಅಥವಾ ಗೆಜೆಟ್ಟು, ಅದರಲ್ಲಿ ಸೂಚಿಸಿರುವ ಅಧಿಕಾರಿಗಳ ಮತ್ತು ಸಹಾಯಕ ಕಮಾಂಡರುಗಳ ಸ್ಥಾನಮಾನ ಮತ್ತು ದರ್ಜೆಯ ಮತ್ತು ಅವರು ಹೊಂದಿರುವ ಯಾವುದೇ ನೇಮಕದ ಮತ್ತು ಅವರು ಯಾವ ಭದ್ರತಾ ಪಡೆಗೆ ಸೇರಿರುವರೋ ಆ ಭದ್ರತಾ ಪಡೆಯ ಸಮೂಹದ, ಘಟಕದ ಅಥವಾ ಶಾಖೆಯ ಸಾಕ್ಷ್ಯವಾಗಿರತಕ್ಕದ್ದು.

(3) ಈ ಅಧಿನಿಯಮದ ಅಥವಾ ಯಾವುವೇ ನಿಯಮಗಳ ಅನುಸಾರವಾಗಿ ಅಥವಾ ಅನ್ಯಥಾ ಪದೀಯ ಕರ್ತವ್ಯಗಳ ನಿರ್ವಹಣೆಯಲ್ಲಿ, ಯಾವುದೇ ಘಟಕದ ಪುಸ್ತಕದಲ್ಲಿ ದಾಖಲ್ಮಾಡಿರುವಲ್ಲಿ ಮತ್ತು ಅಂಥ ದಾಖಲೆಯನ್ನು ಮಾಡುವುದು ಯಾರ ಕರ್ತವ್ಯವಾಗಿರುತ್ತದೋ ಆ ಕಮಾಂಡರ್‌ನು ಅಥವಾ ಅಧಿಕಾರಿಯು ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ಅಂಥ ದಾಖಲೆಯು ಅದರಲ್ಲಿ ಹೇಳಿರುವ ಸಂಗತಿಗಳ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು.

(4) ಅಂಥ ಪುಸ್ತಕದ ಅಭಿರಕ್ಷೆ ಹೊಂದಿರುವ ಅಧಿಕಾರಿಯು ನೈಜ ಪ್ರತಿಯೆಂದು ಪ್ರಮಾಣೀಕರಿಸಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಘಟಕದ ಪುಸ್ತಕದಲ್ಲಿನ ಯಾವುದೇ ದಾಖಲೆಯ ಪ್ರತಿಯು ಅಂಥ ದಾಖಲೆಯ ಸಾಕ್ಷ್ಯವಾಗಿರತಕ್ಕದ್ದು.

(5) ತ್ಯಜಿಸಿಹೋಗಿರುವ ಅಥವಾ ಅನುಮತಿ ಇಲ್ಲದೆ ಗೈರುಹಾಜರಾಗಿರುವ ಆರೋಪದ ಬಗ್ಗೆ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವಿರುದ್ಧ ಅಧಿವಿಚಾರಣೆಯನ್ನು ನಡೆಸುತ್ತಿರುವಲ್ಲಿ ಮತ್ತು ಅಂಥ ವ್ಯಕ್ತಿಯು ಯಾರೇ ಅಧಿಕಾರಿಯ ಅಥವಾ ಈ ಅಧಿನಿಯಮಕ್ಕೊಳಪಟ್ಟ ಇತರೆ ವ್ಯಕ್ತಿಯ ಅಥವಾ ಭದ್ರತಾ ಪಡೆಯ ಯಾವುದೇ ಘಟಕದ ಅಭಿರಕ್ಷೆಗೆ ತಾನೇ ಶರಣಾಗತನಾಗಿರುವಲ್ಲಿ ಅಥವಾ ಅಂಥ ಅಧಿಕಾರಿಯು ಅಥವಾ ವ್ಯಕ್ತಿಯು ಅವನನ್ನು ಬಂಧಿಸಿರುವಲ್ಲಿ, ಅಂಥ ವ್ಯಕ್ತಿಯು ಯಾವ ಘಟಕಕ್ಕೆ ಸೇರಿರುವನೋ ಆ ಘಟಕದ ಅಂಥ ಅಧಿಕಾರಿಯು ಅಥವಾ ಸಂದರ್ಭಾನುಸಾರ ಕಮಾಂಡರನು ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ಪ್ರಮಾಣಪತ್ರವನ್ನು ಮತ್ತು ಅಂಥ ಶರಣಾಗತಿಯ ಅಥವಾ ಬಂಧನದ ಸಂಗತಿಯನ್ನು, ದಿನಾಂಕ ಮತ್ತು ಸ್ಥಳವನ್ನು ಮತ್ತು ಅವನು ಯಾವ ರೀತಿಯಲ್ಲಿ ಉಡುಪನ್ನು ಧರಿಸಿದ್ದನೋ ಆ ರೀತಿಯನ್ನು ನಿರೂಪಿಸುವ ಪ್ರಮಾಣ ಪತ್ರವನ್ನು ಹಾಗೆ ಹೇಳಲಾದ ವಿಷಯಗಳ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು.

(6) ತ್ಯಜಿಸಿಹೋಗಿರುವ ಅಥವಾ ಅನುಮತಿ ಇಲ್ಲದೆ ಗೈರುಹಾಜರಾಗಿರುವ ಆರೋಪದ ಬಗ್ಗೆ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವಿರುದ್ಧ ಅಧಿವಿಚಾರಣೆಯನ್ನು ನಡೆಸುತ್ತಿರುವಲ್ಲಿ ಪೋಲೀಸ್ ಠಾಣೆಯ ಪ್ರಭಾರದಲ್ಲಿರುವ ಒಬ್ಬ ಅಧಿಕಾರಿಯ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಪೋಲೀಸ್ ಅಧಿಕಾರಿಯ ಅಭಿರಕ್ಷೆಗೆ ತಾನೇ ಶರಣಾಗತನಾಗಿರುವಲ್ಲಿ ಅಥವಾ ಆ ಪೋಲೀಸ್ ಅಧಿಕಾರಿಯು ಆತನನ್ನು ಬಂಧಿಸಿರುವಲ್ಲಿ, ಅಂಥ ಪೋಲೀಸ್ ಅಧಿಕಾರಿಯು ಸಹಿ ಮಾಡಿದ್ದಾನೆಂದು ತಾತ್ಪರ್ಯವಾಗುವ ಮತ್ತು ಅಂಥ ಶರಣಾಗತಿಯ ಅಥವಾ ಬಂಧನದ ಸಂಗತಿಯನ್ನು, ದಿನಾಂಕವನ್ನು ಮತ್ತು ಸ್ಥಳವನ್ನು ಮತ್ತು ಅವನು ಯಾವ ರೀತಿಯಲ್ಲಿ ಉಡುಪನ್ನು ಧರಿಸಿದ್ದನೋ ಆ ರೀತಿಯನ್ನು ನಿರೂಪಿಸುವ ಪ್ರಮಾಣಪತ್ರವು ಹಾಗೆ ಹೇಳಲಾದ ವಿಷಯಗಳ ಬಗ್ಗೆ ಸಾಕ್ಷ್ಯವಾಗಿರತಕ್ಕದ್ದು.

(7) (ಎ) ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯ ಕ್ರಮದಲ್ಲಿ ಪರೀಕ್ಷೆಗಾಗಿ ಅಥವಾ ವಿಶ್ಲೇಷಣೆಗಾಗಿ ಮತ್ತು ವರದಿಗಾಗಿ ಸರ್ಕಾರಿ ವೈಜ್ಞಾನಿಕ ತಜ್ಞನಿಗೆ ಯುಕ್ತವಾಗಿ ಸಲ್ಲಿಸಿದ ಯಾವುದೇ ವಿಷಯ ಅಥವಾ ವಸ್ತುವಿಗೆ ಸಂಬಂಧಿಸಿದಂತೆ ಈ ಉಪಪ್ರಕರಣವು ಯಾರಿಗೆ ಅನ್ವಯಿಸುವುದೋ ಆ ಸರ್ಕಾರಿ ವೈಜ್ಞಾನಿಕ ತಜ್ಞನು ರುಜು ಮಾಡಿರುವ ವರದಿಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು ಈ ಅಧಿನಿಯಮದ ಮೇರೆಗಿನ ಯಾವುದೇ ವಿಚಾರಣೆಯಲ್ಲಿ, ಅಧಿವಿಚಾರಣೆಯಲ್ಲಿ ಅಥವಾ ಇತರ ವ್ಯವಹರಣೆಯಲ್ಲಿ ಸಾಕ್ಷ್ಯವಾಗಿ ಉಪಯೋಗಿಸಬಹುದು.

(ಬಿ) ಭದ್ರತಾ ಪಡೆ ನ್ಯಾಯಾಲಯವು, ಅದು ಸೂಕ್ತವೆಂದು ಭಾವಿಸಿದರೆ, ತಜ್ಞನ ವರದಿಯ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ಆತನನ್ನು ಸಮನು ಮಾಡಬಹುದು ಮತ್ತು ಅವನನ್ನು ವಿಚಾರಣೆ ಮಾಡಬಹುದು.

(ಸಿ) ಭದ್ರತಾ ಪಡೆ ನ್ಯಾಯಾಲಯವು ಯಾರೇ ಅಂಥ ತಜ್ಞನನ್ನು ಸಮನು ಮಾಡಿರುವಲ್ಲಿ ಮತ್ತು ಅವನು ಖುದ್ದಾಗಿ ಹಾಜರಾಗಲು ಅಸಮರ್ಥನಾದಲ್ಲಿ ಮತ್ತು ಅವನು ಖುದ್ದಾಗಿ ಹಾಜರಾಗುವಂತೆ ಅವನಿಗೆ ನ್ಯಾಯಾಲಯವು ವ್ಯಕ್ತವಾಗಿ ನಿರ್ದೇಶಿಸಿದ ಹೊರತು, ಅವನೊಂದಿಗೆ ಕೆಲಸ ಮಾಡುತ್ತಿರುವ ಮತ್ತು ಮೊಕದ್ದಮೆಯ ಸಂಗತಿಗಳ ಬಗೆಗೆ ತಿಳಿದಿರುವವನಾಗಿರುವ ಮತ್ತು ಅವನ ಪರವಾಗಿ ನ್ಯಾಯಾಲಯದಲ್ಲಿ ತೃಪ್ತಿಕರ ರೀತಿಯಲ್ಲಿ ಸಾಕ್ಷ್ಯ ನೀಡಬಲ್ಲವನಾದ ಯಾರೇ ಜವಾಬ್ದಾರಿಯುತ ವ್ಯಕ್ತಿಯನ್ನು ಅವನು ಪ್ರತಿನಿಯೋಜಿಸಬಹುದು.

(ಡಿ) ಈ ಉಪಪ್ರಕರಣವು, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 293ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ತತ್ಕಾಲದಲ್ಲಿ ನಿರ್ದಿಷ್ಟಪಡಿಸಿರುವ ಸರ್ಕಾರಿ ವೈಜ್ಞಾನಿಕ ತಜ್ಞರಿಗೆ ಅನ್ವಯಿಸುವುದು.

94. **ಆಪಾದಿತನಿಂದ ಸರ್ಕಾರಿ ಅಧಿಕಾರಿಗೆ ಉಲ್ಲೇಖ.-** (1) ತ್ಯಜಿಸಿಹೋಗಿದ್ದಕ್ಕಾಗಿ ಅಥವಾ ಅನುಮತಿ ಪಡೆಯದೆ ಗೈರುಹಾಜರಾಗಿದ್ದಕ್ಕಾಗಿ, ರಜೆ ಮುಗಿದರೂ ಬಾರದಿರುವುದಕ್ಕಾಗಿ ಅಥವಾ ಸೇವೆಗೆ ಬರಲು ಎಚ್ಚರಿಕೆ ನೀಡಿದಾಗಲೂ ಪುನಃ ಕೆಲಸಕ್ಕೆ ಬಾರದಿರುವುದಕ್ಕಾಗಿ ಮಾಡುತ್ತಿರುವ ಅಧಿವಿಚಾರಣೆಯಲ್ಲಿ, ಆಪಾದಿತ ವ್ಯಕ್ತಿಯು ತನ್ನ ಪ್ರತಿರಕ್ಷೆಯಲ್ಲಿ ತಾನು ಅನಧಿಕೃತ ಗೈರು ಹಾಜರಾಗಿದ್ದಕ್ಕಾಗಿ ಯಾವುದೇ ಸಾಕಷ್ಟು ಅಥವಾ ಯುಕ್ತ ಕಾರಣಗಳನ್ನು ತಿಳಿಸಿದರೆ ಮತ್ತು ಅದಕ್ಕೆ ಸಮರ್ಥನೆಯಾಗಿ ಸರ್ಕಾರಿ ಸೇವೆಯಲ್ಲಿರುವ ಯಾರೇ ಅಧಿಕಾರಿಯನ್ನು ಉಲ್ಲೇಖಿಸಿದ್ದರೆ, ಅಥವಾ ಆ ಯಾರೇ ಅಂಥ ಅಧಿಕಾರಿಯು ಪ್ರತಿರಕ್ಷೆಯಲ್ಲಿ ಸದರಿ ಹೇಳಿಕೆಯನ್ನು ರುಜುವಾತುಪಡಿಸುವ ಅಥವಾ ರುಜುವಾತುಪಡಿಸದಿರುವ ಸಂಭವವಿದೆಯೆಂದು ಕಂಡುಬಂದರೆ, ನ್ಯಾಯಾಲಯವು ಅಂಥ ಅಧಿಕಾರಿಗೆ ಪತ್ರ ಬರೆಯತಕ್ಕದ್ದು ಮತ್ತು ಅವನಿಂದ ಉತ್ತರ ಬರುವವರೆಗೆ ವ್ಯವಹರಣೆಗಳನ್ನು ಮುಂದೂಡತಕ್ಕದ್ದು.

(2) ಹಾಗೆ ಉಲ್ಲೇಖಿಸಿದ ಯಾರೇ ಅಧಿಕಾರಿಯ ಲಿಖಿತ ಉತ್ತರಕ್ಕೆ ಅವನು ಸಹಿ ಮಾಡಿದ್ದರೆ, ಅದನ್ನು ಸಾಕ್ಷ್ಯವಾಗಿ ಸ್ವೀಕರಿಸತಕ್ಕದ್ದು ಮತ್ತು ಅದನ್ನು ನ್ಯಾಯಾಲಯದ ಮುಂದೆ ಪ್ರಮಾಣದ ಮೇಲೆ ನೀಡಿದ್ದಿದ್ದರೆ ಹೇಗೋ ಹಾಗೆ ಅದೇ ಪರಿಣಾಮ ಹೊಂದಿರತಕ್ಕದ್ದು.

(3) ಅಂಥ ಉತ್ತರವನ್ನು ಸ್ವೀಕರಿಸುವುದಕ್ಕೆ ಮುಂಚೆಯೇ ನ್ಯಾಯಾಲಯವನ್ನು ವಿಸರ್ಜಿಸಿದರೆ ಅಥವಾ ನ್ಯಾಯಾಲಯವು ಈ ಪ್ರಕರಣದ ಉಪಬಂಧಗಳನ್ನು ಪಾಲಿಸದೆ ಬಿಟ್ಟುಬಿಟ್ಟರೆ, ಸಮಾವೇಶಾಧಿಕಾರಿಯು, ತನ್ನ ವಿವೇಚಾನುಸಾರ, ವ್ಯವಹರಣೆಗಳನ್ನು ರದ್ದುಗೊಳಿಸತಕ್ಕದ್ದು ಮತ್ತು ಹೊಸ ಅಧಿವಿಚಾರಣೆಗೆ ಆದೇಶಿಸತಕ್ಕದ್ದು.

95. **ಹಿಂದಿನ ಅಪರಾಧ ನಿರ್ಣಯಗಳ ಮತ್ತು ಸಾಮಾನ್ಯ ಚಾರಿತ್ರ್ಯದ ಬಗೆಗಿನ ಸಾಕ್ಷ್ಯ.-** (1) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು ಯಾವುದೇ ಅಪರಾಧಕ್ಕಾಗಿ ಒಂದು ಭದ್ರತಾ ಪಡೆ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿರುವಾಗ, ಅಂಥ ಭದ್ರತಾ ಪಡೆ ನ್ಯಾಯಾಲಯವು, ಮತ್ತೊಂದು ಭದ್ರತಾ ಪಡೆ ನ್ಯಾಯಾಲಯವು ಅಥವಾ ಕ್ರಿಮಿನಲ್ ನ್ಯಾಯಾಲಯವು ಅಂಥ ವ್ಯಕ್ತಿಯ ಬಗ್ಗೆ ನೀಡಿದ ಯಾವುದೇ ಹಿಂದಿನ ಅಪರಾಧ ನಿರ್ಣಯಗಳ ಬಗ್ಗೆ ಅಥವಾ ಈ ಅಧಿನಿಯಮದ 51ನೇ ಪ್ರಕರಣದ ಅಥವಾ 53ನೇ ಪ್ರಕರಣದ ಅಥವಾ 54ನೇ ಪ್ರಕರಣದ ಮೇರೆಗೆ ನೀಡಿದ ಯಾವುದೇ ಹಿಂದಿನ ದಂಡನೆಯ ಬಗ್ಗೆ ವಿಚಾರಣೆ ಮಾಡಬಹುದು ಮತ್ತು ಹಿಂದಿನ ಅಪರಾಧಗಳ ಸಾಕ್ಷ್ಯವನ್ನು

ಸ್ವೀಕರಿಸಬಹುದು ಮತ್ತು ದಾಖಲಿಸಿಕೊಳ್ಳಬಹುದು ಮತ್ತು ಆ ವ್ಯಕ್ತಿಯ ಸಾಮಾನ್ಯ ಚಾರಿತ್ರ್ಯದ ಬಗ್ಗೆ ಮತ್ತು ನಿಯಮಿಸಬಹುದಾದಂಥ ಇತರೆ ವಿಷಯಗಳ ಬಗ್ಗೆ ಹೆಚ್ಚಿನ ವಿಚಾರಣೆ ಮಾಡಬಹುದು ಮತ್ತು ಅದನ್ನು ದಾಖಲಿಸಿಕೊಳ್ಳಬಹುದು.

(2) ಈ ಪ್ರಕರಣದ ಮೇರೆಗೆ ಪಡೆದ ಸಾಕ್ಷ್ಯವನ್ನು ಮೌಖಿಕವಾಗಿಯಾಗಲಿ, ಅಥವಾ ಭದ್ರತಾ ಪಡೆ ನ್ಯಾಯಾಲಯಗಳ ಪುಸ್ತಕಗಳಲ್ಲಿ ಅಥವಾ ಇತರ ಸರ್ಕಾರಿ ದಾಖಲೆಗಳಲ್ಲಿನ ನಮೂದುಗಳ ರೂಪದಲ್ಲಾಗಲಿ ಅಥವಾ ಅವುಗಳಿಂದ ಪಡೆದ ಪ್ರಮಾಣೀಕೃತ ಉದ್ಧೃತ ಭಾಗಗಳ ಮೂಲಕವಾಗಲಿ ಪಡೆದುದಾಗಿರಬಹುದು; ಮತ್ತು ಅಧಿವಿಚಾರಣೆಗೆ ಒಳಪಟ್ಟ ವ್ಯಕ್ತಿಗೆ ಅವನ ಹಿಂದಿನ ಅಪರಾಧ ನಿರ್ಣಯಗಳ ಅಥವಾ ಚಾರಿತ್ರ್ಯದ ಬಗೆಗಿನ ಸಾಕ್ಷ್ಯವನ್ನು ಸ್ವೀಕರಿಸಲಾಗುವುದೆಂದು ಅಧಿವಿಚಾರಣೆಗೆ ಮುಂಚೆ ನೋಟೀಸು ನೀಡುವ ಅವಶ್ಯಕತೆ ಇರತಕ್ಕದ್ದಲ್ಲ.

(3) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದಲ್ಲಿ ಅಧಿವಿಚಾರಣೆ ನಡೆಸುತ್ತಿರುವ ಅಧಿಕಾರಿಯು, ಅವನು ಸೂಕ್ತವೆಂದು ಭಾವಿಸಿದರೆ, ಅಪರಾಧಿಯ ವಿರುದ್ಧದ ಯಾವುದೇ ಹಿಂದಿನ ಅಪರಾಧ ನಿರ್ಣಯಗಳನ್ನು, ಅವನ ಸಾಮಾನ್ಯ ಚಾರಿತ್ರ್ಯವನ್ನು, ಮತ್ತು ಅವನ ಸ್ವಂತ ತಿಳುವಳಿಕೆಗೆ ಬಂದಿರುವ ನಿಯಮಿಸಬಹುದಾದಂಥ ಇತರೆ ವಿಷಯಗಳನ್ನು, ಈ ಪ್ರಕರಣದ ಹಿಂದೆ ಹೇಳಿದ ಉಪಬಂಧಗಳ ಮೇರೆಗೆ ಅವುಗಳನ್ನು ರುಜುವಾತುಪಡಿಸಲು ಅಗತ್ಯಪಡಿಸುವ ಬದಲಾಗಿ ದಾಖಲು ಮಾಡಬಹುದು.

**96. ಆಪಾದಿತನ ಮನೋವಿಕಲತೆ.-** (1) ಭದ್ರತಾ ಪಡೆ ನ್ಯಾಯಾಲಯವು ಆಪಾದನೆಗೊಳಗಾದ ವ್ಯಕ್ತಿಯು ತನ್ನ ಪ್ರತಿರಕ್ಷೆಯನ್ನು ಮಾಡಿಕೊಳ್ಳಲು ಅಸ್ವಸ್ಥಚಿತ್ತತೆಯ ಕಾರಣದಿಂದಾಗಿ ಅಸಮರ್ಥನಾಗಿದ್ದನೆಂದು ಅಥವಾ ಆಪಾದಿಸಲಾದ ಕೃತ್ಯವನ್ನು ಅವನು ಮಾಡಿದ್ದರೂ, ಅಸ್ವಸ್ಥಚಿತ್ತತೆಯ ಕಾರಣದಿಂದಾಗಿ ಆ ಕೃತ್ಯದ ಸ್ವರೂಪವನ್ನು ತಿಳಿಯಲು ಅಥವಾ ಅದು ತಪ್ಪಾದುದೆಂದು ಅಥವಾ ಕಾನೂನಿಗೆ ವಿರುದ್ಧವಾದುದೆಂದು ತಿಳಿಯಲು ಅಸಮರ್ಥನಾಗಿರುವನೆಂದು ನ್ಯಾಯಾಲಯಕ್ಕೆ ಕಂಡುಬಂದಾಗ, ನ್ಯಾಯಾಲಯವು ತದನುಸಾರವಾಗಿ ನಿರ್ಣಯವನ್ನು ದಾಖಲು ಮಾಡತಕ್ಕದ್ದು.

(2) ನ್ಯಾಯಾಲಯದ ಪೀಠಾಸೀನ ಅಧಿಕಾರಿಯು ಅಥವಾ ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ಸಂದರ್ಭದಲ್ಲಿ ಅಧಿವಿಚಾರಣೆ ನಡೆಸುತ್ತಿರುವ ಅಧಿಕಾರಿಯು, ಸ್ಥಿರೀಕರಿಸುವ ಅಧಿಕಾರಿಗೆ, ಅಥವಾ ಸಂದರ್ಭಾನುಸಾರ, 111ನೇ ಪ್ರಕರಣದ ಮೇರೆಗೆ ಅದರ ನಿರ್ಣಯವನ್ನು ಕುರಿತು ವ್ಯವಹರಿಸಲು ಅಧಿಕಾರ ಪಡೆದ ಪ್ರಾಧಿಕಾರಿಗೆ ಪ್ರಕರಣವನ್ನು ಆ ಕೂಡಲೇ ವರದಿ ಮಾಡತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಯಾರಿಗೆ ಪ್ರಕರಣವನ್ನು ವರದಿ ಮಾಡಲಾಗಿದೆಯೋ ಆ ಸ್ಥಿರೀಕರಣ ಅಧಿಕಾರಿಯು, ನಿರ್ಣಯವನ್ನು ಸ್ಥಿರೀಕರಿಸದಿದ್ದರೆ, ಆಪಾದಿತ ವ್ಯಕ್ತಿಯು ಯಾವ ಆಪಾದನೆಗೆ

ಒಳಗಾಗಿರುತ್ತಾನೋ ಆ ಅಪರಾಧಕ್ಕಾಗಿ ಅದೇ ಅಥವಾ ಮತ್ತೊಂದು ಭದ್ರತಾ ಪಡೆ ನ್ಯಾಯಾಲಯದಿಂದ ಅವನನ್ನು ಅಧಿವಿಚಾರಣೆಗೊಳಪಡಿಸುವಂತೆ ಕ್ರಮ ಕೈಗೊಳ್ಳತಕ್ಕದ್ದು.

(4) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ನಿರ್ಣಯವನ್ನು (2)ನೇ ಉಪಪ್ರಕರಣದ ಮೇರೆಗೆ ಯಾವ ಪ್ರಾಧಿಕಾರಿಗೆ ವರದಿ ಮಾಡಲಾಗಿದೆಯೋ ಆ ಪ್ರಾಧಿಕಾರಿಯು ಮತ್ತು ಅವನಿಗೆ ಹಾಗೆ ವರದಿ ಮಾಡಲಾದ ಯಾವುದೇ ಪ್ರಕರಣದಲ್ಲಿ ನಿರ್ಣಯವನ್ನು ಸ್ಥಿರೀಕರಿಸುವ ಸ್ಥಿರೀಕರಣ ಅಧಿಕಾರಿಯು ಆಪಾದಿತ ವ್ಯಕ್ತಿಯನ್ನು ನಿಯಮಿಸಿದ ರೀತಿಯಲ್ಲಿ ಅಭಿರಕ್ಷೆಯಲ್ಲಿಡಲು ಆದೇಶ ಮಾಡತಕ್ಕದ್ದು ಮತ್ತು ಕೇಂದ್ರ ಸರ್ಕಾರದ ಆದೇಶಗಳಿಗಾಗಿ ಪ್ರಕರಣವನ್ನು ವರದಿ ಮಾಡತಕ್ಕದ್ದು.

(5) (4)ನೇ ಉಪಪ್ರಕರಣದ ಮೇರೆಗೆ ವರದಿಯನ್ನು ಸ್ವೀಕರಿಸಿದ ಮೇಲೆ, ಕೇಂದ್ರ ಸರ್ಕಾರವು, ಆಪಾದಿತ ವ್ಯಕ್ತಿಯನ್ನು ಮನೋವಿಕಲರ ರಕ್ಷಣಾ ಗೃಹದಲ್ಲಿ ಅಥವಾ ಸುರಕ್ಷಿತ ಅಭಿರಕ್ಷೆಯ ಇತರೆ ಸೂಕ್ತ ಸ್ಥಳದಲ್ಲಿ ತಡೆಹಿಡಿದಿರಿಸಬೇಕೆಂದು ಆದೇಶಿಸಬಹುದು.

97. **ಮನೋವಿಕಲ ಆಪಾದಿತನು ಅಧಿವಿಚಾರಣೆಗೆ ತರುವಾಯದಲ್ಲಿ ಯೋಗ್ಯನಾಗುವುದು.**- ಯಾರೇ ಆಪಾದಿತ ವ್ಯಕ್ತಿಯು ಮನಸ್ಸಿನ ಅಸ್ವಸ್ಥತೆಯ ಕಾರಣದಿಂದಾಗಿ ತನ್ನ ಪ್ರತಿರಕ್ಷೆ ಮಾಡಿಕೊಳ್ಳಲು ಅಸಮರ್ಥನಾಗಿರುವನೆಂದು ಕಂಡುಬಂದಲ್ಲಿ ಮತ್ತು ಅವನು 96ನೇ ಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿರುವಲ್ಲಿ ಅಥವಾ ತಡೆಹಿಡಿದಿರಿಸಿರುವಲ್ಲಿ, ಈ ಬಗ್ಗೆ ನೇಮಿಸಲಾದ ಯಾರೇ ಅಧಿಕಾರಿಯು,-

(ಎ) ಅಂಥ ವ್ಯಕ್ತಿಯು 96ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿದ್ದರೆ, ಅವನು ಪ್ರತಿರಕ್ಷೆಯನ್ನು ಮಾಡಿಕೊಳ್ಳಲು ಸಮರ್ಥನಾಗಿದ್ದಾನೆಂದು ವೈದ್ಯಾಧಿಕಾರಿಯು ವರದಿ ಮಾಡಿದಾಗ; ಅಥವಾ

(ಬಿ) ಅಂಥ ವ್ಯಕ್ತಿಯನ್ನು 96ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಸೆರೆಮನೆಯಲ್ಲಿ ತಡೆಹಿಡಿದಿರಿಸಿದ್ದರೆ, ಅವನು ತನ್ನ ಪ್ರತಿರಕ್ಷೆಯನ್ನು ಮಾಡಿಕೊಳ್ಳಲು ಸಮರ್ಥನಾಗಿದ್ದಾನೆಂದು ಕಾರಾಗೃಹಗಳ ಮಹಾ ನಿರೀಕ್ಷಕರ ಪ್ರಮಾಣಪತ್ರದ ಮೇಲೆ ಮತ್ತು ಅಂಥ ವ್ಯಕ್ತಿಯನ್ನು ಸದರಿ ಉಪಪ್ರಕರಣದ ಮೇರೆಗೆ ಮನೋವಿಕಲರ ರಕ್ಷಣಾ ಗೃಹದಲ್ಲಿ ತಡೆಹಿಡಿದಿರಿಸಿದ್ದರೆ, ಅಂಥ ರಕ್ಷಣಾಗೃಹದ ಯಾರೇ ಇಬ್ಬರು ಅಥವಾ ಹೆಚ್ಚು ಸಂದರ್ಶಕರ ಪ್ರಮಾಣಪತ್ರದ ಮೇಲೆ ಮತ್ತು ಆ ಉಪಪ್ರಕರಣದ ಮೇರೆಗೆ ಇತರೆ ಯಾವುದೇ ಸ್ಥಳದಲ್ಲಿ ಅವನನ್ನು ತಡೆಹಿಡಿದಿರಿಸಿದ್ದರೆ, ನಿಯಮಿಸಿದ ಪ್ರಾಧಿಕಾರದ ಪ್ರಮಾಣಪತ್ರದ ಮೇಲೆ

– ಅವನು ಮೊದಲು ಯಾವ ಅಪರಾಧಕ್ಕಾಗಿ ಆಪಾದಿತನಾಗಿರುವನೋ ಆ ಅಪರಾಧಕ್ಕಾಗಿ ಅದೇ ಅಥವಾ ಮತ್ತೊಂದು ಭದ್ರತಾ ಪಡೆ ನ್ಯಾಯಾಲಯದಿಂದ ಅಥವಾ ಆ

ಅಪರಾಧವು ಸಿವಿಲ್ ಅಪರಾಧವಾಗಿದ್ದರೆ ಕ್ರಿಮಿನಲ್ ನ್ಯಾಯಾಲಯದಿಂದ ಅಂಥ ವ್ಯಕ್ತಿಯನ್ನು ಅಧಿವಿಚಾರಣೆಗೆ ಒಳಪಡಿಸಲು ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

98. **97ನೇ ಪ್ರಕರಣದ ಮೇರೆಗೆ ಮಾಡಿದ ಆದೇಶಗಳನ್ನು ಕೇಂದ್ರ ಸರ್ಕಾರಕ್ಕೆ ರವಾನಿಸುವುದು.–** ಆಪಾದಿತನ ಅಧಿವಿಚಾರಣೆಗಾಗಿ 97ನೇ ಪ್ರಕರಣದ ಮೇರೆಗೆ ಒಬ್ಬ ಅಧಿಕಾರಿಯು ಮಾಡಿದ ಪ್ರತಿಯೊಂದು ಆದೇಶದ ಪ್ರತಿಯನ್ನು ಕೂಡಲೇ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು.

99. **ಮನೋವಿಕಲ ಆಪಾದಿತನ ಬಿಡುಗಡೆ.–** ಯಾರೇ ವ್ಯಕ್ತಿಯು 96ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿರುವಲ್ಲಿ ಅಥವಾ ಅದೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಅವನನ್ನು ತಡೆಹಿಡಿದಿರಿಸಿರುವಲ್ಲಿ,–

(ಎ) ಅಂಥ ವ್ಯಕ್ತಿಯು ಸದರಿ (4)ನೇ ಉಪಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿದ್ದರೆ, ವೈದ್ಯಾಧಿಕಾರಿಯ ವರದಿಯ ಮೇಲೆ; ಅಥವಾ

(ಬಿ) ಅಂಥ ವ್ಯಕ್ತಿಯನ್ನು ಸದರಿ (5)ನೇ ಉಪಪ್ರಕರಣದ ಮೇರೆಗೆ ತಡೆಹಿಡಿದಿರಿಸಿದ್ದರೆ, ಅಂಥ ಅಧಿಕಾರಿಯ ಅಥವಾ ಪ್ರಾಧಿಕಾರಿಯ ಅಭಿಪ್ರಾಯದಲ್ಲಿ ಅಂಥ ವ್ಯಕ್ತಿಯು ತನಗಾಗಲಿ ಅಥವಾ ಇತರ ಯಾರೇ ವ್ಯಕ್ತಿಗಾಗಲಿ ಕ್ಷತಿಯನ್ನುಂಟುಮಾಡುವ ಅಪಾಯವಿಲ್ಲವೆಂದು 97ನೇ ಪ್ರಕರಣದ (ಬಿ) ಖಂಡದಲ್ಲಿ ಹೇಳಿರುವ ಪ್ರಾಧಿಕಾರಿಗಳ ಪೈಕಿ ಯಾರೇ ಪ್ರಾಧಿಕಾರಿಯಿಂದ ಪಡೆದ ಪ್ರಮಾಣಪತ್ರದ ಮೇಲೆ

– ಕೇಂದ್ರ ಸರ್ಕಾರವು ಅಂಥ ವ್ಯಕ್ತಿಯನ್ನು ಬಿಡುಗಡೆ ಮಾಡಬೇಕೆಂದು ಅಥವಾ ಅಭಿರಕ್ಷೆಯಲ್ಲಿ ತಡೆಹಿಡಿದಿರಿಸಬೇಕೆಂದು ಅಥವಾ ಅವನನ್ನು ಸರ್ಕಾರಿ ಮನೋವಿಕಲ ರಕ್ಷಣಾಲಯಕ್ಕೆ ಈಗಾಗಲೇ ಕಳುಹಿಸಿರದಿದ್ದರೆ ಅವನನ್ನು ಆ ರಕ್ಷಣಾಲಯಕ್ಕೆ ವರ್ಗಾಯಿಸಬೇಕೆಂದು ಅದೇಶಿಸಬಹುದು.

100. **ಮನೋವಿಕಲ ಆಪಾದಿತನನ್ನು ಅವನ ಸಂಬಂಧಿಗಳಿಗೆ ಒಪ್ಪಿಸುವುದು.–** 96ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿರುವ ಅಥವಾ ಆ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ತಡೆಹಿಡಿದಿರಿಸಿರುವ ಯಾರೇ ವ್ಯಕ್ತಿಯ ಯಾರೇ ಸಂಬಂಧಿ ಅಥವಾ ಸ್ನೇಹಿತನು ತಡೆಹಿಡಿದಿರಿಸಿರುವ ವ್ಯಕ್ತಿಯನ್ನು ತನ್ನ ರಕ್ಷಣೆಗೆ ಮತ್ತು ಅಭಿರಕ್ಷೆಗೆ ಒಪ್ಪಿಸಬೇಕೆಂದು ಇಚ್ಛಿಸಿದಲ್ಲಿ, ಕೇಂದ್ರ ಸರ್ಕಾರವು, ಅಂಥ ಸಂಬಂಧಿ ಅಥವಾ ಸ್ನೇಹಿತನ ಅರ್ಜಿಯ ಮೇಲೆ, ಮತ್ತು, ಒಪ್ಪಿಸಿದ ಆ ವ್ಯಕ್ತಿಯ ರಕ್ಷಣೆಯನ್ನು ಸರಿಯಾಗಿ ಮಾಡುತ್ತೇವೆಂದು ಮತ್ತು ತನಗೆ ಅಥವಾ ಯಾರೇ ಇತರೆ ಅಧಿಕಾರಿಗೆ ಕ್ಷತಿಯನ್ನು ಉಂಟುಮಾಡುವುದರಿಂದ ತಡೆಯುತ್ತೇವೆಂದು ಮತ್ತು ಕೇಂದ್ರ ಸರ್ಕಾರವು

ನಿರ್ದೇಶಿಸಬಹುದಾದಂತಹ ಅಧಿಕಾರಿಯ ಪರಿಶೀಲನೆಗಾಗಿ ಮತ್ತು ಅಂಥ ಕಾಲಗಳಲ್ಲಿ ಮತ್ತು ಸ್ಥಳಗಳಲ್ಲಿ ಹಾಜರುಪಡಿಸಲಾಗುವುದೆಂದು ಮನದಟ್ಟಾಗುವಂತೆ ಭದ್ರತೆ ನೀಡಿದ ಮೇಲೆ, ಅಂಥ ವ್ಯಕ್ತಿಯನ್ನು ಅಂಥ ಸಂಬಂಧಿ ಅಥವಾ ಸ್ನೇಹಿತನಿಗೆ ಒಪ್ಪಿಸಬೇಕೆಂದು ಆದೇಶ ಮಾಡಬಹುದು.

**101. ಅಧಿವಿಚಾರಣೆ ಇತ್ಯರ್ಥದಲ್ಲಿರುವಾಗ ಸ್ವತ್ತಿನ ಅಭಿರಕ್ಷೆಗೆ ಮತ್ತು ವಿಲೆಗೆ ಆದೇಶ.**– ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಯಾವ ಅಪರಾಧವನ್ನು ಮಾಡಲಾಗಿದೆ ಎಂದು ಅಥವಾ ಯಾವುದೇ ಅಪರಾಧ ಮಾಡುವುದಕ್ಕಾಗಿ ಅದನ್ನು ಉಪಯೋಗಿಸಲಾಗಿದೆಯೋ ಆ ಸ್ವತ್ತನ್ನು ಅಧಿವಿಚಾರಣೆ ನಡೆಯುವ ಅವಧಿಯಲ್ಲಿ ಭದ್ರತಾ ಪಡೆ ನ್ಯಾಯಾಲಯದ ಮುಂದೆ ಅದನ್ನು ಹಾಜರುಪಡಿಸಿದಾಗ, ನ್ಯಾಯಾಲಯವು, ಅಧಿವಿಚಾರಣೆಯು ಮುಕ್ತಾಯಗೊಳ್ಳುವವರೆಗೆ ಅಂಥ ಸ್ವತ್ತಿನ ಸೂಕ್ತ ಅಭಿರಕ್ಷೆಗೆ ಅದು ಯೋಗ್ಯವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು ಮತ್ತು ಆ ಸ್ವತ್ತು ಶೀಘ್ರವಾಗಿ ಮತ್ತು ಸ್ವಾಭಾವಿಕವಾಗಿ ಹಾಳಾಗುವಂಥಾಗಿದ್ದರೆ, ಅದು ಅವಶ್ಯವೆಂದು ಭಾವಿಸಬಹುದಾದಂಥ ಸಾಕ್ಷ್ಯವನ್ನು ದಾಖಲಿಸಿಕೊಂಡ ತರುವಾಯ ಅದನ್ನು ಮಾರಾಟ ಮಾಡಲು ಅಥವಾ ಅನ್ಯಥಾ ವಿಲೆ ಮಾಡಲು ಆದೇಶಿಸಬಹುದು.

**102. ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಅಪರಾಧವನ್ನು ಮಾಡಲಾಗಿದೆಯೋ ಆ ಸ್ವತ್ತಿನ ವಿಲೆಗೆ ಆದೇಶ.**– (1) ಯಾವುದೇ ಭದ್ರತಾ ಪಡೆ ನ್ಯಾಯಾಲಯದ ಮುಂದಿರುವ ಅಧಿವಿಚಾರಣೆಯು ಮುಕ್ತಾಯವಾದ ನಂತರ, ನ್ಯಾಯಾಲಯವು ಅಥವಾ ಅಂಥ ಭದ್ರತಾ ಪಡೆ ನ್ಯಾಯಾಲಯದ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಸ್ಥಿರೀಕರಿಸುವ ಅಧಿಕಾರಿಯು, ಅಥವಾ ಅಂಥ ಅಧಿಕಾರಿಗೆ ವರಿಷ್ಠವಾಗಿರುವ ಯಾವುದೇ ಪ್ರಾಧಿಕಾರವು ಅಥವಾ ಯಾರ ನಿರ್ಣಯಕ್ಕೆ ಅಥವಾ ಶಿಕ್ಷೆಗೆ ಸ್ಥಿರೀಕರಣದ ಅಗತ್ಯವಿಲ್ಲವೋ ಆ ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ಸಂದರ್ಭದಲ್ಲಿ ಯಾರ ಕಮಾಂಡಿನಲ್ಲಿ ಅಧಿವಿಚಾರಣೆ ನಡೆಯಿತೋ ಅಂಥ ಉಪಮಹಾನಿರೀಕ್ಷಕನ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಅಧಿಕಾರಿಯು, ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಅಥವಾ ತನ್ನ ಅಭಿರಕ್ಷೆಯಲ್ಲಿರುವ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ ಯಾವುದೇ ಅಪರಾಧವನ್ನು ಮಾಡಲಾಗಿದೆಯೆಂದು ಕಂಡುಬರುವುದೋ ಅಥವಾ ಆ ಯಾವುದೇ ಅಪರಾಧ ಮಾಡುವುದಕ್ಕಾಗಿ ಯಾವ ಸ್ವತ್ತನ್ನು ಬಳಸಲಾಗಿದೆಯೋ ಆ ಯಾವುದೇ ಸ್ವತ್ತನ್ನು ಅಥವಾ ದಸ್ತಾವೇಜನ್ನು ನಾಶಪಡಿಸುವ ಮೂಲಕ, ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ, ಅದರ ಸ್ವಾಧೀನಕ್ಕೆ ಹಕ್ಕುಳ್ಳವನೆಂದು ಕ್ಲೇಮು ಮಾಡುವ ಯಾರೇ ವ್ಯಕ್ತಿಗೆ ಅದನ್ನು ಒಪ್ಪಿಸುವ ಮೂಲಕ ಅಥವಾ ಅನ್ಯಥಾ ವಿಲೆ ಮಾಡಲು ಅದು ಅಥವಾ ಅವನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಮಾಡಬಹುದು.

(2) ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಅಪರಾಧ ಮಾಡಲಾಗಿದೆ ಎಂದು ಕಂಡುಬಂದಿರುವುದೋ ಆ ಸ್ವತ್ತಿನ ಸಂಬಂಧದಲ್ಲಿ 1ನೇ ಉಪಪ್ರಕರಣದ ಮೇರೆಗೆ ಯಾವುದೇ ಆದೇಶ ಮಾಡಿರುವಲ್ಲಿ ಅಧಿವಿಚಾರಣೆ ಭಾರತದೊಳಗಡೆ ಆಗಿರಲಿ ಅಥವಾ ಆಗದಿರಲಿ ಆ ಆದೇಶವನ್ನು ಮಾಡಿರುವ ಅಧಿಕಾರಿಯು ಸಹಿ ಮಾಡಿದ ಮತ್ತು ಅನುಪ್ರಮಾಣಿಸಿದ ಒಂದು ಪ್ರತಿಯನ್ನು ತತ್ಕಾಲದಲ್ಲಿ ಅಂಥ ಸ್ವತ್ತು ಯಾವ ಮ್ಯಾಜಿಸ್ಟ್ರೇಟನ ಅಧಿಕಾರವ್ಯಾಪ್ತಿಯೊಳಗೆ ಇದೆಯೋ ಆ ಮ್ಯಾಜಿಸ್ಟ್ರೇಟನಿಗೆ ಕಳುಹಿಸಬಹುದು ಮತ್ತು ಆ ಮ್ಯಾಜಿಸ್ಟ್ರೇಟನು ತದನಂತರ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳ ಮೇರೆಗೆ ಅವನೇ ಆ ಆದೇಶವನ್ನು ಹೊರಡಿಸಿದ್ದರೆ ಹೇಗೋ ಹಾಗೆ ಅದನ್ನು ಕಾರ್ಯಗತವಾಗುವಂತೆ ಮಾಡಿಸತಕ್ಕದ್ದು.

(3) ಈ ಪ್ರಕರಣದಲ್ಲಿ 'ಸ್ವತ್ತು' ಎಂಬ ಪದವು, ಯಾವ ಸ್ವತ್ತಿಗೆ ಸಂಬಂಧಿಸಿದಂತೆ ಅಪರಾಧ ಮಾಡಲಾಗಿದೆ ಎಂದು ಕಂಡುಬಂದಿರುವುದೋ, ಆ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಯಾರೇ ವ್ಯಕ್ತಿಯ ಸ್ವಾಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಮೂಲತಃ ಇದ್ದಂಥ ಸ್ವತ್ತೇ ಅಲ್ಲದೆ, ಯಾವ ಸ್ವತ್ತಿನೊಳಗೆ ಅಥವಾ ಅದಕ್ಕೆ ಪರಿವರ್ತಿಸಲಾಗಿದೆಯೋ ಅಥವಾ ವಿನಿಮಯ ಮಾಡಿಕೊಳ್ಳಲಾಗಿದೆಯೋ ಆ ಯಾವುದೇ ಸ್ವತ್ತನ್ನು ಮತ್ತು ಕೂಡಲೇ ಅಥವಾ ಅನ್ಯಥಾ ಅಂಥ ಪರಿವರ್ತನೆಯಿಂದ ಅಥವಾ ವಿನಿಮಯದಿಂದ ಆರ್ಜಿಸಿದ ಯಾವುದೂ ಸಹ ಒಳಗೊಳ್ಳುತ್ತದೆ.

**103. ಅಧಿನಿಯಮದ ಮೇರೆಗಿನ ವ್ಯವಹರಣೆಗಳ ಸಂಬಂಧದಲ್ಲಿ ಭದ್ರತಾ ಪಡೆ ನ್ಯಾಯಾಲಯದ ಅಧಿಕಾರಗಳು.–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ಭದ್ರತಾ ಪಡೆ ನ್ಯಾಯಾಲಯದಿಂದ ನಡೆಯುವ ಯಾವುದೇ ಅಧಿವಿಚಾರಣೆಯನ್ನು ಭಾರತ ದಂಡ ಸಂಹಿತೆ (1860ರ 45)ಯ 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ನಡೆಯುವ ನ್ಯಾಯಿಕ ವ್ಯವಹರಣೆಗಳೆಂದು ಭಾವಿಸತಕ್ಕದ್ದು ಮತ್ತು ಭದ್ರತಾ ಪಡೆ ನ್ಯಾಯಾಲಯವನ್ನು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 345ನೇ ಮತ್ತು 346ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ನ್ಯಾಯಾಲಯವೆಂದು ಭಾವಿಸತಕ್ಕದ್ದು.

## ಅಧ್ಯಾಯ VIII

## ಸ್ಥಿರೀಕರಣ ಮತ್ತು ಪುನರೀಕ್ಷಣೆ

**104. ನಿರ್ಣಯ ಮತ್ತು ಶಿಕ್ಷೆಯು ಸ್ಥಿರೀಕೃತವಾದ ಹೊರತು ಸಿಂಧುವಾಗದಿರುವುದು.–** ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ಅಥವಾ ಭದ್ರತಾ ಪಡೆ ಲಘು ನ್ಯಾಯಾಲಯದ ನಿರ್ಣಯವು ಅಥವಾ ಶಿಕ್ಷೆಯು ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಅದು ಸ್ಥಿರೀಕೃತವಾಗಬಹುದಾದಷ್ಟರ ಮಟ್ಟಿಗೆ ಹೊರತು ಸಿಂಧುವಾಗತಕ್ಕದ್ದಲ್ಲ.

**105. ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ನಿರ್ಣಯವನ್ನು ಮತ್ತು ಶಿಕ್ಷೆಯನ್ನು ಸ್ಥಿರೀಕರಿಸುವ ಅಧಿಕಾರ.**– ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ನಿರ್ಣಯಗಳನ್ನು ಮತ್ತು ಶಿಕ್ಷೆಗಳನ್ನು ಕೇಂದ್ರ ಸರ್ಕಾರವು ಅಥವಾ ಕೇಂದ್ರ ಸರ್ಕಾರವು ವಾರಂಟಿನ ಮೂಲಕ ಈ ಸಂಬಂಧವಾಗಿ ಅಧಿಕಾರ ನೀಡಿದ ಯಾರೇ ಅಧಿಕಾರಿಯು ಸ್ಥಿರೀಕರಿಸಬಹುದು.

**106. ಭದ್ರತಾ ಪಡೆ ಲಘು ನ್ಯಾಯಾಲಯದ ನಿರ್ಣಯ ಮತ್ತು ಶಿಕ್ಷೆಯನ್ನು ಸ್ಥಿರೀಕರಿಸುವ ಅಧಿಕಾರ.**– ಭದ್ರತಾ ಪಡೆ ಲಘು ನ್ಯಾಯಾಲಯಗಳ ನಿರ್ಣಯಗಳನ್ನು ಮತ್ತು ಶಿಕ್ಷೆಗಳನ್ನು, ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವನ್ನು ಸಮಾವೇಶಗೊಳಿಸಲು ಅಧಿಕಾರ ಹೊಂದಿರುವ ಅಧಿಕಾರಿಯು ಅಥವಾ ಪ್ರಾಧಿಕಾರವು ಅಥವಾ ಅಂಥ ಪ್ರಾಧಿಕಾರಿಯ ಅಥವಾ ಅಧಿಕಾರಿಯ ವಾರಂಟಿನ ಮೂಲಕ ಈ ಸಂಬಂಧವಾಗಿ ಅಧಿಕಾರ ನೀಡಿದ ಯಾರೇ ಅಧಿಕಾರಿಯು ಸ್ಥಿರೀಕರಿಸಬಹುದು.

**107. ಸ್ಥಿರೀಕರಿಸುವ ಪ್ರಾಧಿಕಾರದ ಅಧಿಕಾರಗಳ ಮೇಲೆ ಪರಿಮಿತಿ.**– 105ನೇ ಪ್ರಕರಣದ ಅಥವಾ 106ನೇ ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟು, ಅದನ್ನು ಹೊರಡಿಸುವ ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂಥ ನಿರ್ಬಂಧಗಳನ್ನು, ಪರಿಬಂಧಗಳನ್ನು ಅಥವಾ ಷರತ್ತುಗಳನ್ನು ಒಳಗೊಂಡಿರತಕ್ಕದ್ದು.

**108. ಶಿಕ್ಷೆಗಳನ್ನು ಕಡಿಮೆ ಮಾಡುವುದಕ್ಕೆ, ಮಾಫಿ ಮಾಡುವುದಕ್ಕೆ ಅಥವಾ ಪರಿವರ್ತಿಸುವುದಕ್ಕೆ ಸ್ಥಿರೀಕರಿಸುವ ಪ್ರಾಧಿಕಾರದ ಅಧಿಕಾರ.**– 105ನೇ ಪ್ರಕರಣದ ಅಥವಾ 106ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ವಾರಂಟಿನಲ್ಲಿ ಒಳಗೊಂಡಿರಬಹುದಾದಂಥ ನಿರ್ಬಂಧಗಳಿಗೆ, ಪರಿಬಂಧಗಳಿಗೆ ಅಥವಾ ಷರತ್ತುಗಳಿಗೊಳಪಟ್ಟು ಭದ್ರತಾ ಪಡೆ ನ್ಯಾಯಾಲಯದ ಶಿಕ್ಷೆಯನ್ನು ಸ್ಥಿರೀಕರಿಸುವಾಗ ಅದು ನೀಡಿದ ದಂಡನೆಯನ್ನು ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು ಅಥವಾ 47ನೇ ಪ್ರಕರಣದಲ್ಲಿ ಗೊತ್ತುಪಡಿಸಿರುವ ಪ್ರಮಾಣದಲ್ಲಿ ಹೇಳಿರುವ ಯಾವುದೇ ಕಡಿಮೆ ಶಿಕ್ಷೆಗೆ ಅಥವಾ ಶಿಕ್ಷೆಗಳಿಗೆ ಆ ಶಿಕ್ಷೆಯನ್ನು ಪರಿವರ್ತಿಸಬಹುದು ಅಥವಾ ಅಧಿವಿಚಾರಣೆಯು ಕಾನೂನುಬಾಹಿರವಾದುದೆಂದು ಕಂಡುಬಂದರೆ ಅದರ ವ್ಯವಹರಣೆಗಳನ್ನು ತಳ್ಳಿಹಾಕಬಹುದು.

**109. ನಿರ್ಣಯದ ಅಥವಾ ಶಿಕ್ಷೆಯ ಪುನರೀಕ್ಷಣೆ.**– (1) ಭದ್ರತಾ ಪಡೆ ನ್ಯಾಯಾಲಯದ ಯಾವ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಸ್ಥಿರೀಕರಿಸಲು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಸ್ಥಿರೀಕರಿಸುವ ಪ್ರಾಧಿಕಾರದ ಆದೇಶದ ಮೂಲಕ ಒಮ್ಮೆ ಪುನರೀಕ್ಷಿಸಬಹುದು ಮತ್ತು ಹಾಗೆ ಪುನರೀಕ್ಷಿಸಿದ ಮೇಲೆ ನ್ಯಾಯಾಲಯವು, ಸ್ಥಿರೀಕರಿಸುವ ಪ್ರಾಧಿಕಾರವು ಹೆಚ್ಚಿನ ಸಾಕ್ಷ್ಯವನ್ನು ಪಡೆಯಬಹುದೆಂದು ನಿರ್ದೇಶಿಸಿದರೆ, ಅದನ್ನು ಪಡೆಯಬಹುದು.

(2) ಪುನರೀಕ್ಷಣೆಯಲ್ಲಿ ನ್ಯಾಯಾಲಯವು, ಮೂಲ ತೀರ್ಮಾನವನ್ನು ಹೊರಡಿಸಿದ್ದಾಗ ಹಾಜರಿದ್ದಂಥ ಅಧಿಕಾರಿಗಳನ್ನೇ, ಆ ಅಧಿಕಾರಿಗಳಲ್ಲಿ ಯಾರಾದರೂ ಅನಿವಾರ್ಯವಾಗಿ ಗೈರುಹಾಜರಾದ ಹೊರತು ಒಳಗೊಂಡಿರತಕ್ಕದ್ದು.

(3) ಅಂಥ ಅನಿವಾರ್ಯ ಗೈರು ಹಾಜರಿಯ ಸಂದರ್ಭದಲ್ಲಿ ಅದರ ಕಾರಣವನ್ನು ವ್ಯವಹರಣೆಗಳಲ್ಲಿ ಯುಕ್ತವಾಗಿ ಪ್ರಮಾಣೀಕರಿಸತಕ್ಕದ್ದು ಮತ್ತು ನ್ಯಾಯಾಲಯವು ಪುನರೀಕ್ಷಣೆಯನ್ನು ಮುಂದುವರಿಸತಕ್ಕದ್ದು. ಪರಂತು, ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವಾಗಿದ್ದರೆ, ಅದು ಐವರು ಅಧಿಕಾರಿಗಳನ್ನು ಅಥವಾ ಭದ್ರತಾ ಪಡೆ ಲಘು ನ್ಯಾಯಾಲಯವಾಗಿದ್ದರೆ ಮೂವರು ಅಧಿಕಾರಿಗಳನ್ನು ಆಗಲೂ ಒಳಗೊಂಡಿರತಕ್ಕದ್ದು.

**110. ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ನಿರ್ಣಯ ಮತ್ತು ಶಿಕ್ಷೆ.–** ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ನಿರ್ಣಯವನ್ನು ಮತ್ತು ಶಿಕ್ಷೆಯನ್ನು ಸ್ಥಿರೀಕರಿಸುವ ಅಗತ್ಯವಿರತಕ್ಕದ್ದಲ್ಲ. ಆದರೆ ಕೂಡಲೇ ಅದನ್ನು ಕಾರ್ಯಗತಗೊಳಿಸಬಹುದು.

**111. ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ವ್ಯವಹರಣೆಗಳ ರವಾನೆ.–** ಪ್ರತಿಯೊಂದು ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ವ್ಯವಹರಣೆಗಳನ್ನು, ವಿಳಂಬ ಮಾಡದೆ, ಯಾರ ಕಮಾಂಡಿನೊಳಗೆ ಅಧಿವಿಚಾರಣೆ ನಡೆಯಿತೋ ಆ ಉಪಮಹಾನಿರೀಕ್ಷಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗೆ ಅಥವಾ ನಿಯಮಿಸಿದ ಅಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ಅಥವಾ ಮಹಾನಿರ್ದೇಶಕನು ಅಥವಾ ಈ ಬಗ್ಗೆ ಅವನಿಂದ ಅಧಿಕಾರ ಪಡೆದ ಯಾರೇ ಅಧಿಕಾರಿಯು, ಮೊಕದ್ದಮೆಯ ಗುಣಾವಗುಣಗಳ ಮೇಲೆ ಆಧಾರಿತವಾದ ಕಾರಣಗಳಿಗಾಗಿ, ವ್ಯವಹರಣೆಗಳನ್ನು ರದ್ದುಪಡಿಸಬಹುದೇ ಹೊರತು ತಾಂತ್ರಿಕ ಕಾರಣಗಳ ಮೇಲೆ ಮಾತ್ರವೇ ಅಲ್ಲ ಅಥವಾ ನ್ಯಾಯಾಲಯವು ವಿಧಿಸಬಹುದಾಗಿದ್ದಂಥ ಯಾವುದೇ ಇತರೆ ಶಿಕ್ಷೆಗೆ ಆ ಶಿಕ್ಷೆಯನ್ನು ಇಳಿಸಬಹುದು.

**112. ಕೆಲವು ಸಂದರ್ಭಗಳಲ್ಲಿ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಬದಲಾಯಿಸುವುದು.–** (1) ಸ್ಥಿರೀಕರಿಸಿದ ಅಥವಾ ಸ್ಥಿರೀಕರಿಸುವ ಅಗತ್ಯವಿರದ, ಭದ್ರತಾ ಪಡೆ ನ್ಯಾಯಾಲಯವು ತಪ್ಪಿತಸ್ಥನೆಂದು ಮಾಡಿದ ನಿರ್ಣಯವು, ಯಾವುದೇ ಕಾರಣದಿಂದ ಅಸಿಂಧುವೆಂದು ಕಂಡುಬಂದಿರುವಲ್ಲಿ ಅಥವಾ ಸಾಕ್ಷ್ಯದ ಮೂಲಕ ಸಮರ್ಥನೆ ಮಾಡಲಾಗದಿರುವಲ್ಲಿ, ಶಿಕ್ಷೆಯಾಗಿ ನೀಡಿದ ದಂಡನೆಯನ್ನು ಪರಿವರ್ತಿಸಲು 124ನೇ ಪ್ರಕರಣದ ಮೇರೆಗೆ ಅಧಿಕಾರ ಹೊಂದಿರಬಹುದಾಗಿದ್ದಂಥ ಪ್ರಾಧಿಕಾರವು, ಆ ನಿರ್ಣಯವು ಸಿಂಧುವಾಗಿದ್ದರೆ, ಒಂದು ಹೊಸ ನಿರ್ಣಯವನ್ನು ಪ್ರತ್ಯಾಯೋಜಿಸಬಹುದು ಮತ್ತು ಅಂಥ ನಿರ್ಣಯದಲ್ಲಿ ನಿರ್ದಿಷ್ಟಪಡಿಸಿದ ಅಥವಾ ಒಳಗೊಂಡ ಅಪರಾಧಕ್ಕಾಗಿ ಶಿಕ್ಷೆ ವಿಧಿಸಬಹುದು:

ಪರಂತು, ಅಂಥ ಯಾವುದೇ ಪ್ರತ್ಯಾಯೋಜನೆಯನ್ನು, ಆಪಾದನೆಯ ಮೇಲೆ ಭದ್ರತಾ ಪಡೆ ನ್ಯಾಯಾಲಯವು ಅಂಥ ನಿರ್ಣಯವನ್ನು ಕ್ರಮಬದ್ಧವಾಗಿ ಮಾಡಿರಬಹುದಾಗಿದ್ದ ಹೊರತು ಮತ್ತು ಭದ್ರತಾ ಪಡೆ ನ್ಯಾಯಾಲಯವು ಸದರಿ ಅಪರಾಧವನ್ನು ರುಜುವಾತುಪಡಿಸುವ ಸಂಗತಿಗಳ ಬಗ್ಗೆ ಮನದಟ್ಟು ಮಾಡಿಕೊಂಡಿದೆಯೆಂದು ಕಂಡುಬಂದ ಹೊರತು ಮಾಡತಕ್ಕದ್ದಲ್ಲ.

(2) ಸ್ಥಿರೀಕರಣಗೊಂಡಿರುವ ಅಥವಾ ಸ್ಥಿರೀಕರಣದ ಅಗತ್ಯವಿಲ್ಲದಿರುವ, (1)ನೇ ಉಪಪ್ರಕರಣದ ಮೇರೆಗೆ ಬದಲಿಗೆ ಪ್ರತ್ಯಾಯೋಜಿಸಿದ ನಿರ್ಣಯದ ಅನುಸಾರವಾಗಿ ವಿಧಿಸಿದ ಶಿಕ್ಷೆಯಾಗಿರದ ಭದ್ರತಾ ಪಡೆ ನ್ಯಾಯಾಲಯವು ವಿಧಿಸಿರುವ ಶಿಕ್ಷೆಯು ಯಾವುದೇ ಕಾರಣಕ್ಕಾಗಿ ಅಸಿಂಧುವೆಂದು ಕಂಡುಬಂದರೆ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಪ್ರಾಧಿಕಾರವು ಸಿಂಧುವಾಗಿರುವ ಶಿಕ್ಷೆಯನ್ನು ವಿಧಿಸಬಹುದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ವಿಧಿಸಿದ ಶಿಕ್ಷೆಯ ಮೂಲಕ ನೀಡಿದ ದಂಡನೆಯು, ಈ ಪ್ರಕರಣದ ಮೇರೆಗೆ ಯಾವ ಶಿಕ್ಷೆಗೆ ಬದಲಾಗಿ ಶಿಕ್ಷೆಯನ್ನು ಪ್ರತ್ಯಾಯೋಜಿಸಿದ ಆ ಶಿಕ್ಷೆಯಾಗಿ ನೀಡಿದ ದಂಡನೆಗಿಂತ ಅಥವಾ ಅದನ್ನು ಮೀರಿ ದಂಡನೆಗಳ ಪ್ರಮಾಣದಲ್ಲಿ ಹೆಚ್ಚಿನದ್ದಾಗಿರತಕ್ಕದ್ದಲ್ಲ.

(4) ಪ್ರತ್ಯಾಯೋಜಿಸಿದ ಯಾವುದೇ ನಿರ್ಣಯವು, ಅಥವಾ ಈ ಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ಶಿಕ್ಷೆಯು ಈ ಅಧಿನಿಯಮದ ಮತ್ತು ನಿಯಮಗಳ ಉದ್ದೇಶಗಳಿಗಾಗಿ ಅವು ಭದ್ರತಾ ಪಡೆ ನ್ಯಾಯಾಲಯದ ನಿರ್ಣಯ ಅಥವಾ ಸಂದರ್ಭಾನುಸಾರ ಶಿಕ್ಷೆಯಾಗಿದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

**113. ಭದ್ರತಾ ಪಡೆ ನ್ಯಾಯಾಲಯದ ಆದೇಶದ, ನಿರ್ಣಯದ ಅಥವಾ ಶಿಕ್ಷೆಯ ಸಂಬಂಧದಲ್ಲಿ ಪರಿಹಾರ.–** (1) ಯಾವುದೇ ಭದ್ರತಾ ಪಡೆ ನ್ಯಾಯಾಲಯವು ಮಾಡಿದ ಯಾವುದೇ ಆದೇಶದಿಂದ ತಾನು ಬಾಧಿತನಾಗಿದ್ದೇನೆಂದು ಭಾವಿಸುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಅಂಥ ಭದ್ರತಾ ಪಡೆ ನ್ಯಾಯಾಲಯದ ಯಾವುದೇ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಸ್ಥಿರೀಕರಿಸಲು ಅಧಿಕಾರ ಪಡೆದ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ಸ್ಥಿರೀಕರಿಸುವ ಪ್ರಾಧಿಕಾರಿಯು ಹೊರಡಿಸಿದ ಆದೇಶದ ಸರಿತನದ, ಕಾನೂನುಸಮ್ಮತತೆಯ ಅಥವಾ ಅದರ ಔಚಿತ್ಯದ ಬಗ್ಗೆ ಅಥವಾ ಆ ಆದೇಶವು ಯಾವ ವ್ಯವಹರಣೆಗೆ ಸಂಬಂಧಿಸಿದೆಯೋ ಅದರ ಕ್ರಮಬದ್ಧತೆ ಬಗ್ಗೆ ತಾನೇ ಸ್ವತಃ ಮನದಟ್ಟು ಮಾಡಿಕೊಳ್ಳಲು ಅಗತ್ಯವೆಂದು ಪರಿಗಣಿಸುವಂಥ ಕ್ರಮಗಳನ್ನು ಕೈಗೊಳ್ಳಬಹುದು.

(2) ಯಾವುದೇ ಭದ್ರತಾ ಪಡೆ ನ್ಯಾಯಾಲಯದ ಸ್ಥಿರೀಕರಣಗೊಂಡ ನಿರ್ಣಯದಿಂದ ಅಥವಾ ಶಿಕ್ಷೆಯಿಂದ ತಾನು ಬಾಧಿತನಾಗಿದ್ದೇನೆಂದು ಭಾವಿಸುವ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯು, ಕೇಂದ್ರ ಸರ್ಕಾರಕ್ಕೆ, ಮಹಾ ನಿರ್ದೇಶಕನಿಗೆ ಅಥವಾ ಅಂಥ ನಿರ್ಣಯವನ್ನು ಅಥವಾ ಶಿಕ್ಷೆಯನ್ನು ಯಾರು ಸ್ಥಿರೀಕರಿಸಿದ್ದಾರೋ ಅವರಿಗೆ ಕಮಾಂಡಿನಲ್ಲಿ ವರಿಷ್ಠರಾಗಿರುವ ಯಾರೇ ನಿಯಮಿಸಿದ ಅಧಿಕಾರಿಗೆ ಅರ್ಜಿ ಸಲ್ಲಿಸಬಹುದು ಮತ್ತು ಕೇಂದ್ರ ಸರ್ಕಾರವು, ಮಹಾ ನಿರ್ದೇಶಕನು ಅಥವಾ ಸಂದರ್ಭಾನುಸಾರ ನಿಯಮಿಸಿದ ಅಧಿಕಾರಿಯು, ಅದು ಅಥವಾ ಅವನು ಆ ಬಗ್ಗೆ ಸೂಕ್ತವೆಂದು ಭಾವಿಸುವಂಥ ಆದೇಶವನ್ನು ಹೊರಡಿಸಬಹುದು.

**114. ವ್ಯವಹರಣೆಗಳನ್ನು ರದ್ದುಗೊಳಿಸುವುದು.–** ಕೇಂದ್ರ ಸರ್ಕಾರವು, ಮಹಾನಿರ್ದೇಶಕನು ಅಥವಾ ಮಹಾ ನಿರೀಕ್ಷಕನು ಯಾವುದೇ ಭದ್ರತಾ ಪಡೆ ನ್ಯಾಯಾಲಯದ ವ್ಯವಹರಣೆಗಳನ್ನು, ಅವು ಕಾನೂನುಬಾಹಿರ ಅಥವಾ ನ್ಯಾಯೋಚಿತವಾದುವಲ್ಲವೆಂಬ ಕಾರಣಗಳ ಮೇಲೆ ರದ್ದುಗೊಳಿಸಬಹುದು.

## ಅಧ್ಯಾಯ IX

### ಶಿಕ್ಷೆಯನ್ನು ಜಾರಿಗೊಳಿಸುವುದು, ಕ್ಷಮಾದಾನ, ಮಾಫಿ, ಇತ್ಯಾದಿ

**115. ಮರಣ ದಂಡನೆಯ ರೀತಿ.–** ಮರಣದಂಡನೆಯನ್ನು ವಿಧಿಸುವಾಗ, ಭದ್ರತಾ ಪಡೆ ನ್ಯಾಯಾಲಯವು ತನ್ನ ವಿವೇಚಾನುಸಾರ, ಅಪರಾಧಿಯು ಮರಣ ಹೊಂದುವವರೆಗೆ ಅಪರಾಧಿಯ ಕುತ್ತಿಗೆಗೆ ನೇಣು ಹಾಕುವುದರಿಂದ ಅವನು ಮರಣವನ್ನು ಹೊಂದತಕ್ಕದ್ದು ಅಥವಾ ಆತನಿಗೆ ಬಂದೂಕಿನಿಂದ ಗುಂಡುಹಾರಿಸುವ ಮೂಲಕ ಆತನು ಮರಣವನ್ನು ಹೊಂದತಕ್ಕದ್ದು ಎಂದು ನಿರ್ದೇಶಿಸತಕ್ಕದ್ದು.

**116. ಕಾರಾವಾಸದ ಶಿಕ್ಷೆಯ ಪ್ರಾರಂಭ.–** ಈ ಅಧಿನಿಯಮದ ಮೇರೆಗೆ ಭದ್ರತಾ ಪಡೆ ನ್ಯಾಯಾಲಯವು ಯಾರೇ ವ್ಯಕ್ತಿಗೆ ಕಾರಾವಾಸ ಶಿಕ್ಷೆಯನ್ನು ವಿಧಿಸಿದಾಗ, ಅವನ ಶಿಕ್ಷೆಯ ಅವಧಿಯನ್ನು, ಅದನ್ನು ಪರಿಷ್ಕರಿಸಿರಲಿ ಅಥವಾ ಇಲ್ಲದಿರಲಿ, ಯಾವ ದಿನದಂದು ಮೂಲ ವ್ಯವಹರಣೆಗಳಿಗೆ ಪೀಠಾಸೀನ ಅಧಿಕಾರಿಯು ಸಹಿ ಮಾಡಿದ್ದನೋ ಅಥವಾ ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ಸಂದರ್ಭದಲ್ಲಿ ಆ ನ್ಯಾಯಾಲಯವು ಸಹಿ ಮಾಡಿತ್ತೋ ಆ ದಿನದಂದು ಪ್ರಾರಂಭವಾಗಿರುವುದಾಗಿ ಲೆಕ್ಕ ಹಾಕತಕ್ಕದ್ದು:

ಪರಂತು, ಯಾವ ಪ್ರಕರಣಕ್ಕೆ ಸಂಬಂಧಿಸಿದಂತೆ ಆಪಾದಿತ ವ್ಯಕ್ತಿಗೆ ಶಿಕ್ಷೆಯನ್ನು ವಿಧಿಸಲಾಯಿತೋ ಆ ಪ್ರಕರಣದ ತನಿಖೆಯ, ವಿಚಾರಣೆಯ ಅಥವಾ ಅಧಿವಿಚಾರಣೆಯ ಕಾಲದಲ್ಲಿ ಮತ್ತು ಯಾವ ದಿನಾಂಕದಂದು ಮೂಲ ವ್ಯವಹರಣೆಗಳಿಗೆ ಸಹಿ ಮಾಡಲಾಗಿತ್ತೋ ಆ ದಿನಾಂಕಕ್ಕೆ ಮುಂಚೆ ಅವನು ಅನುಭವಿಸಿದ್ದ, ತಡೆಹಿಡಿದಿರಿಸಿದ್ದ ಅಥವಾ ಬಂಧನದಲ್ಲಿದ್ದ ಅವಧಿ ಯಾವುದಾದರೂ ಇದ್ದರೆ, ಅದನ್ನು

ಶಿಕ್ಷೆಯ ಅವಧಿಯಲ್ಲಿ ವಜಾವಟ್ಟು ಮಾಡತಕ್ಕದ್ದು ಮತ್ತು ಕಾರಾವಾಸವನ್ನು ಅನುಭವಿಸಲು ಅಂಥ ವ್ಯಕ್ತಿಗೆ ಇರುವ ಹೊಣೆಗಾರಿಕೆಯನ್ನು ಅವನ ಶಿಕ್ಷೆಯ ಉಳಿದ ಅವಧಿ ಯಾವುದಾದರೂ ಇದ್ದರೆ ಅಷ್ಟಕ್ಕೆ ಸೀಮಿತಗೊಳಿಸತಕ್ಕದ್ದು.

**117. ಕಾರಾವಾಸ ಶಿಕ್ಷೆಯನ್ನು ಜಾರಿಗೊಳಿಸುವುದು.**- (1) ಭದ್ರತಾ ಪಡೆ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ಯಾವುದೇ ಕಾರಾವಾಸ ಶಿಕ್ಷೆಯನ್ನು ವಿಧಿಸಿದಾಗಲೆಲ್ಲಾ ಅಥವಾ ಯಾವುದೇ ಮರಣದಂಡನೆಯ ಶಿಕ್ಷೆಯನ್ನು ಕಾರಾವಾಸಕ್ಕೆ ತಗ್ಗಿಸಿದಾಗಲೆಲ್ಲಾ, ಸ್ಥಿರೀಕರಣಗೊಳಿಸುವ ಅಧಿಕಾರಿಯು, ಅಥವಾ ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯದ ಸಂದರ್ಭದಲ್ಲಿ ನ್ಯಾಯಾಲಯವನ್ನು ನಡೆಸುತ್ತಿರುವ ಅಧಿಕಾರಿಯು ಅಥವಾ ನಿಯಮಿಸಬಹುದಾದಂಥ ಇತರ ಅಧಿಕಾರಿಯು, (3) ಮತ್ತು (4)ನೇ ಉಪಪ್ರಕರಣಗಳಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಆ ಶಿಕ್ಷೆಯನ್ನು, ಸಿವಿಲ್ ಕಾರಾಗೃಹದಲ್ಲಿ ಬಂಧನದಲ್ಲಿಡುವುದರ ಮೂಲಕ ಕಾರ್ಯಗತಗೊಳಿಸತಕ್ಕದ್ದೆಂದು ನಿರ್ದೇಶಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನಿರ್ದೇಶನವನ್ನು ನೀಡಿರುವಾಗ, ಶಿಕ್ಷೆಗೆ ಗುರಿಯಾಗಿರುವ ವ್ಯಕ್ತಿಯ ಕಮಾಂಡರ್‌ನು ಅಥವಾ ನಿಯಮಿಸಬಹುದಾದಂಥ ಇತರೆ ಅಧಿಕಾರಿಯು ನಿಯಮಿಸಿದ ನಮೂನೆಯಲ್ಲಿ ವಾರಂಟನ್ನು, ಅಂಥ ವ್ಯಕ್ತಿಯನ್ನು ಯಾವ ಕಾರಾಗೃಹದಲ್ಲಿ ತಡೆಹಿಡಿದಿರಿಸಲಾಗುವುದೋ ಆ ಕಾರಾಗೃಹದ ಪ್ರಭಾರದಲ್ಲಿರುವ ಅಧಿಕಾರಿಗೆ ಕಳುಹಿಸಿಕೊಡತಕ್ಕದ್ದು ಮತ್ತು ವಾರಂಟಿನೊಂದಿಗೆ ಆ ಕಾರಾಗೃಹಕ್ಕೆ ಅವನನ್ನು ಕಳುಹಿಸಲು ಏರ್ಪಾಟು ಮಾಡತಕ್ಕದ್ದು.

(3) ಮೂರು ತಿಂಗಳನ್ನು ಮೀರದ ಅವಧಿಯ ಮತ್ತು ಭದ್ರತಾ ಪಡೆ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ವಿಧಿಸಿದ ಕಾರಾವಾಸ ಶಿಕ್ಷೆಯ ಸಂದರ್ಭದಲ್ಲಿ, (1)ನೇ ಉಪಪ್ರಕರಣದ ಮೇರೆಗಿನ ಸಮುಚಿತ ಅಧಿಕಾರಿಯು ಶಿಕ್ಷೆಯನ್ನು ಸಿವಿಲ್ ಕಾರಾಗೃಹದ ಬದಲಾಗಿ ಭದ್ರತಾ ಪಡೆ ಅಭಿರಕ್ಷೆಯಲ್ಲಿ ಬಂಧನದಲ್ಲಿಡುವುದರ ಮೂಲಕ ಕಾರ್ಯಗತಗೊಳಿಸತಕ್ಕದ್ದೆಂದು ನಿರ್ದೇಶಿಸಬಹುದು.

(4) ಸಕ್ರಿಯ ಕರ್ತವ್ಯದ ಮೇಲೆ ಇದ್ದಾಗ ಕಾರಾವಾಸ ಶಿಕ್ಷೆಯನ್ನು, ಶಿಕ್ಷೆಗೆ ಒಳಗಾಗಿರುವ ವ್ಯಕ್ತಿಯು ಯಾರ ಕಮಾಂಡಿನಲ್ಲಿ ಸೇವೆ ಸಲ್ಲಿಸುತ್ತಿರುವನೋ ಆ ಉಪ ಮಹಾನಿರೀಕ್ಷಕನು ಅಥವಾ ಯಾರೇ ನಿಯಮಿಸಿದ ಅಧಿಕಾರಿಯು ಕಾಲಕಾಲಕ್ಕೆ ಗೊತ್ತುಪಡಿಸಬಹುದಾದಂಥ ಸ್ಥಳದಲ್ಲಿ ಆತನನ್ನು ಬಂಧನದಲ್ಲಿಡುವ ಮೂಲಕ ಕಾರ್ಯಗತಗೊಳಿಸತಕ್ಕದ್ದು.

**118. ಅಪರಾಧಿಯ ತಾತ್ಕಾಲಿಕ ಅಭಿರಕ್ಷೆ.**- ಕಾರಾವಾಸದ ಶಿಕ್ಷೆಯನ್ನು ಸಿವಿಲ್ ಕಾರಾಗೃಹದಲ್ಲಿ ಅನುಭವಿಸುವಂತೆ ನಿರ್ದೇಶಿಸಿರುವಲ್ಲಿ, ಅಪರಾಧಿಯನ್ನು, ಸಿವಿಲ್ ಕಾರಾಗೃಹಕ್ಕೆ ಕಳುಹಿಸಲು

ಸಾಧ್ಯವಾಗುವಂಥ ಕಾಲದವರೆಗೆ ಭದ್ರತಾ ಪಡೆ ಅಭಿರಕ್ಷೆಯಲ್ಲಿ ಅಥವಾ ಯಾವುದೇ ಇತರೆ ಸೂಕ್ತ ಸ್ಥಳದಲ್ಲಿಡಬಹುದು.

119. **ವಿಶೇಷ ಸಂದರ್ಭಗಳಲ್ಲಿ ಕಾರಾವಾಸ ಶಿಕ್ಷೆಯನ್ನು ಕಾರ್ಯಗತಗೊಳಿಸುವುದು.–** ಯಾರ ಕಮಾಂಡಿನಲ್ಲಿ ಅಧಿವಿಚಾರಣೆ ನಡೆಯಿತೋ ಆ ಉಪಮಹಾನಿರೀಕ್ಷಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು, ಕಾರಾವಾಸದ ಯಾವುದೇ ಶಿಕ್ಷೆಯನ್ನು ಅಥವಾ ಅದರ ಭಾಗವನ್ನು ವಿಶೇಷ ಕಾರಣಗಳಿಗಾಗಿ, 117ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಭದ್ರತಾ ಪಡೆಯ ಅಭಿರಕ್ಷೆಯಲ್ಲಿ ಕಾರ್ಯಗತಗೊಳಿಸಲು ಆಗುವುದಿಲ್ಲವೆಂದು ಅಭಿಪ್ರಾಯಪಟ್ಟಾಗಲೆಲ್ಲಾ, ಅಂಥ ಅಧಿಕಾರಿಯು ಅಂಥ ಶಿಕ್ಷೆಯನ್ನು ಅಥವಾ ಶಿಕ್ಷೆಯ ಭಾಗವನ್ನು ಯಾವುದೇ ಸಿವಿಲ್ ಕಾರಾಗೃಹದಲ್ಲಿ ಅಥವಾ ಇತರೆ ಸೂಕ್ತ ಸ್ಥಳದಲ್ಲಿ ಬಂಧನದಲ್ಲಿಡುವ ಮೂಲಕ ಕಾರ್ಯಗತಗೊಳಿಸತಕ್ಕದ್ದೆಂದು ನಿರ್ದೇಶಿಸಬಹುದು.

120. **ಸ್ಥಳದಿಂದ ಸ್ಥಳಕ್ಕೆ ಕೈದಿಯನ್ನು ಸಾಗಿಸುವುದು.–** ಕಾರಾವಾಸ ಶಿಕ್ಷೆಗೆ ಗುರಿಯಾಗಿರುವ ವ್ಯಕ್ತಿಯನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವಾಗ ಅಥವಾ ಹಡಗಿನಲ್ಲಿ, ವಿಮಾನದಲ್ಲಿ ಅಥವಾ ಅನ್ಯಥಾ ಅವನನ್ನು ಸಾಗಿಸುವಾಗ ಅವನನ್ನು ಜೋಪಾನವಾಗಿ ಕರೆದೊಯ್ಯಲು ಮತ್ತು ಸ್ಥಳಾಂತರಿಸಲು ಅವಶ್ಯವಿರುವಂಥ ನಿರ್ಬಂಧಗಳಿಗೊಳಪಡಿಸಿರತಕ್ಕದ್ದು.

121. **ಕೆಲವು ಆದೇಶಗಳನ್ನು ಕಾರಾಗೃಹ ಅಧಿಕಾರಿಗಳಿಗೆ ತಿಳಿಸುವುದು.–** ಯಾವ ಶಿಕ್ಷೆಯ, ಆದೇಶದ ಅಥವಾ ವಾರೆಂಟಿನ ಮೇರೆಗೆ ಯಾರೇ ವ್ಯಕ್ತಿಯನ್ನು ಸಿವಿಲ್ ಕಾರಾಗೃಹದಲ್ಲಿ ಬಂಧಿಸಿಡಲಾಗಿದೆಯೋ ಆ ಯಾವುದೇ ಶಿಕ್ಷೆಯನ್ನು, ಆದೇಶವನ್ನು ಅಥವಾ ವಾರೆಂಟನ್ನು ರದ್ದುಪಡಿಸುವ ಅಥವಾ ವ್ಯತ್ಯಾಸಗೊಳಿಸುವ ಆದೇಶವನ್ನು ಈ ಅಧಿನಿಯಮದ ಮೇರೆಗೆ ಯಥೋಚಿತವಾಗಿ ಮಾಡಿದಾಗಲೆಲ್ಲಾ, ಅಂಥ ಆದೇಶದ ಅನುಸಾರವಾಗಿ ಹೊರಡಿಸಿದ ವಾರಂಟನ್ನು ಆ ಆದೇಶವನ್ನು ಮಾಡುವ ಅಧಿಕಾರಿಯು ಅಥವಾ ಅವನ ಸಿಬ್ಬಂದಿ ಅಧಿಕಾರಿಯು ಅಥವಾ ನಿಯಮಿಸಬಹುದಾದಂಥ ಇತರೆ ವ್ಯಕ್ತಿಯು, ಯಾವ ಕಾರಾಗೃಹದಲ್ಲಿ ಅಂಥ ವ್ಯಕ್ತಿಯನ್ನು ಬಂಧಿಸಿಡಲಾಗಿದೆಯೋ ಆ ಕಾರಾಗೃಹದ ಪ್ರಭಾರದಲ್ಲಿರುವ ಅಧಿಕಾರಿಗೆ ಕಳುಹಿಸತಕ್ಕದ್ದು.

122. **ಜುಲ್ಮಾನೆಯ ಶಿಕ್ಷೆಯನ್ನು ಕಾರ್ಯಗತಗೊಳಿಸುವುದು.–** 45ನೇ ಪ್ರಕರಣದ ಮೇರೆಗೆ ಭದ್ರತಾ ಪಡೆ ನ್ಯಾಯಾಲಯವು ಜುಲ್ಮಾನೆಯ ಶಿಕ್ಷೆಯನ್ನು ವಿಧಿಸಿದಾಗ, ಸ್ಥಿರೀಕರಿಸುವ ಅಧಿಕಾರಿಯು ಸಹಿ ಮಾಡಿದ ಮತ್ತು ಪ್ರಮಾಣೀಕರಿಸಿದ ಅಂಥ ಶಿಕ್ಷೆಯ ಆದೇಶದ ಒಂದು ಪ್ರತಿಯನ್ನು ಅಥವಾ ಸ್ಥಿರೀಕರಣದ ಅಗತ್ಯವಿಲ್ಲದಿರುವಲ್ಲಿ, ಅಧಿವಿಚಾರಣೆ ನಡೆಸುವ ಅಧಿಕಾರಿಯು ಭಾರತದಲ್ಲಿನ ಯಾರೇ ಮ್ಯಾಜಿಸ್ಟ್ರೇಟನಿಗೆ ಕಳುಹಿಸಬಹುದು ಮತ್ತು ಆ ಮ್ಯಾಜಿಸ್ಟ್ರೇಟನು, ತದನಂತರ, ಅಂಥ ಮ್ಯಾಜಿಸ್ಟ್ರೇಟನು

ವಿಧಿಸಿದ ಜುಲ್ಮಾನೆಯ ಶಿಕ್ಷೆಯಾಗಿದಿದ್ದರೆ ಹೇಗೋ ಹಾಗೆ, ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳ ಅನುಸಾರವಾಗಿ ದಂಡವನ್ನು ವಸೂಲಿ ಮಾಡಿಸತಕ್ಕದ್ದು.

**123. ಆದೇಶ ಅಥವಾ ವಾರಂಟಿನಲ್ಲಿನ ಅನೌಪಚಾರಿಕತೆ ಅಥವಾ ತಪ್ಪು.–** ಯಾರೇ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ಕಾರಾವಾಸ ಶಿಕ್ಷೆಗೆ ಗುರಿಯಾಗಿರುವಾಗ ಮತ್ತು ಈ ಅಧಿನಿಯಮದ ಅನುಸಾರವಾಗಿ ಕಾನೂನುಸಮ್ಮತ ಆದೇಶದ ಅಥವಾ ವಾರಂಟಿನ ಮೇರೆಗೆ ಯಾವ ಸ್ಥಳದಲ್ಲಿ ಅಥವಾ ರೀತಿಯಲ್ಲಿ ಅವನನ್ನು ಬಂಧಿಸಿಡಬಹುದಾಗಿದೆಯೋ ಆ ಯಾವುದೇ ಸ್ಥಳದಲ್ಲಿ ಅಥವಾ ರೀತಿಯಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವಾಗ ಅಂಥ ವ್ಯಕ್ತಿಯ ಬಂಧನವನ್ನು, ಯಾವ ಆದೇಶದ, ವಾರೆಂಟಿನ ಅಥವಾ ಇತರ ದಸ್ತಾವೇಜಿನ ಅಥವಾ ಅಧಿಕಾರದ ಅಥವಾ ಯಾವುದರ ಅನುಸಾರವಾಗಿ ಅಂಥ ವ್ಯಕ್ತಿಯನ್ನು ಅಂಥ ಯಾವುದೇ ಸ್ಥಳಕ್ಕೆ ತರಲಾಯಿತೋ ಅಥವಾ ಆ ಸ್ಥಳದಲ್ಲಿ ಬಂಧಿಸಿಡಲಾಯಿತೋ ಆ ಯಾವುದೇ ಆದೇಶದಲ್ಲಿ, ವಾರೆಂಟಿನಲ್ಲಿ ಅಥವಾ ಇತರ ದಸ್ತಾವೇಜಿನಲ್ಲಿ ಅಥವಾ ಪ್ರಾಧಿಕಾರಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಅನೌಪಚಾರಿಕತೆ ಅಥವಾ ತಪ್ಪು ಇರುವ ಕಾರಣಮಾತ್ರದಿಂದಲೇ ಕಾನೂನು ಬಾಹಿರವಾದುದೆಂದು ಭಾವಿಸತಕ್ಕದ್ದಲ್ಲ ಮತ್ತು ಯಾವುದೇ ಅಂಥ ಆದೇಶವನ್ನು, ವಾರಂಟನ್ನು ಅಥವಾ ದಸ್ತಾವೇಜನ್ನು ತದನುಸಾರವಾಗಿ ತಿದ್ದುಪಡಿ ಮಾಡಬಹುದು.

**124. ಕ್ಷಮೆ ಮತ್ತು ಮಾಫಿ.–** ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಭದ್ರತಾ ಪಡೆ ನ್ಯಾಯಾಲಯವು ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣಯಿಸಿದಾಗ, ಕೇಂದ್ರ ಸರ್ಕಾರವು ಅಥವಾ ಮಹಾನಿರ್ದೇಶಕನು ಅಥವಾ ಅವನು ಸ್ಥಿರೀಕರಿಸಬಹುದಾಗಿದ್ದಂಥ ಅಥವಾ ಸ್ಥಿರೀಕರಣದ ಅಗತ್ಯವಿಲ್ಲದಂಥ ಶಿಕ್ಷೆಯ ಸಂದರ್ಭದಲ್ಲಿ, ಯಾರ ಕಮಾಂಡಿನೊಳಗೆ ಅಂಥ ವ್ಯಕ್ತಿಯು ಅಪರಾಧಿಯೆಂದು ನಿರ್ಣೀತನಾಗಿರುವನೋ ಆ ವ್ಯಕ್ತಿಯು ಸೇವೆ ಸಲ್ಲಿಸುತ್ತಿದ್ದನೋ ಆ ಉಪ ಮಹಾನಿರೀಕ್ಷಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಯು ಅಥವಾ ನಿಯಮಿಸಿದ ಪ್ರಾಧಿಕಾರಿಯು,–

(ಎ) ಶಿಕ್ಷೆಗೊಳಗಾದ ವ್ಯಕ್ತಿಯು ಒಪ್ಪಿದರೆ ಷರತ್ತು ಸಹಿತ ಅಥವಾ ಷರತ್ತುಗಳಿಲ್ಲದೆಯೇ ಅವನನ್ನು ಕ್ಷಮಿಸಬಹುದು, ನೀಡಿದ ಇಡೀ ಶಿಕ್ಷೆಯನ್ನು ಅಥವಾ ಅದರ ಯಾವುದೇ ಭಾಗವನ್ನು ಮಾಫಿ ಮಾಡಬಹುದು; ಅಥವಾ

(ಬಿ) ನೀಡಲಾದ ದಂಡನೆಯನ್ನು ಕಡಿಮೆ ಮಾಡಬಹುದು; ಅಥವಾ

(ಸಿ) ಅಂಥ ದಂಡನೆಯನ್ನು, ಯಾವುದೇ ಕಡಿಮೆ ದಂಡನೆಗೆ ಅಥವಾ ಈ ಅಧಿನಿಯಮದಲ್ಲಿ ಹೇಳಲಾದ ದಂಡನೆಗಳಿಗೆ ತಗ್ಗಿಸಬಹುದು; ಅಥವಾ

(ಡಿ) ಶಿಕ್ಷೆಗೊಳಗಾದ ವ್ಯಕ್ತಿಯು ಷರತ್ತುಗಳ ಸಹಿತ ಅಥವಾ ಷರತ್ತುಗಳಿಲ್ಲದೆಯೇ ಒಪ್ಪಿದರೆ ಪೆರೋಲಿನ ಮೇಲೆ ಆ ವ್ಯಕ್ತಿಯನ್ನು ಬಿಡುಗಡೆ ಮಾಡಬಹುದು.

**125. ಷರತ್ತು ಪೂರ್ವಕ ಕ್ಷಮೆಯನ್ನು, ಪೆರೋಲಿನ ಮೇಲಿನ ಬಿಡುಗಡೆಯನ್ನು ಅಥವಾ ಮಾಫಿಯನ್ನು ರದ್ದುಪಡಿಸುವುದು.**– (1) ಯಾವ ಷರತ್ತಿನ ಮೇಲೆ ವ್ಯಕ್ತಿಯನ್ನು ಕ್ಷಮಿಸಲಾಗಿತ್ತೋ ಅಥವಾ ಪೆರೋಲಿನ ಮೇಲೆ ಬಿಡುಗಡೆ ಮಾಡಲಾಗಿತ್ತೋ ಅಥವಾ ಶಿಕ್ಷೆಯನ್ನು ಮಾಫಿ ಮಾಡಲಾಗಿತ್ತೋ ಆ ಷರತ್ತನ್ನು, ಆ ಕ್ಷಮೆಯನ್ನು, ಬಿಡುಗಡೆಯನ್ನು ಅಥವಾ ಮಾಫಿಯನ್ನು ಮಂಜೂರು ಮಾಡಿದ ಪ್ರಾಧಿಕಾರಿಯು ಅದನ್ನು ಈಡೇರಿಸಿಲ್ಲವೆಂದು ಅಭಿಪ್ರಾಯಪಟ್ಟರೆ, ಆ ಪ್ರಾಧಿಕಾರಿಯು ಅಂಥ ಕ್ಷಮೆಯನ್ನು, ಬಿಡುಗಡೆಯನ್ನು ಅಥವಾ ಮಾಫಿಯನ್ನು ರದ್ದುಪಡಿಸಬಹುದು ಮತ್ತು ತದನಂತರ, ಅಂಥ ಕ್ಷಮೆಯನ್ನು, ಬಿಡುಗಡೆಯನ್ನು ಅಥವಾ ಮಾಫಿಯನ್ನು ಮಂಜೂರು ಮಾಡಿದಿಲ್ಲದಿದ್ದರೆ ಹೇಗೋ ಹಾಗೆ ನ್ಯಾಯಾಲಯದ ಶಿಕ್ಷೆಯನ್ನು ಕಾರ್ಯಗತಗೊಳಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳ ಮೇರೆಗೆ ಯಾರೇ ವ್ಯಕ್ತಿಯ ಕಾರಾವಾಸದ ಶಿಕ್ಷೆಯನ್ನು ಕಾರ್ಯಗತಗೊಳಿಸಲಾಯಿತೋ ಆ ವ್ಯಕ್ತಿಯು ಅವನ ಶಿಕ್ಷೆಯ ಪೂರ್ಣವಾಗದೆ ಉಳಿದ ಭಾಗವನ್ನು ಮಾತ್ರ ಅನುಭವಿಸತಕ್ಕದ್ದು.

**126. ಕಾರಾವಾಸ ಶಿಕ್ಷೆಯ ಅಮಾನತ್ತು.**– (1) ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯು ಭದ್ರತಾ ಪಡೆ ನ್ಯಾಯಾಲಯದಿಂದ ಕಾರಾವಾಸ ಶಿಕ್ಷೆಗೆ ಗುರಿಯಾಗಿರುವಲ್ಲಿ, ಕೇಂದ್ರ ಸರ್ಕಾರವು, ಮಹಾ ನಿರ್ದೇಶಕನು ಅಥವಾ ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯವನ್ನು ಸಮಾವೇಶಗೊಳಿಸುವ ಅಧಿಕಾರ ಪಡೆದ ಯಾರೇ ಅಧಿಕಾರಿಯು, ಅಪರಾಧಿಯನ್ನು ಕಾರಾಗೃಹಕ್ಕೆ ಅಥವಾ ಭದ್ರತಾ ಪಡೆಯ ಅಭಿರಕ್ಷೆಗೆ ಈಗಾಗಲೇ ಒಪ್ಪಿಸಿರಲಿ ಅಥವಾ ಒಪ್ಪಿಸಿಲ್ಲದಿರಲಿ ಶಿಕ್ಷೆಯನ್ನು ಅಮಾನತ್ತುಗೊಳಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ಅಥವಾ ಅಧಿಕಾರಿಯು ಹಾಗೆ ಶಿಕ್ಷೆಗೆ ಗುರಿಪಡಿಸಲಾದ ಅಪರಾಧಿಯ ಸಂದರ್ಭದಲ್ಲಿ, ಅಂಥ ಪ್ರಾಧಿಕಾರವು ಅಥವಾ ಅಧಿಕಾರಿಯು ಮಾಡಿದ ಆದೇಶಗಳನ್ನು ಪಡೆಯುವವರೆಗೆ ಅಪರಾಧಿಯನ್ನು ಕಾರಾಗೃಹಕ್ಕೆ ಅಥವಾ ಭದ್ರತಾ ಪಡೆಯ ಅಭಿರಕ್ಷೆಗೆ ಒಪ್ಪಿಸತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

(3) ಸ್ಥಿರೀಕರಿಸಿದ, ಕಡಿಮೆ ಮಾಡಿದ ಅಥವಾ ತಗ್ಗಿಸಿದ ಯಾವುದೇ ಅಂಥ ಶಿಕ್ಷೆಯ ಸಂದರ್ಭದಲ್ಲಿ (1)ನೇ ಮತ್ತು (2)ನೇ ಉಪಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಬಹುದು.

**127. ಅಮಾನತ್ತು ಇತ್ಯರ್ಥದಲ್ಲಿರುವಾಗ ಆದೇಶಗಳು.–** (1) 126ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಶಿಕ್ಷೆಯನ್ನು, ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವನ್ನು ಹೊರತುಪಡಿಸಿ, ಭದ್ರತಾ ಪಡೆ ನ್ಯಾಯಾಲಯವು ವಿಧಿಸಿರುವಲ್ಲಿ ಸ್ಥಿರೀಕರಿಸುವ ಅಧಿಕಾರಿಯು, ಶಿಕ್ಷೆಯನ್ನು ಸ್ಥಿರೀಕರಿಸುವಾಗ, 126ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರದ ಅಥವಾ ಅಧಿಕಾರಿಯ ಆದೇಶಗಳನ್ನು ಪಡೆಯುವವರೆಗೆ ಕಾರಾವಾಸಕ್ಕೆ ಅಥವಾ ಭದ್ರತಾ ಪಡೆ ಅಭಿರಕ್ಷೆಗೆ ಅಪರಾಧಿಯನ್ನು ಒಪ್ಪಿಸಬಾರದೆಂದು ನಿರ್ದೇಶಿಸಬಹುದು.

(2) ಭದ್ರತಾ ಪಡೆ ಕ್ಷಿಪ್ರ ನ್ಯಾಯಾಲಯವು ಕಾರಾವಾಸದ ಶಿಕ್ಷೆಯನ್ನು ವಿಧಿಸಿರುವಲ್ಲಿ, ಅಧಿವಿಚಾರಣೆ ನಡೆಸುತ್ತಿರುವ ಅಧಿಕಾರಿಯು (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನಿರ್ದೇಶನವನ್ನು ನೀಡಬಹುದು.

**128. ಅಮಾನತ್ತಿನ ಮೇಲಿರುವಾಗ ಬಿಡುಗಡೆ.–** 126ನೇ ಪ್ರಕರಣದ ಮೇರೆಗೆ ಶಿಕ್ಷೆಯನ್ನು ಅಮಾನತ್ತುಗೊಳಿಸಿರುವಲ್ಲಿ ಅಪರಾಧಿಯನ್ನು ತತ್‌ಕ್ಷಣವೇ ಅಭಿರಕ್ಷೆಯಿಂದ ಬಿಡುಗಡೆ ಮಾಡತಕ್ಕದ್ದು.

**129. ಅಮಾನತ್ತಿನ ಅವಧಿಯನ್ನು ಲೆಕ್ಕಹಾಕುವುದು.–** ಯಾವ ಅವಧಿಯಲ್ಲಿ ಶಿಕ್ಷೆಯನ್ನು ಅಮಾನತ್ತಿನಲ್ಲಿಡಲಾಯಿತೋ ಆ ಯಾವುದೇ ಅವಧಿಯನ್ನು ಅಂಥ ಶಿಕ್ಷೆಯ ಅವಧಿಯ ಭಾಗವೆಂಬುದಾಗಿ ಲೆಕ್ಕ ಹಾಕತಕ್ಕದ್ದು.

**130. ಅಮಾನತ್ತಿನ ನಂತರದ ಆದೇಶ.–** 126ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಪ್ರಾಧಿಕಾರವು ಅಥವಾ ಅಧಿಕಾರಿಯು, ಶಿಕ್ಷೆಯನ್ನು ಅಮಾನತ್ತುಗೊಳಿಸಿರುವಾಗ ಯಾವುದೇ ಕಾಲದಲ್ಲಿ,–

(ಎ) ಆ ಅಪರಾಧಿಯು ಶಿಕ್ಷೆಯು ಪೂರ್ಣವಾಗದೆ ಉಳಿದ ಅವಧಿಯನ್ನು ಅನುಭವಿಸಲು ಅವನನ್ನು ಒಪ್ಪಿಸುವಂತೆ; ಅಥವಾ

(ಬಿ) ಶಿಕ್ಷೆಯನ್ನು ಮಾಫಿ ಮಾಡುವಂತೆ

– ಆದೇಶಿಸಬಹುದು.

**131. ಅಮಾನತ್ತಿನ ನಂತರ ಪ್ರಕರಣದ ಪುನರ್ ಪರಿಶೀಲನೆ.–** (1) ಶಿಕ್ಷೆಯನ್ನು ಅಮಾನತ್ತುಗೊಳಿಸಿರುವಲ್ಲಿ, ಪ್ರಕರಣವನ್ನು ಯಾವುದೇ ಕಾಲದಲ್ಲಿ ಮತ್ತು ನಾಲ್ಕು ತಿಂಗಳಿಗಿಂತ ಹೆಚ್ಚಿಲ್ಲದ ಅಂತರಗಳಲ್ಲಿ, 126ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ಅಥವಾ ಅಧಿಕಾರಿಯು ಅಥವಾ 126ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರವು ಅಥವಾ ಅಧಿಕಾರಿಯು ಯಥೋಚಿತವಾಗಿ ಅಧಿಕೃತಗೊಳಿಸಿದ ಉಪ ಮಹಾನಿರೀಕ್ಷಕನ ದರ್ಜೆಗಿಂತ ಕಡಿಮೆಯದಲ್ಲದ ದರ್ಜೆಯ ಯಾರೇ ಅಧಿಕಾರಿಯು ಪುನರ್ ಪರಿಶೀಲಿಸಬಹುದು.

(2) ಹಾಗೆ ಅಧಿಕೃತಗೊಂಡ ಅಧಿಕಾರಿಯು ಅಂಥ ಪುನರ್ ಪರಿಶೀಲನೆ ಮಾಡಿದ ಮೇಲೆ ಅವನಿಗೆ ಅಪರಾಧಿಯ ನಡತೆಯು ಅವನ ಅಪರಾಧ ನಿರ್ಣಯವಾದಂದಿನಿಂದ ಶಿಕ್ಷೆಯನ್ನು ಮಾಫಿ ಮಾಡುವುದನ್ನು ಸಮರ್ಥಿಸುತ್ತದೆಂದು ಕಂಡುಬಂದಲ್ಲಿ, ಅವನು ವಿಷಯವನ್ನು 126ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರಾಧಿಕಾರಕ್ಕೆ ಅಥವಾ ಅಧಿಕಾರಿಗೆ ಉಲ್ಲೇಖಿಸತಕ್ಕದ್ದು.

132. **ಅಮಾನತ್ತಿನ ನಂತರ ಹೊಸ ಶಿಕ್ಷೆ.**- ಈ ಅಧಿನಿಯಮದ ಮೇರೆಗೆ ಅಪರಾಧಿಗೆ ವಿಧಿಸಿದ ಶಿಕ್ಷೆಯು ಅಮಾನತ್ತಿನಲ್ಲಿರುವಾಗ ಇತರ ಯಾವುದೇ ಅಪರಾಧಕ್ಕಾಗಿ ಅಪರಾಧಿಯನ್ನು ಶಿಕ್ಷೆಗೆ ಗುರಿಪಡಿಸಿರುವಲ್ಲಿ, ಆಗ,-

(ಎ) ಈ ಅಧಿನಿಯಮದ ಮೇರೆಗೆ ಆ ಹೆಚ್ಚಿನ ಶಿಕ್ಷೆಯನ್ನೂ ಸಹ ಅಮಾನತ್ತಿನಲ್ಲಿಟ್ಟಿದ್ದರೆ ಎರಡೂ ಶಿಕ್ಷೆಗಳನ್ನು ಏಕಕಾಲದಲ್ಲಿ ಅನುಭವಿಸತಕ್ಕದ್ದು;

(ಬಿ) ಹೆಚ್ಚಿನ ಶಿಕ್ಷೆಯು ಮೂರು ತಿಂಗಳು ಅಥವಾ ಅದಕ್ಕೂ ಹೆಚ್ಚಿನ ಅವಧಿಯದಾಗಿದ್ದು, ಈ ಅಧಿನಿಯಮದ ಮೇರೆಗೆ ಅಮಾನತ್ತುಗೊಳ್ಳದಿರುವಾಗ, ಹಿಂದಿನ ಶಿಕ್ಷೆಯ ಪೂರ್ಣವಾಗದೆ ಉಳಿದ ಅವಧಿಗಾಗಿ ಕಾರಾಗೃಹಕ್ಕೆ ಅಥವಾ ಭದ್ರತಾ ಪಡೆಯ ಅಭಿರಕ್ಷೆಗೆ ಅಪರಾಧಿಯನ್ನು ಒಪ್ಪಿಸತಕ್ಕದ್ದು, ಆದರೆ ಎರಡೂ ಶಿಕ್ಷೆಗಳನ್ನು ಏಕಕಾಲದಲ್ಲಿ ಅನುಭವಿಸತಕ್ಕದ್ದು; ಮತ್ತು

(ಸಿ) ಹೆಚ್ಚಿನ ಶಿಕ್ಷೆಯು ಮೂರು ತಿಂಗಳಿಗಿಂತ ಕಡಿಮೆ ಅವಧಿಯದಾಗಿದ್ದರೆ ಮತ್ತು ಈ ಅಧಿನಿಯಮದ ಮೇರೆಗೆ ಅಮಾನತ್ತುಗೊಳ್ಳದಿರುವಾಗ, ಅಪರಾಧಿಯನ್ನು ಆ ಶಿಕ್ಷೆಗಾಗಿ ಮಾತ್ರವೇ ಒಪ್ಪಿಸತಕ್ಕದ್ದು ಮತ್ತು ಹಿಂದಿನ ಶಿಕ್ಷೆಯು 130ನೇ ಪ್ರಕರಣದ ಅಥವಾ 131ನೇ ಪ್ರಕರಣದ ಮೇರೆಗೆ ಹೊರಡಿಸಬಹುದಾದ ಯಾವುದೇ ಆದೇಶಕ್ಕೊಳಪಟ್ಟು ಅಮಾನತ್ತಿನಲ್ಲಿರುವುದು ಮುಂದುವರೆಯತಕ್ಕದ್ದು.

133. **ಅಮಾನತ್ತಿನಲ್ಲಿಡುವ ಅಧಿಕಾರದ ವ್ಯಾಪ್ತಿ.**- 126ನೇ ಮತ್ತು 130ನೇ ಪ್ರಕರಣಗಳಿಂದ ಪ್ರದತ್ತವಾದ ಅಧಿಕಾರಗಳು ಕಡಿಮೆ ಮಾಡುವ, ಮಾಫಿ ಮಾಡುವ ಮತ್ತು ತಗ್ಗಿಸುವ ಅಧಿಕಾರಗಳಿಗೆ ಪೂರಕವಾಗಿರತಕ್ಕದ್ದೇ ಹೊರತು ಅವುಗಳನ್ನು ಕುಂಠಿತಗೊಳಿಸುವಂತೆ ಅಲ್ಲ.

134. **ವಜಾ ಮಾಡಿದ ಮೇಲೆ ಅಮಾನತ್ತಿನ ಮತ್ತು ಮಾಫಿಯ ಪರಿಣಾಮ.**- (1) ಯಾವುದೇ ಇತರ ಶಿಕ್ಷೆಯ ಜೊತೆಗೆ ವಜಾಮಾಡುವ ದಂಡನೆಯನ್ನು ಭದ್ರತಾ ಪಡೆ ನ್ಯಾಯಾಲಯವು ನೀಡಿರುವಲ್ಲಿ, ಮತ್ತು ಅಂಥ ಇತರೆ ಶಿಕ್ಷೆಯನ್ನು 126ನೇ ಪ್ರಕರಣದ ಮೇರೆಗೆ ಅಮಾನತ್ತುಗೊಳಿಸಿರುವಲ್ಲಿ, ಆಗ, 126ನೇ

ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಪ್ರಾಧಿಕಾರವು ಅಥವಾ ಇತರೆ ಅಧಿಕಾರಿಯು ಅಂಥ ವಜಾ ಆದೇಶ ಮಾಡುವವರೆಗೆ ಅದು ಪರಿಣಾಮಕ್ಕೆ ಬರತಕ್ಕದ್ದಲ್ಲ.

(2) 130ನೇ ಪ್ರಕರಣದ ಮೇರೆಗೆ ಅಂಥ ಇತರೆ ಶಿಕ್ಷೆಯನ್ನು ಮಾಫಿ ಮಾಡಿರುವಲ್ಲಿ, ವಜಾ ದಂಡನೆಯನ್ನು ಸಹ ಮಾಫಿ ಮಾಡತಕ್ಕದ್ದು.

## ಅಧ್ಯಾಯ X

### ಸಂಕೀರ್ಣ

**135. ದರ್ಜೆಯ ರಚನೆ.–** (1) ಭದ್ರತಾ ಪಡೆಯ ಅಧಿಕಾರಿಗಳನ್ನು ಮತ್ತು ಇತರೆ ಸದಸ್ಯರನ್ನು ಈ ಮುಂದಿನ ಪ್ರವರ್ಗಗಳಲ್ಲಿ ಅವರವರ ದರ್ಜೆಗಳಿಗನುಸಾರವಾಗಿ ವರ್ಗೀಕರಿಸತಕ್ಕದ್ದು, ಎಂದರೆ:–

(ಎ) ಅಧಿಕಾರಿಗಳು,–

(i) ಮಹಾ ನಿರ್ದೇಶಕರು

(ii) ಹೆಚ್ಚುವರಿ ಮಹಾ ನಿರ್ದೇಶಕರು

(iii) ಮಹಾನಿರೀಕ್ಷಕರು

(iv) ಉಪಮಹಾನಿರೀಕ್ಷಕರು

(v) ಗ್ರೂಪ್ ಕಮಾಂಡರ್

(vi) ಸ್ಕ್ವಾಡ್ರನ್ ಕಮಾಂಡರ್

(vii) ಟೀಮ್ ಕಮಾಂಡರ್

(ಬಿ) ಸಹಾಯಕ ಕಮಾಂಡರುಗಳು,–

(viii) ಸಹಾಯಕ ಕಮಾಂಡರ್ ದರ್ಜೆ I

(ix) ಸಹಾಯಕ ಕಮಾಂಡರ್ ದರ್ಜೆ II

(x) ಸಹಾಯಕ ಕಮಾಂಡರ್ ದರ್ಜೆ III

(ಸಿ) ಅಧಿಕಾರಿಗಳು ಮತ್ತು ಸಹಾಯಕ ಕಮಾಂಡರುಗಳನ್ನು ಹೊರತುಪಡಿಸಿ ವ್ಯಕ್ತಿಗಳು,-

(xi) ರೇಂಜರ್ ದರ್ಜೆ I

(xii) ರೇಂಜರ್ ದರ್ಜೆ II

(xiii) ಹೋರಾಟದ ವೃತ್ತಿಗ.

(2) ಒಂದೇ ದರ್ಜೆಗೆ ಸೇರಿದ ವ್ಯಕ್ತಿಗಳ ಅವರವರೊಳಗಿನ ಜ್ಯೇಷ್ಠತೆಗೆ ಸಂಬಂಧಿಸಿದ ವಿಷಯಗಳನ್ನು ನಿಯಮಿಸಬಹುದಾದಂಥ ನಿಯಮಗಳ ಅನುಸಾರವಾಗಿ ತೀರ್ಮಾನಿಸತಕ್ಕದ್ದು.

(3) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಮಹಾನಿರ್ದೇಶಕನು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದಂತೆ ಕೇಂದ್ರ ಸರ್ಕಾರದ ಸ್ಥಿರೀಕರಣಕ್ಕೊಳಪಟ್ಟು ಅಧಿಕಾರಿಗೆ ಅಥವಾ ಸಹಾಯಕ ಕಮಾಂಡರ್ ದರ್ಜೆ I ಇವರಿಗೆ ಭದ್ರತಾ ಪಡೆಯ ಉತ್ತಮ ಕಾರ್ಯನಿರ್ವಹಣೆಯ ಹಿತದೃಷ್ಟಿಯಿಂದ ಅವನು ಅವಶ್ಯವೆಂದು ಭಾವಿಸಿದಾಗಲೆಲ್ಲಾ ಸ್ಥಳೀಯ ದರ್ಜೆ ಎಂಬುದಾಗಿ (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಹೇಳಲಾದ ದರ್ಜೆಯನ್ನು ನೀಡಬಹುದು.

(4) ಸ್ಥಳೀಯ ದರ್ಜೆಯನ್ನು ಹೊಂದಿರುವ ಅಧಿಕಾರಿ ಅಥವಾ ಸಹಾಯಕ ಕಮಾಂಡರನು,-

(ಎ) ಆ ದರ್ಜೆಯನ್ನು ಹೊಂದಿರುವ ಒಬ್ಬ ಅಧಿಕಾರಿಯ ಕಮಾಂಡನ್ನು ಚಲಾಯಿಸತಕ್ಕದ್ದು ಮತ್ತು ಆ ಅಧಿಕಾರಗಳು ಅವನಲ್ಲಿ ನಿಹಿತವಾಗಿರತಕ್ಕದ್ದು;

(ಬಿ) ಹಾಗೆ ದರ್ಜೆ ನೀಡಿರುವುದನ್ನು ಕೇಂದ್ರ ಸರ್ಕಾರವು ಒಂದು ತಿಂಗಳೊಳಗಾಗಿ ಸ್ಥಿರೀಕರಿಸದಿದ್ದರೆ ಅಥವಾ ಮಹಾನಿರ್ದೇಶಕನು ಹಾಗೆ ಆದೇಶಿಸಿದಾಗ ಅಥವಾ ಯಾವ ನೇಮಕಕ್ಕೆ ಆ ದರ್ಜೆಯನ್ನು ನೀಡಲಾಗಿತ್ತೋ ಆ ನೇಮಕ ಹೊಂದಿರುವುದು ನಿಂತು ಹೋದಾಗ ಆ ದರ್ಜೆ ಹೊಂದಿರುವುದು ನಿಂತುಹೋಗತಕ್ಕದ್ದು;

(ಸಿ) ಅಂಥ ಸ್ಥಳೀಯ ದರ್ಜೆಯನ್ನು ಹೊಂದಿದ್ದ ಕಾರಣಮಾತ್ರದಿಂದಲೇ ಆತನು ಇತರೆ ಅಧಿಕಾರಿಗಳ ಮೇಲೆ ಯಾವುದೇ ಜ್ಯೇಷ್ಠತೆಯನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ; ಮತ್ತು

(ಡಿ) ಅಂಥ ದರ್ಜೆ ಹೊಂದಿರುವುದಕ್ಕಾಗಿ ಯಾವುದೇ ಹೆಚ್ಚಿನ ವೇತನ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**136. ವೇತನ ಮತ್ತು ಭತ್ಯೆಗಳಿಂದ ಕಡಿತ.–** (1) (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಅಧಿಕಾರಿಯ ವೇತನ ಮತ್ತು ಭತ್ಯೆಗಳಿಂದ ಈ ಮುಂದಿನ ಕಡಿತಗಳನ್ನು ಮಾಡಬಹುದು, ಎಂದರೆ,–

(ಎ) ಅನುಮತಿ ಇಲ್ಲದೆ ಗೈರುಹಾಜರಾದ ಪ್ರತಿಯೊಂದು ದಿನಕ್ಕೆ ಅವನು ತೃಪ್ತಿಕರವಾದ ವಿವರಣೆ ನೀಡಿದ ಹೊರತು ಮತ್ತು ಅವನು ತತ್ಕಾಲದಲ್ಲಿ ಯಾರ ಅಧೀನದಲ್ಲಿ ಸೇವೆ ಸಲ್ಲಿಸುತ್ತಿದ್ದಾನೋ ಆ ಮಹಾನಿರೀಕ್ಷಕನು ಅದನ್ನು ಒಪ್ಪಿಕೊಂಡಿದ್ದ ಹೊರತು ಮತ್ತು ಕ್ರಿಮಿನಲ್ ನ್ಯಾಯಾಲಯವು ಅಥವಾ ಭದ್ರತಾ ಪಡೆ ನ್ಯಾಯಾಲಯವು ವಿಧಿಸಿದ ಕಾರಾವಾಸದ ಪ್ರತಿಯೊಂದು ದಿನಕ್ಕೆ ಅಧಿಕಾರಿಗೆ ಬರಬೇಕಾದ ಎಲ್ಲಾ ವೇತನ ಮತ್ತು ಭತ್ಯೆಗಳು;

(ಬಿ) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವೇತನವನ್ನು ಅಧಿಕಾರಿಯು ಕಾನೂನುಬಾಹಿರವಾಗಿ ಇಟ್ಟುಕೊಂಡಿದ್ದಾಗ ಅಥವಾ ಕಾನೂನುಬಾಹಿರವಾಗಿ, ಸಂದಾಯ ಮಾಡಲು ನಿರಾಕರಿಸಿದಾಗ ಆ ವೇತನವನ್ನು ತುಂಬಿಕೊಡಬೇಕಾದ ಯಾವುದೇ ಮೊತ್ತ;

(ಸಿ) ಕ್ರಿಮಿನಲ್ ನ್ಯಾಯಾಲಯವು ವಿಧಿಸಿದ ಜುಲ್ಮಾನೆಯನ್ನು ಸಂದಾಯ ಮಾಡಲು ಅಗತ್ಯಪಡಿಸಿದ ಯಾವುದೇ ಮೊತ್ತ;

(ಡಿ) ಅಧಿಕಾರಿಯು ಯಾವ ಮಹಾನಿರೀಕ್ಷಕನ ಅಧೀನದಲ್ಲಿ ತತ್ಕಾಲದಲ್ಲಿ ಸೇವೆ ಸಲ್ಲಿಸುತ್ತಿರುವನೋ ಆ ಅಧಿಕಾರಿಯ ಅಕ್ರಮ ಕೃತ್ಯದಿಂದ ಅಥವಾ ನಿರ್ಲಕ್ಷ್ಯದಿಂದ ಸಾರ್ವಜನಿಕ ಸ್ವತ್ತಿಗೆ ಅಥವಾ ಭದ್ರತಾ ಪಡೆಗೆ ಸೇರಿದ ಸ್ವತ್ತಿಗೆ ಯಾವುದೇ ನಷ್ಟ, ಹಾನಿ ಅಥವಾ ನಾಶ ಆಗಿದೆಯೆಂದು ಯುಕ್ತ ತನಿಖೆಯ ನಂತರ ಆ ಮಹಾನಿರೀಕ್ಷಕನಿಗೆ ಕಂಡುಬಂದರೆ ಆ ಯಾವುದೇ ನಷ್ಟವನ್ನು, ಹಾನಿಯನ್ನು ಅಥವಾ ನಾಶವನ್ನು ಸರಿದೂಗಿಸಲು ಅಗತ್ಯಪಡಿಸಿದ ಯಾವುದೇ ಮೊತ್ತ;

(ಇ) ಅವನ ಪತ್ನಿ ಅಥವಾ ಅವನ ಔರಸ ಅಥವಾ ಔರಸನಲ್ಲದ ಮಗು ಅಥವಾ ಮಲ ಮಗುವಿನ ಜೀವನಾಂಶಕ್ಕಾಗಿ ಅಥವಾ ಸದರಿ ಪತ್ನಿ ಅಥವಾ ಮಗುವಿಗೆ ಕೇಂದ್ರ ಸರ್ಕಾರವು ನೀಡುವ ಯಾವುದೇ ಪರಿಹಾರ ವೆಚ್ಚದ ಸಂಬಂಧದಲ್ಲಿ ಸಂದಾಯ ಮಾಡಲು ಕೇಂದ್ರ ಸರ್ಕಾರದ ಆದೇಶದ ಮೂಲಕ ಅಗತ್ಯಪಡಿಸಿದ ಯಾವುದೇ ಮೊತ್ತ.

(2) (4)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಅಧಿಕಾರಿಯನ್ನು ಹೊರತುಪಡಿಸಿ ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯ ವೇತನ ಮತ್ತು ಭತ್ಯೆಗಳಿಂದ ಈ ಮುಂದಿನ ಕಡಿತಗಳನ್ನು ಮಾಡಬಹುದು, ಎಂದರೆ,-

(ಎ) ತ್ಯಜಿಸಿಹೋಗಿದ್ದಕ್ಕೆ ಅಥವಾ ರಜೆ ಪಡೆಯದೆ ಹೋಗಿದ್ದಕ್ಕೆ ಗೈರುಹಾಜರಾದ ಪ್ರತಿಯೊಂದು ದಿನಕ್ಕೆ ಅವನು ತೃಪ್ತಿಕರವಾದ ವಿವರಣೆಯನ್ನು ನೀಡಿದ ಹೊರತು ಮತ್ತು ಅದನ್ನು ಕಮಾಂಡರ್‌ನು ಒಪ್ಪಿದ ಹೊರತು ಮತ್ತು ಕ್ರಿಮಿನಲ್ ನ್ಯಾಯಾಲಯವು, ಭದ್ರತಾ ಪಡೆ ನ್ಯಾಯಾಲಯವು ಅಥವಾ 51ನೇ ಪ್ರಕರಣದ ಮೇರೆಗೆ ಅಧಿಕಾರ ಚಲಾಯಿಸುವ ಅಧಿಕಾರಿಯು ವಿಧಿಸಿದ ಕಾರಾವಾಸದ ಪ್ರತಿಯೊಂದು ದಿನಕ್ಕೆ ಅವನಿಗೆ ಬರಬೇಕಾದ ಎಲ್ಲಾ ವೇತನ ಮತ್ತು ಭತ್ಯೆಗಳು;

(ಬಿ) ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯ ವೇತನವನ್ನು ಕಾನೂನುಬಾಹಿರವಾಗಿ ಉಳಿಸಿಕೊಂಡರೆ ಅಥವಾ ಕಾನೂನುಬಾಹಿರವಾಗಿ ಸಂದಾಯ ಮಾಡಲು ನಿರಾಕರಿಸಿದರೆ ಅದನ್ನು ತುಂಬಿಕೊಡಲು ಅಗತ್ಯಪಡಿಸಿದ ಯಾವುದೇ ಮೊತ್ತ;

(ಸಿ) ಅವನು ಕೇಂದ್ರ ಸರ್ಕಾರಕ್ಕೆ ಅಥವಾ ಭದ್ರತಾ ಪಡೆಯ ಯಾವುದೇ ಕಟ್ಟಡಕ್ಕೆ ಅಥವಾ ಸ್ವತ್ತಿಗೆ ಅಥವಾ ಯಾವುದೇ ಖಾಸಗಿ ನಿಧಿಗೆ ಉಂಟುಮಾಡಿದ ಯಾವುದೇ ವೆಚ್ಚಗಳಿಗಾಗಿ, ನಷ್ಟಕ್ಕಾಗಿ, ಹಾನಿಗಾಗಿ ಅಥವಾ ನಾಶಕ್ಕಾಗಿ ಅವನ ಕಮಾಂಡರನು ವಿಧಿಸಬಹುದಾದಂಥ ನಷ್ಟಪರಿಹಾರವನ್ನು ತುಂಬಿಕೊಡಲು ಅಗತ್ಯಪಡಿಸಿದ ಯಾವುದೇ ಮೊತ್ತ;

(ಡಿ) ಕ್ರಿಮಿನಲ್ ನ್ಯಾಯಾಲಯವು ವಿಧಿಸಿದ ಜುಲ್ಮಾನೆಯನ್ನು ಸಂದಾಯ ಮಾಡಲು ಅಗತ್ಯಪಡಿಸಿದ ಯಾವುದೇ ಮೊತ್ತ;

(ಇ) ಅವನ ಪತ್ನಿ ಅಥವಾ ಅವನ ಔರಸ ಅಥವಾ ಔರಸನಲ್ಲದ ಮಗು ಅಥವಾ ಮಲ ಮಗುವಿನ ಜೀವನಾಂಶಕ್ಕಾಗಿ ಅಥವಾ ಸದರಿ ಪತ್ನಿ ಅಥವಾ ಮಗುವಿಗೆ ಸದರಿ ಸರ್ಕಾರವು ನೀಡುವ ಯಾವುದೇ ಪರಿಹಾರ ವೆಚ್ಚದ ಸಂಬಂಧದಲ್ಲಿ ಸಂದಾಯ ಮಾಡಲು ಕೇಂದ್ರ ಸರ್ಕಾರದ ಆದೇಶದ ಮೂಲಕ ಅಗತ್ಯಪಡಿಸಿದ ಯಾವುದೇ ಮೊತ್ತ.

(3) (i) ಯಾರೇ ವ್ಯಕ್ತಿಯು ಇಡೀ ಒಂದು ದಿನದಲ್ಲಿ ಅಥವಾ ಭಾಗಶಃ ಒಂದು ದಿನದಲ್ಲಿ ಮತ್ತು ಭಾಗಶಃ ಮತ್ತೊಂದು ದಿನದಲ್ಲಿ ಸತತ ಆರು ಗಂಟೆಗಳು ಅಥವಾ ಮೇಲ್ಪಟ್ಟು ಗೈರುಹಾಜರಿ ಕಳೆದಿದ್ದ

ಹೊರತು ಒಂದು ದಿವಸ ಗೈರುಹಾಜರಾಗಿರುವುದಾಗಿ ಅಥವಾ ಕಾರಾವಾಸದಲ್ಲಿರುವುದಾಗಿ ಪರಿಗಣಿಸತಕ್ಕದ್ದಲ್ಲ.

(ii) ಒಂದು ದಿನಕ್ಕಿಂತ ಕಡಿಮೆಯ ಯಾವುದೇ ಗೈರುಹಾಜರಿಯನ್ನು ಅಥವಾ ಕಾರಾವಾಸವನ್ನು ಅಂಥ ಗೈರುಹಾಜರಿಯಿಂದಾಗಿ ಅಥವಾ ಕಾರಾವಾಸದಿಂದಾಗಿ ಯಾವ ಕರ್ತವ್ಯವನ್ನು ಬೇರೊಬ್ಬ ಸದಸ್ಯನಿಗೆ ವಹಿಸಿಕೊಟ್ಟಿರುವುದರಿಂದ ಭದ್ರತಾ ಪಡೆ ಸದಸ್ಯನಾಗಿ ಆ ಯಾವುದೇ ಕರ್ತವ್ಯವನ್ನು ನಿರ್ವಹಿಸದಂತೆ ಅದು ಗೈರುಹಾಜರಾದವನಿಗೆ ತಡೆಯುಂಟು ಮಾಡಿದ್ದರೆ ಅದನ್ನು ಒಂದು ದಿನದ ಗೈರುಹಾಜರಿಯೆಂದು ಅಥವಾ ಕಾರಾವಾಸವೆಂದು ಲೆಕ್ಕ ಹಾಕತಕ್ಕದ್ದು.

(4) (1)ನೇ ಉಪಪ್ರಕರಣದ (ಬಿ) ಯಿಂದ (ಇ) ವರೆಗಿನ ಖಂಡಗಳ ಅಥವಾ (2)ನೇ ಉಪಪ್ರಕರಣದ (ಬಿ) ಯಿಂದ (ಇ) ವರೆಗಿನ ಖಂಡಗಳ ಮೇರೆಗೆ ವ್ಯಕ್ತಿಯ ವೇತನ ಮತ್ತು ಭತ್ಯೆಗಳಿಂದ ಮಾಡಿದ ಒಟ್ಟು ಕಡಿತಗಳು ಅವನು ವಜಾ ಶಿಕ್ಷೆಗೆ ಗುರಿಯಾಗಿದ್ದ ಹೊರತು, ಯಾವುದೇ ಒಂದು ತಿಂಗಳಲ್ಲಿ ಆ ತಿಂಗಳ ಅವನ ವೇತನದ ಮತ್ತು ಭತ್ಯೆಗಳ ಅರ್ಧದಷ್ಟನ್ನು ಮೀರತಕ್ಕದ್ದಲ್ಲ.

(5) ಯಾರೇ ವ್ಯಕ್ತಿಯ ವೇತನ ಮತ್ತು ಭತ್ಯೆಗಳಿಂದ ಕಡಿತಗೊಳಿಸಬೇಕೆಂದು ಈ ಅಧಿನಿಯಮದ ಮೂಲಕ ಅಧಿಕೃತಗೊಳಿಸಿದ ಯಾವುದೇ ಮೊತ್ತವನ್ನು, ಅದನ್ನು ವಸೂಲು ಮಾಡುವ ಇತರೆ ಯಾವುದೇ ವಿಧಾನಕ್ಕೆ ಬಾಧಕವಾಗದಂತೆ ವಿಶ್ರಾಂತಿ ವೇತನವನ್ನು ಹೊರತುಪಡಿಸಿ ಅವನಿಗೆ ಬರಬೇಕಾದ ಯಾವುದೇ ಸರ್ಕಾರಿ ಹಣದಿಂದ ಕಡಿತಗೊಳಿಸಬಹುದು.

(6) ಈ ಅಧಿನಿಯಮದ ಮೇರೆಗೆ ವೇತನ ಮತ್ತು ಭತ್ಯೆಗಳಿಂದ ಕಡಿತಗೊಳಿಸಲು ಆದೇಶಿಸುವುದಕ್ಕೆ ಈ ಮುಂದಿನ ಪ್ರಾಧಿಕಾರಿಗಳು ಸಕ್ಷಮರಾಗಿರತಕ್ಕದ್ದು, ಎಂದರೆ,-

(ಎ) ಅಧಿಕಾರಿಗಳನ್ನು ಹೊರತುಪಡಿಸಿ, ಇತರೆ ವ್ಯಕ್ತಿಗಳ ಸಂದರ್ಭದಲ್ಲಿ ಗ್ರೂಪ್ ಕಮಾಂಡರುಗಳ ದರ್ಜೆಗಿಂತ ಕಡಿಮೆ ಇಲ್ಲದ ದರ್ಜೆಯ ಕಮಾಂಡರುಗಳು;

(ಬಿ) ಅಧಿಕಾರಿಗಳ ಸಂದರ್ಭದಲ್ಲಿ ಮಹಾನಿರೀಕ್ಷಕನು.

7. ಈ ಅಧಿನಿಯಮದ ಮೇರೆಗೆ ಯಾವುದೇ ಕಡಿತವನ್ನು ಮಾಡಲು ಆದೇಶಿಸುವ ಪ್ರಾಧಿಕಾರಿಗಿಂತ ಮೇಲಿನ ಯಾವುದೇ ಪ್ರಾಧಿಕಾರವು ಸದರಿ ಕಡಿತಗಳನ್ನು ಪೂರ್ಣವಾಗಿ ಅಥವಾ ಭಾಗಶಃ ಮಾಫಿ ಮಾಡಲು ಸಕ್ಷಮವಾಗಿರತಕ್ಕದ್ದು.

(8) ಅಧಿಕಾರಿಗೆ ಈ ಪ್ರಕರಣದ ಉಪಬಂಧಗಳ ಮೂಲಕ ಪ್ರದತ್ತವಾದ ಯಾವುದೇ ಅಧಿಕಾರವನ್ನು ಮೊದಲು ಸೂಚಿಸಿದ ಅಧಿಕಾರಿಗೆ ಕಮಾಂಡಿನಲ್ಲಿ ವರಿಷ್ಠರಾಗಿರುವ ಅಧಿಕಾರಿ ಅಥವಾ ಪ್ರಾಧಿಕಾರಿಯು ಚಲಾಯಿಸಬಹುದು.

137. **ಭದ್ರತಾ ಪಡೆ ಸದಸ್ಯರಿಗೆ ಪ್ರದಾನ ಮಾಡಬಹುದಾದ ಅಧಿಕಾರಗಳು ಮತ್ತು ವಿಧಿಸಬಹುದಾದ ಕರ್ತವ್ಯಗಳು.–** (1) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧನೆಗಳಿಗೆ ಒಳಪಟ್ಟು, ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಯಾವ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಅಥವಾ ಕೆಳದರ್ಜೆಯ ಅಧಿಕಾರಿಯು ಸದರಿ ಉದ್ದೇಶಗಳಿಗಾಗಿ ಯಾವುದೇ ಕೇಂದ್ರ ಅಧಿನಿಯಮದ ಮೇರೆಗೆ ಚಲಾಯಿಸಲು ಅಥವಾ ನಿರ್ವಹಿಸಲು ಅಧಿಕಾರ ನೀಡಲಾಗಿದೆಯೋ ಆ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಭದ್ರತಾ ಪಡೆಯ ಯಾರೇ ಸದಸ್ಯನು ಸದರಿ ಅದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಯಾವುದೇ ಕೇಂದ್ರ ಅಧಿನಿಯಮದ ಮೇರೆಗೆ ಯಾವುವೇ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಭದ್ರತಾ ಪಡೆಯ ಯಾರೇ ಸದಸ್ಯನು ಚಲಾಯಿಸಬಹುದು ಅಥವಾ ನಿರ್ವಹಿಸಬಹುದೆಂದು ನಿರ್ದೇಶಿಸಬಹುದು.

(2) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಪ್ರಕಟಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಸಂಬಂಧಪಟ್ಟ ರಾಜ್ಯ ಸರ್ಕಾರದ ಸಮ್ಮತಿ ಪಡೆದು, ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಸಂವಾದಿ ಅಥವಾ ಹೆಚ್ಚಿನ ದರ್ಜೆಯನ್ನು ಹೊಂದಿರುವ ಭದ್ರತಾ ಪಡೆ ಸದಸ್ಯರಿಗೆ ರಾಜ್ಯ ಅಧಿನಿಯಮದ ಮೇರೆಗೆ ಪೊಲೀಸ್ ಅಧಿಕಾರಿಯು ಚಲಾಯಿಸಬಹುದಾದ ಅಥವಾ ನಿರ್ವಹಿಸಬಹುದಾದ ಯಾವುವೇ ಅಧಿಕಾರಗಳನ್ನು ಅಥವಾ ಕರ್ತವ್ಯಗಳನ್ನು ಪ್ರದಾನ ಮಾಡಬಹುದು ಅಥವಾ ವಿಧಿಸಬಹುದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ಆದೇಶದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಆದೇಶವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ಆದೇಶವು

ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ಆದೇಶದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**138. ಭದ್ರತಾ ಪಡೆ ಸದಸ್ಯರ ಕಾರ್ಯಗಳಿಗೆ ರಕ್ಷಣೆ.–** (1) ಸಕ್ಷಮ ಪ್ರಾಧಿಕಾರದ ವಾರಂಟಿಗೆ ಅಥವಾ ಆದೇಶಕ್ಕೆ ಅನುಸಾರವಾಗಿ ಭದ್ರತಾ ಪಡೆಯ ಯಾರೇ ಸದಸ್ಯನು ಮಾಡಿದ ಯಾವುದೇ ಕಾರ್ಯಕ್ಕಾಗಿ ಭದ್ರತಾ ಪಡೆಯ ಯಾರೇ ಸದಸ್ಯನ ವಿರುದ್ಧ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಹೂಡಿದ್ದಲ್ಲಿ, ಅಂಥ ವಾರಂಟಿನ ಅಥವಾ ಆದೇಶದ ಅಧಿಕಾರದ ಮೇರೆಗೆ ಆ ಕಾರ್ಯ ಮಾಡಿದ್ದೇನೆಂದು ವಾದಿಸುವುದು ಅವನಿಗೆ ಕಾನೂನುಬದ್ಧವಾಗಿರತಕ್ಕದ್ದು.

(2) ಯಾವುದೇ ಅಂಥ ವಾದವನ್ನು, ಆ ಕಾರ್ಯಕ್ಕಾಗಿ ನಿರ್ದೇಶಿಸಿದ್ದ ವಾರಂಟನ್ನು ಅಥವಾ ಆದೇಶವನ್ನು ಹಾಜರುಪಡಿಸುವುದರ ಮೂಲಕ ರುಜುವಾತುಪಡಿಸಬಹುದು ಮತ್ತು ಅದನ್ನು ಹಾಗೆ ರುಜುವಾತುಪಡಿಸಿದರೆ ಭದ್ರತಾ ಪಡೆ ಸದಸ್ಯನು ಅಂಥ ವಾರಂಟನ್ನು ಅಥವಾ ಆದೇಶವನ್ನು ಹೊರಡಿಸಿದ ಪ್ರಾಧಿಕಾರದ ಅಧಿಕಾರವ್ಯಾಪ್ತಿಯಲ್ಲಿ ಯಾವುದೇ ನ್ಯೂನ್ಯತೆ ಇದ್ದಾಗ್ಯೂ ಅವನು ಹಾಗೆ ಮಾಡಿದ ಕಾರ್ಯದ ಸಂಬಂಧದಲ್ಲಿ ಅವನನ್ನು ಹೊಣೆಗಾರಿಕೆಯಿಂದ ವಿಮೋಚನೆಗೊಳಿಸತಕ್ಕದ್ದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಅಥವಾ ಈ ಅಧಿನಿಯಮದ ಅಥವಾ ನಿಯಮಗಳ ಯಾವುದೇ ಉಪಬಂಧಗಳ ಅನುಸರಣೆಯಲ್ಲಿ ಅಥವಾ ಅದರ ಮೂಲಕ ಪ್ರದತ್ತವಾದ ಅಧಿಕಾರಗಳ ಮೇರೆಗೆ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಭದ್ರತಾ ಪಡೆಯ ಯಾರೇ ಸದಸ್ಯನ ವಿರುದ್ಧ ಕಾನೂನುಬದ್ಧವಾಗಿ ತರಬಹುದಾಗಿದ್ದಂಥ ಯಾವುದೇ ಕಾನೂನು ವ್ಯವಹರಣೆಯನ್ನು (ಅದು ಸಿವಿಲ್ ಆಗಿರಲಿ ಅಥವಾ ಕ್ರಿಮಿನಲ್ ಆಗಿರಲಿ) ಆ ಕಾರ್ಯವೆಸಗಿದ್ದಾನೆಂದು ದೂರುಕೊಟ್ಟ ನಂತರ ಮೂರು ತಿಂಗಳೊಳಗಾಗಿ ಪ್ರಾರಂಭಿಸತಕ್ಕದ್ದು ಮತ್ತು ಅನ್ಯಥಾ ಅಲ್ಲ ಮತ್ತು ಅಂಥ ವ್ಯವಹರಣೆಯ ಬಗ್ಗೆ ಲಿಖಿತ ನೋಟೀಸನ್ನು ಮತ್ತು ಅದರ ಕಾರಣವನ್ನು ಅಂಥ ವ್ಯವಹರಣೆಯು ಪ್ರಾರಂಭವಾಗುವುದಕ್ಕೆ ಕನಿಷ್ಠ ಒಂದು ತಿಂಗಳು ಮುಂಚೆ ಪ್ರತಿವಾದಿಗೆ ಅಥವಾ ಅವನ ಮೇಲಧಿಕಾರಿಗೆ ನೀಡತಕ್ಕದ್ದು.

**139. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ನೆರವೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) ಭದ್ರತಾ ಪಡೆಯನ್ನು ಯಾವ ರೀತಿಯಲ್ಲಿ ರಚಿಸತಕ್ಕದ್ದೋ ಆ ರೀತಿ ಮತ್ತು 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅದರ ಸದಸ್ಯರ ಸೇವಾ ಷರತ್ತುಗಳು;

(ಬಿ) ಯಾವ ಪುಸ್ತಕದ ಅಥವಾ ಪತ್ರದ ಅಥವಾ ಇತರೆ ದಸ್ತಾವೇಜಿನ ಬಗ್ಗೆ 12ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅದನ್ನು ತಿಳಿಸುವುದು ಅಥವಾ ಪ್ರಕಟಿಸುವುದನ್ನು ನಿರ್ಬಂಧಿಸಬಾರದೋ ಆ ಪುಸ್ತಕದ ಅಥವಾ ಪತ್ರದ ಅಥವಾ ಇತರ ದಸ್ತಾವೇಜಿನ ಸ್ವರೂಪ;

(ಸಿ) ಯಾವ ರಾಜಕೀಯ ಉದ್ದೇಶಗಳಿಗಾಗಿ ಈ ಅಧಿನಿಯಮಕ್ಕೊಳಪಟ್ಟ ವ್ಯಕ್ತಿಯು, 12ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಯಾವುದೇ ಸಭೆಯಲ್ಲಿ ಅಥವಾ ಪ್ರದರ್ಶನದಲ್ಲಿ ಭಾಗವಹಿಸತಕ್ಕದ್ದಲ್ಲವೋ ಅಥವಾ ಸಭೆಯನ್ನು ಉದ್ದೇಶಿಸಿ ಮಾತನಾಡತಕ್ಕದ್ದಲ್ಲವೋ ಆ ರಾಜಕೀಯ ಉದ್ದೇಶಗಳನ್ನು ಹೊರತುಪಡಿಸಿದ ಉದ್ದೇಶಗಳು;

(ಡಿ) ಯಾವ ಉದ್ದೇಶಗಳಿಗಾಗಿ ದಂಡನೆಯಾಗಿ 47ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸೇವೆಯನ್ನು ಮುಟ್ಟುಗೋಲು ಹಾಕಿಕೊಳ್ಳಬಹುದೋ ಆ ಉದ್ದೇಶಗಳು;

(ಇ) 53ನೇ ಪ್ರಕರಣದ ಮತ್ತು 54ನೇ ಪ್ರಕರಣದ (1) ಮತ್ತು (2)ನೇ ಉಪಪ್ರಕರಣಗಳ ಮೇರೆಗೆ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ರೀತಿ;

(ಎಫ್) 56ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ವ್ಯಕ್ತಿಯ ಅಧಿವಿಚಾರಣೆಯು ಇತ್ಯರ್ಥದಲ್ಲಿರುವಾಗ ಯಾವ ರೀತಿಯಲ್ಲಿ ಮತ್ತು ಯಾವ ಅವಧಿಗಾಗಿ ಈ ಅಧಿನಿಯಮಕ್ಕೊಳಪಟ್ಟ ಯಾರೇ ವ್ಯಕ್ತಿಯನ್ನು ಭದ್ರತಾ ಪಡೆ ಅಭಿರಕ್ಷೆಗೆ ತೆಗೆದುಕೊಳ್ಳಬಹುದೋ ಮತ್ತು ತಡೆಹಿಡಿದಿರಿಸಬಹುದೋ ಆ ರೀತಿ ಮತ್ತು ಅವಧಿ;

(ಜಿ) ವ್ಯಕ್ತಿಯ ಗೈರು ಹಾಜರಿಯ ಬಗ್ಗೆ ವಿಚಾರಣೆ ನಡೆಸುತ್ತಿರುವ ವಿಚಾರಣಾ ನ್ಯಾಯಾಲಯವು 60ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಮಾಣವನ್ನು ಅಥವಾ ದೃಢೀಕರಣವನ್ನು ಬೋಧಿಸುವ ರೀತಿ;

(ಹೆಚ್) 81ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸಾಮಾನ್ಯ ಭದ್ರತಾ ಪಡೆ ನ್ಯಾಯಾಲಯದ ಅಥವಾ ಭದ್ರತಾ ಪಡೆ ಲಘು ನ್ಯಾಯಾಲಯದ ಸದಸ್ಯರು ನಿವೃತ್ತಿ ಹೊಂದಿದ ಮೇಲೆ ಆ ಖಾಲಿ ಸ್ಥಾನವನ್ನು ಭರ್ತಿ ಮಾಡಬಹುದಾದ ರೀತಿ;

(ಐ) 82ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಭದ್ರತಾ ಪಡೆ ನ್ಯಾಯಾಲಯಗಳ ಸದಸ್ಯರಿಗೆ ಮತ್ತು ಜಡ್ಜ್ ಅಟಾರ್ನಿ, ಇತ್ಯಾದಿಯವರಿಗೆ ಪ್ರಮಾಣವನ್ನು ಅಥವಾ ದೃಢೀಕರಣವನ್ನು ಬೋಧಿಸುವ ರೀತಿ;

(ಜೆ) ಭದ್ರತಾ ಪಡೆ ನ್ಯಾಯಾಲಯದ ಮುಂದೆ ಸಾಕ್ಷ್ಯ ನೀಡುವ ವ್ಯಕ್ತಿಗೆ 82ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಮಾಣವನ್ನು ಅಥವಾ ದೃಢೀಕರಣವನ್ನು ಮಾಡಿಸುವ ರೀತಿ;

(ಕೆ) ಭದ್ರತಾ ಪಡೆ ನ್ಯಾಯಾಲಯವು ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸಿದಾಗ 95ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿಚಾರಣೆ ಮಾಡಬಹುದಾದ ರೀತಿ;

(ಎಲ್) ಆಪಾದಿತ ವ್ಯಕ್ತಿಯನ್ನು 96ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅಭಿರಕ್ಷೆಯಲ್ಲಿಡತಕ್ಕ ರೀತಿ;

(ಎಂ) ಯಾವ ಕಾರಾಗೃಹದಲ್ಲಿ 117ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಕಾರಾವಾಸದ ಶಿಕ್ಷೆಯಲ್ಲಿರುವ ವ್ಯಕ್ತಿಯನ್ನು ತಡೆಹಿಡಿದಿರಿಸಲಾಗುವುದೋ ಆ ಕಾರಾಗೃಹದ ಪ್ರಭಾರದಲ್ಲಿರುವ ಅಧಿಕಾರಿಗೆ ಕಳುಹಿಸತಕ್ಕ ವಾರಂಟಿನ ನಮೂನೆ.

(ಎನ್) 121ನೇ ಪ್ರಕರಣದ ಮೇರೆಗೆ ಸಿವಿಲ್ ಕಾರಾಗೃಹದಲ್ಲಿ ವ್ಯಕ್ತಿಯನ್ನು ತಡೆಹಿಡಿದಿರಿಸುವುದಕ್ಕಾಗಿ ವಾರಂಟನ್ನು ಕಳುಹಿಸಿಕೊಡುವ ವ್ಯಕ್ತಿ;

(ಓ) 135ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅದೇ ದರ್ಜೆಗೆ ಸೇರಿದ ವ್ಯಕ್ತಿಗಳ ಪರಸ್ಪರ ಜ್ಯೇಷ್ಠತೆಗೆ ಸಂಬಂಧಿಸಿದ ವಿಷಯಗಳು;

(ಪಿ) 7ನೇ ಪ್ರಕರಣ, 10ನೇ ಪ್ರಕರಣದ (2)ನೇ ಉಪಪ್ರಕರಣ, 12ನೇ ಪ್ರಕರಣದ (1)ನೇ ಉಪಪ್ರಕರಣದ, 77ನೇ ಪ್ರಕರಣದ, 97ನೇ ಪ್ರಕರಣದ, 111ನೇ ಪ್ರಕರಣದ, 113ನೇ ಪ್ರಕರಣದ (2)ನೇ ಉಪಪ್ರಕರಣದ, 117ನೇ ಪ್ರಕರಣದ (1), (2) ಮತ್ತು (4)ನೇ

ಉಪಪ್ರಕರಣಗಳ ಮತ್ತು 124ನೇ ಪ್ರಕರಣದ ಮೇರೆಗೆ ನಿಯಮಿಸಬೇಕಾದ ಪ್ರಾಧಿಕಾರಿಗಳು ಅಥವಾ ಅಧಿಕಾರಿಗಳು;

(ಕ್ಯೂ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಈ ಅಧಿನಿಯಮದಲ್ಲಿ ಯಾವ ವಿಷಯಕ್ಕೆ ಸಂಬಂಧಿಸಿದಂತೆ ಯಾವ ಉಪಬಂಧವನ್ನು ಮಾಡಿಲ್ಲವೋ ಅಥವಾ ಮಾಡಿರುವ ಉಪಬಂಧ ಸಾಕಷ್ಟಿಲ್ಲವೋ ಆ ಯಾವುದೇ ಇತರ ವಿಷಯ ಮತ್ತು ಅಧಿನಿಯಮದ ಸೂಕ್ತ ಜಾರಿಗಾಗಿ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಉಪಬಂಧಿಸುವುದು ಅವಶ್ಯವಾಗಿರುವ ಯಾವುದೇ ಇತರೆ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**140. ಈಗ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಭದ್ರತಾ ಪಡೆಗೆ ಸಂಬಂಧಿಸಿದ ಉಪಬಂಧಗಳು.–** ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಭದ್ರತಾ ಪಡೆಯನ್ನು ಈ ಅಧಿನಿಯಮದ ಮೇರೆಗೆ ರಚಿಸಲಾದ ಭದ್ರತಾ ಪಡೆ ಎಂಬುದಾಗಿ ಭಾವಿಸತಕ್ಕದ್ದು.

(2) ಈ ಅಧಿನಿಯಮದ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿರುವ ರಾಷ್ಟ್ರೀಯ ಭದ್ರತಾ ಪಡೆಯ ಸದಸ್ಯರನ್ನು ಈ ಅಧಿನಿಯಮದ ಮೇರೆಗೆ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

(3) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ರಾಷ್ಟ್ರೀಯ ಭದ್ರತಾ ಪಡೆಯ ರಚನೆಗೆ ಸಂಬಂಧಿಸಿದಂತೆ, ಯಾರೇ ವ್ಯಕ್ತಿಯನ್ನು ನೇಮಕ ಮಾಡುವ ಸಂಬಂಧದಲ್ಲಿ ಈ ಅಧಿನಿಯಮದ

ಪ್ರಾರಂಭಕ್ಕೆ ಮುಂಚೆ ಮಾಡಿದ ಯಾವುದೇ ಕಾರ್ಯವು ಅಥವಾ ಕೈಗೊಂಡ ಯಾವುದೇ ಕ್ರಮವು ಈ ಅಧಿನಿಯಮದ ಮೇರೆಗೆ ಅಂಥ ಕಾರ್ಯವನ್ನು ಮಾಡಿದ್ದರೆ ಅಥವಾ ಕ್ರಮವನ್ನು ಕೈಗೊಂಡಿದ್ದರೆ ಹೇಗೋ ಹಾಗೆ ಕಾನೂನಿನಲ್ಲಿ ಸಿಂಧುವಾಗತಕ್ಕದ್ದು ಮತ್ತು ಪರಿಣಾಮಕಾರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿರುವುದು ಯಾವುದೂ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ವ್ಯಕ್ತಿಯು ಮಾಡಿದ ಅಥವಾ ಮಾಡದೇ ಬಿಟ್ಟ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯನ್ನು ಯಾವುದೇ ಅಪರಾಧದ ತಪ್ಪಿತಸ್ಥನನ್ನಾಗಿ ಮಾಡತಕ್ಕದ್ದಲ್ಲ.

************